ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ



ಅಕ್ಟೋಬರ್ 29 ಭಾನುವಾರ 2023

ಸಂಪುಟ: 44 | ಸಂಚಿಕೆ: 193 | ಪುಟಗಳು: 12

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ/ಜಾಹೀರಾತಿಗಾಗಿ– ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.co

₹4

ಡಿ.ಕೆ.ಶಿವಕುಮಾರ್ 'ಮುಖ್ಯಮಂತ್ರಿ' ಮುನ್ನೆಲೆಗೆ!

'ಔತಣಕೂಟ' ತಂತ್ರಗಾರಿಕೆ

● ಕಾಂಗ್ರೆಸ್‌ನಲ್ಲಿ ಬಣ ರಾಜಕೀಯಕ್ಕೆ ಸದ್ದು ಗದ್ದಲವಿಲ್ಲದೆ ಚಾಲನೆ ● ನೀವೇ 5 ವರ್ಷ ಮುಖ್ಯಮಂತ್ರಿಯಾಗಿರಿ ಇಲ್ಲ ನಮ್ಮ ಸಮುದಾಯದ ನಾಯಕತ್ವದ ಮೊರೆ ಹೋಗುವುದಾಗಿ ಸಿದ್ದರಾಮಯ್ಯರಲ್ಲಿ ಸಚಿವರ ಒತ್ತಡ



ಬೆಂಗಳೂರು, ಅ.28(ಕೆಎಂಶಿ) – **ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಹಾಗೂ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಮುಖ್ಯಮಂತ್ರಿ ಆಗುವುದನ್ನು ತಪ್ಪಿಸಲು ಸರ್ಕಾರದ ಮಟ್ಟದಲ್ಲೇ ದೊಡ್ಡ ರಾಜಕೀಯ ತಂತ್ರಗಾರಿಕೆ ಆರಂಭವಾಗಿದೆ.**

ಕಳೆದ ವಿಧಾನಸಭಾ ಚುನಾವಣೆಯಲ್ಲಿ ಪ್ರಚಂಡ ಬಹುಮತದಿಂದ ಅಧಿಕಾರಕ್ಕೆ ಬಂದ ಕಾಂಗ್ರೆಸ್ ನಾಯಕನ ಆಯ್ಕೆ ವಿಚಾರದಲ್ಲಿ ಉಂಟಾಗಿದ್ದ ಗೊಂದಲವನ್ನು ಸಿದ್ದರಾಮಯ್ಯ ಮತ್ತು ಶಿವಕುಮಾರ್ ಪ್ರಸಕ್ತ ಅವಧಿಯನ್ನು ಸಮನಾಗಿ ಹಂಚಿಕೊಳ್ಳುವ ಎಐಸಿಸಿ ಸೂತ್ರಕ್ಕೆ ತಲೆಬಾಗಿದ್ದರು.

ಇದರಂತೆ ಸಿದ್ದರಾಮಯ್ಯ ಈಗಾಗಲೇ ಮುಖ್ಯಮಂತ್ರಿಯಾಗಿ 5 ತಿಂಗಳ ಆಡಳಿತ ಪೂರ್ಣಗೊಳಿಸಿದ್ದಾರೆ. ಅಷ್ಟೇ ಅಲ್ಲ, ಚುನಾವಣಾ ಸಂದರ್ಭದಲ್ಲಿ ನೀಡಿದ್ದ 5 ಗ್ಯಾರಂಟಿ ಭರವಸೆಗಳನ್ನು ಬಹುತೇಕ ಈಡೇರಿಸಿದ್ದಾರೆ.

ಇದರ ನಡುವೆ ಸಿದ್ದರಾಮಯ್ಯ ಅವರ ಅಧಿಕಾರದ ಅವಧಿಯನ್ನು ಮೊಟಕುಗೊಳಿಸಿ, ಶಿವಕುಮಾರ್ ಅವರನ್ನು ಮುಖ್ಯಮಂತ್ರಿ ಗಾದಿಗೆ ತರುವ ಯತ್ನ ಕಾಂಗ್ರೆಸ್ ಹೈಕಮಾಂಡ್ ಹಂತದಲ್ಲೇ ನಡೆದಿದ್ದರೆ, ಮತ್ತೊಂದೆಡೆ ಸೂತ್ರದಂತೆ ಡಿಕೆಶಿಗೆ ಅಧಿಕಾರ ದೊರಕದಂತೆ ಮಾಡಲು ಒಂದು ಬಣ ಟೊಂಕಕಟ್ಟಿ ನಿಂತಿದೆ.

ಕಳೆದ ಎರಡು ದಿನಗಳಿಂದ ಕೆಲ ಸಮುದಾಯದ ಸಚಿವರು, ಶಾಸಕರು ನಿರಂತರ ಔತಣಕೂಟ ಸಭೆಗಳನ್ನು ನಡೆಸಿ ಶಿವಕುಮಾರ್‌ಗೆ ಅಧಿಕಾರ ತಪ್ಪಿಸಲು ಭಾರೀ ಕಸರತ್ತು ನಡೆದಿದೆ. ಮೊದಲು ಸ್ಯಾಂಕಿಟ್ಯಾಂಕಿ ರಸ್ತೆಯಲ್ಲಿರುವ ಸಪ್ತ ಸಚಿವರ ವಸತಿಗೃಹದಲ್ಲಿರುವ ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೊಳಿ ನಿವಾಸ, ಆನಂತರ ಸಹಕಾರ ಸಚಿವ ರಾಜಣ್ಣ, ನಿನ್ನೆ ರಾತ್ರಿ ಗೃಹ ಸಚಿವ ಡಾ. ಜಿ. ಪರಮೇಶ್ವರ್ ಮನೆಯಲ್ಲಿ ಔತಣ ಕೂಟ ನಡೆದಿದ್ದು, ಎಲ್ಲಾ ಸಭೆಗಳಲ್ಲೂ ಮುಖ್ಯಮಂತ್ರಿ ಸಿದ್ದರಾಮಯ್ಯ ಭಾಗವಹಿಸಿ ಚರ್ಚೆಯಲ್ಲಿ ಪಾಲ್ಗೊಂಡಿದ್ದಾರೆ. ಸರಣಿ ಔತಣಕೂಟಕ್ಕೆ ಡಿ.ಕೆ.ಶಿವ ಕುಮಾರ್ ಅವರನ್ನು ದೂರ ಇಟ್ಟಿದ್ದಾರೆ. ಶಿವಕುಮಾರ್, ಅವರ ಸಹೋದರ ಹಾಗೂ ಸಂಸದ ಡಿ.ಕೆ. ಸುರೇಶ್ ಅವರು ಎಲ್ಲಾ ಇಲಾಖೆಗಳಲ್ಲಿ ಹಸ್ತಕ್ಷೇಪ ಮಾಡುತ್ತಿದ್ದಾರೆ. ಅಷ್ಟೇ ಅಲ್ಲ, ಅವರ ಆಪ್ತ ಸಚಿವ, ಶಾಸಕರ ● 9ನೇ ಪುಟಕ್ಕೆ

ಸರ್ಕಾರ ಬೀಳಿಸುವ ಬಿಜೆಪಿ ಷಡ್ಯಂತ್ರ ಫಲಿಸಲ್ಲ

■ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಖಡಕ್ ನುಡಿ
■ ಅಧಿಕಾರ ಹಂಚಿಕೆ ಬಗ್ಗೆ ನಮ್ಮವರು ಮಾತನಾಡಿದರೆ ಶಿಸ್ತು ಕ್ರಮ

ಬೆಂಗಳೂರು, ಅ.28(ಕೆಎಂಶಿ)–ಸರ್ಕಾರ ಬೀಳಿಸಲು ಬಿಜೆಪಿ ರೂಪಿಸುತ್ತಿರುವ ಷಡ್ಯಂತ್ರ ಫಲಿಸುವುದಿಲ್ಲ ಎಂದಿರುವ ಕೆಪಿಸಿಸಿ ಅಧ್ಯಕ್ಷ ಹಾಗೂ ಡಿಸಿಎಂ ಡಿ.ಕೆ. ಶಿವಕುಮಾರ್, ಅಧಿಕಾರ ಹಂಚಿಕೆಗೆ ಸಂಬಂಧಿಸಿದಂತೆ ನಮ್ಮವರು ಬಹಿರಂಗ ಹೇಳಿಕೆ ನೀಡಿದರೆ, ಅಂಥವರ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳುವುದಾಗಿ ಎಚ್ಚರಿಸಿದ್ದಾರೆ. ಹೈದರಾಬಾದ್‌ಗೆ ತೆರಳುವ ಮುನ್ನ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಬಿಜೆಪಿ ಷಡ್ಯಂತ್ರದ ಬಗ್ಗೆ ನಮಗೆ ಗೊತ್ತಿದೆ. ಇದರ ಹಿಂದೆ ದೊಡ್ಡ, ದೊಡ್ಡ ನಾಯಕರು ಇದ್ದಾರೆ. ಆದರೆ ಇದರಿಂದ ಏನೂ ಆಗುವುದಿಲ್ಲ ಎಂದು ತಿಳಿಸಿದರು. ಪಕ್ಷದ ಶಾಸಕರು ಯಾರೇ ಆಗಲಿ ಪಕ್ಷದ ಆಂತರಿಕ ವಿಚಾರ, ಸರ್ಕಾರ ಹಾಗೂ ಅಧಿಕಾರದ ಬಗ್ಗೆ ಮಾಧ್ಯಮಗಳ ಮುಂದೆ ಅನಗತ್ಯ ಹೇಳಿಕೆ ನೀಡಬಾರದು ಎಂದು ನಮ್ಮ ನಾಯಕರು, ಸಚಿವರು, ಶಾಸಕರಿಗೆ ಮನವಿ ಹಾಗೂ ಎಚ್ಚರಿಕೆ ನೀಡುತ್ತೇನೆ. ಇಷ್ಟರ ನಂತರವೂ ಹೇಳಿಕೆ ನೀಡಿದರೆ ವಿಧಿ ಇಲ್ಲದೆ ಅವರಿಗೆ ನೋಟೀಸ್ ನೀಡಬೇಕಾಗುತ್ತದೆ ಎಂದು ಎಚ್ಚರಿಕೆ ನೀಡಿದರು.



ನಾಡಿನ ಅಧಿದೇವತೆ ಶ್ರೀ ಚಾಮುಂಡೇಶ್ವರಿ ದೇವಿಯ ತೆಪ್ಪೋತ್ಸವ ಶನಿವಾರ ಸಂಜೆ ಶಾಸ್ತ್ರೋಕ್ತವಾಗಿ ನೆರವೇರಿತು.

ಚಾಮುಂಡಿಬೆಟ್ಟದ ದೇವಿಕೆರೆಯಲ್ಲಿ

ಸಾಂಪ್ರದಾಯಿಕ ಚಾಮುಂಡೇಶ್ವರಿ ತೆಪ್ಪೋತ್ಸವ


ಚಂದ್ರಗ್ರಹಣ ಹಿನ್ನೆಲೆಯಲ್ಲಿ ಮುಸ್ಸಂಜೆಯೇ ಶ್ರದ್ಧಾಭಕ್ತಿಯ ಧಾರ್ಮಿಕ ಕಾರ್ಯ

ಮೈಸೂರು, ಅ.28(ಎಂಕೆ)– ಚಾಮುಂಡಿಬೆಟ್ಟದ ದೇವಿಕೆರೆಯಲ್ಲಿ ನಾಡಿನ ಅಧಿದೇವತೆ ಶ್ರೀ ಚಾಮುಂಡೇಶ್ವರಿ ದೇವಿಯ ತೆಪ್ಪೋತ್ಸವ ಶನಿವಾರ ಸಂಜೆ ಶಾಸ್ತ್ರೋಕ್ತವಾಗಿ ನೆರವೇರಿತು.

ಚಂದ್ರಗ್ರಹಣದ ಹಿನ್ನೆಲೆಯಲ್ಲಿ ಪ್ರತಿ ವರ್ಷ ರಾತ್ರಿ ವೇಳೆ ನಡೆಸಲಾಗುತ್ತಿದ್ದ ಶ್ರೀ ಚಾಮುಂಡೇಶ್ವರಿ ತೆಪ್ಪೋತ್ಸವವನ್ನು ಈ ಬಾರಿ ಹಗಲಿನಲ್ಲಿಯೇ ಶ್ರದ್ಧಾಭಕ್ತಿಯಿಂದ ನೂರಾರು ಭಕ್ತರ ಸಮ್ಮುಖದಲ್ಲಿ ನಡೆಸಲಾಯಿತು. ಅರಮನೆಯಲ್ಲಿದ್ದ ಚಿನ್ನದ ಪಲ್ಲಕ್ಕಿಯನ್ನು ಸಂಜೆ 4 ಗಂಟೆ ವೇಳೆಗೆ ಚಾಮುಂಡಿಬೆಟ್ಟಕ್ಕೆ ತರಲಾಯಿತು. ಬಳಿಕ ಚಾಮುಂಡೇಶ್ವರಿ ದೇಗುಲದಲ್ಲಿರುವ ತಾಯಿ ಚಾಮುಂಡೇಶ್ವರಿಯ ಉತ್ಸವ ಮೂರ್ತಿಯನ್ನು ಚಿನ್ನದ ಪಲ್ಲಕ್ಕಿಯಲ್ಲಿ ಇರಿಸಿ, ದೇವಿಕೆರೆ ಆವರಣಕ್ಕೆ ತರಲಾಯಿತು. ಸಂಜೆ 5 ಗಂಟೆಯಿಂದ ನಾನಾ ಪೂಜಾ ಕೈಂಕರ್ಯದೊಂದಿಗೆ ವಿದ್ಯುತ್ ದೀಪಾಲಂಕೃತ ತೆಪ್ಪದಲ್ಲಿ ದೇವಿಯ ಉತ್ಸವ ಮೂರ್ತಿಯನ್ನು ಇರಿಸಿ, ಕೆರೆಯಲ್ಲಿ ಪೊಲೀಸ್ ಹಾಗೂ ಅಗ್ನಿಶಾಮಕ ಸಿಬ್ಬಂದಿಯ ಭದ್ರತೆಯೊಂದಿಗೆ ಮೂರು ಸುತ್ತು ತೆಪ್ಪೋತ್ಸವ ನಡೆಸಲಾಯಿತು.

ದೇವಿಕೆರೆಯಲ್ಲಿ ಚಾಮುಂಡೇಶ್ವರಿ ದೇವಿಯ ಉತ್ಸವ ಮೂರ್ತಿಯನ್ನು ಆರಾಧನೆ ಮಾಡಿದ ನೂರಾರು ಮಂದಿ ಈ ಅವಿಸ್ಮರಣೀಯ ಗಳಿಗೆಯನ್ನು ಕಣ್ತುಂಬಿಕೊಂಡರಲ್ಲದೆ ಫೋಟೋ ಕ್ಲಿಕ್ಕಿಸಿಕೊಂಡು ● 9ನೇ ಪುಟಕ್ಕೆ

ಚಂದ್ರ ಗ್ರಹಣ; ವಿಸ್ಮಯಕಾರಿ ದೃಶ್ಯ ಕಣ್ತುಂಬಿಕೊಂಡ ಆಸಕ್ತರು



ಮೈಸೂರು,ಅ.28(ಪಿಎಂ)– ಶನಿವಾರ ರಾತ್ರಿ ಸಂಭವಿಸಿದ ರಾಹುಗ್ರಸ್ತ ಚಂದ್ರಗ್ರಹಣವನ್ನು ಖಗೋಳ ಆಸಕ್ತರು ಕಣ್ತುಂಬಿಕೊಂಡರು. ಪ್ರಕೃತಿಯ ಅಪರೂಪದ ಈ ದೃಶ್ಯಾವಳಿಯನ್ನು ಆಸಕ್ತರು ಕೌತುಕದಿಂದ ವೀಕ್ಷಿಸಿ ಸಂಭ್ರಮಿಸಿದರು. ಬೆಂಗಳೂರಿನ ನೆಹರು ತಾರಾಲಯ ಸೇರಿದಂತೆ ಹಲವೆಡೆ ಗ್ರಹಣ ವೀಕ್ಷಣೆಗೆ ಪೂರ್ವ ಸಿದ್ಧತೆ ಮಾಡಿಕೊಳ್ಳಲಾಗಿತ್ತು. ಅದರಂತೆ ನಭೋಮಂಡಲದಲ್ಲಿ ನಡೆದ ಬೆಳಕು ಮತ್ತು ಕತ್ತಲಿನ ವಿಸ್ಮಯಕಾರಿ ದೃಶ್ಯವನ್ನು ಖಗೋಳ ಆಸಕ್ತರು ಕಣ್ತುಂಬಿಕೊಂಡರು. ಭಾರತದಲ್ಲಿ ಹೆಚ್ಚು ಕಡಿಮೆ ತಾಸಿಗೂ ಹೆಚ್ಚು ಕಾಲ ಗ್ರಹಣ ಗೋಚರಿಸಿತು. ಬರಿಗಣ್ಣಿನಿಂದಲೂ ಚಂದ್ರ ಗ್ರಹಣ ವೀಕ್ಷಿಸುವುದರಿಂದ ಯಾವುದೇ ಸಮಸ್ಯೆ ಇಲ್ಲ ಎಂದು ಖಗೋಳ ವಿಜ್ಞಾನಿಗಳು ಮುಂಗಡ ಮಾಹಿತಿ ನೀಡಿದ್ದರು. ಈ ಹಿನ್ನೆಲೆಯಲ್ಲಿ ಹಲವು ಆಸಕ್ತರು ಯಾವುದೇ ದೂರದರ್ಶಕ ಸಾಧನಗಳ ನೆರವು ಇಲ್ಲದೆಯೂ ವೀಕ್ಷಿಸಿ ವಿಸ್ಮಯಕಾರಿ ನೋಟವನ್ನು ಆನಂದಿಸಿದರು. ವರ್ಷದ ಎರಡನೇ ಮತ್ತು ಕೊನೆಯ ಚಂದ್ರ ಗ್ರಹಣಕ್ಕೆ ಕೋಟ್ಯಾಂತರ ಕಣ್ಣುಗಳು ಸಾಕ್ಷಿಯಾದವು.

ಕರ್ನಾಟಕದಲ್ಲಿ ಮಾತೃಭಾಷೆ ಶಿಕ್ಷಣ ಮಾಧ್ಯಮವಾಗಲು

ಸಹಕರಿಸುವಂತೆ ಪ್ರಧಾನಿಗೆ ಶ್ರೀನಿವಾಸಪ್ರಸಾದ್ ಮನವಿ



ಮೈಸೂರು, ಅ.28– ಕರ್ನಾಟಕದಲ್ಲಿ ಮಾತೃಭಾಷೆ ಅಥವಾ ರಾಜ್ಯಭಾಷೆಯನ್ನು ಶಿಕ್ಷಣ ಮಾಧ್ಯಮವಾಗಿ ಜಾರಿಗೊಳಿಸಬೇಕೆಂಬ ನಮ್ಮೆಲ್ಲರ ಆಶಯಕ್ಕೆ ಒತ್ತಾಸೆಯಾಗುವಂತೆ ಪ್ರಧಾನಿ ನರೇಂದ್ರ ಮೋದಿ ಅವರಿಗೆ ಚಾಮರಾಜನಗರ ಸಂಸದ ವಿ.ಶ್ರೀನಿವಾಸ ಪ್ರಸಾದ್ ಅವರು ಇತ್ತೀಚೆಗೆ ಪತ್ರದ ಮೂಲಕ ಮನವಿ ಮಾಡಿದ್ದಾರೆ.

ಒಂದರಿಂದ ಐದನೇ ತರಗತಿವರೆಗೆ ಮಾತೃಭಾಷೆ ಅಥವಾ ರಾಜ್ಯಭಾಷೆಯನ್ನು ಶಿಕ್ಷಣ ಮಾಧ್ಯಮವಾಗಿ ಜಾರಿಗೆ ತರುವ ಮಸೂದೆಯನ್ನು ಉಭಯ ಸದನದಲ್ಲಿ ಅಂಗೀಕರಿಸಲಾಗಿದ್ದು, ಇದಕ್ಕೆ ಬಿಜೆಪಿ ಸೇರಿದಂತೆ ಎಲ್ಲಾ ಪಕ್ಷಗಳೂ ಸಹಮತ ಸೂಚಿಸಿವೆ. ನಂತರ ಮಸೂದೆಗೆ ರಾಜ್ಯ ಪಾಲರ ಅಂಕಿತ ಪಡೆದು 2017ರಲ್ಲಿ ರಾಷ್ಟ್ರಪತಿಗಳಿಗೆ ರವಾನಿಸಲಾಗಿದೆ. ಆದರೆ ಅದನ್ನು ಶಿಫಾರಸ್ಸಿನೊಂದಿಗೆ ರಾಷ್ಟ್ರಪತಿಗಳಿಗೆ ಕಳುಹಿಸಬೇಕಾದ ಸಂಬಂಧ ಪಟ್ಟ ಕೇಂದ್ರದ ಇಲಾಖೆ ಈವರೆಗೂ ಆ ಕೆಲಸ ಮಾಡಿಲ್ಲ. ಅಲ್ಲದೆ ಸದರಿ ಮಸೂದೆಗೆ ಸಂಬಂಧಿಸಿದಂತೆ ಕೇಂದ್ರ ಶಿಕ್ಷಣ ಇಲಾಖೆ ಪದೇ ಪದೆ ಅನಗತ್ಯ ಹಾಗೂ ಅಸಮಂಜಸ ಆಕ್ಷೇಪಗಳನ್ನು ಪತ್ರದ ಮೂಲಕ ರಾಜ್ಯ ಸರ್ಕಾರಕ್ಕೆ ಸಲ್ಲಿಸಿದೆ. ಪತ್ರಗಳಿಗೆ ಉತ್ತರಿಸಿಲ್ಲವೆಂಬ ನೆಪ ಹೇಳಿ ಮಸೂದೆಯನ್ನೇ ಹಿಂಪಡೆಯಬೇಕೆಂದು 2020ರಲ್ಲಿ ಸೂಚಿಸಿದೆ. ಇದರ ಆಧಾರ ದಲ್ಲಿ ಪತ್ರಿಕೆಯೊಂದರಲ್ಲಿ ವರದಿ ಪ್ರಕಟವಾಗಿದ್ದು, ಅದು ಮಸೂದೆ ಹಿಂಪಡೆಯಲು ಕೇಂದ್ರ ಸರ್ಕಾರ ಒತ್ತಡ ಹೇರುತ್ತಿದೆ ಎನ್ನುವ ಭಾವನೆ ಹುಟ್ಟಿಸುತ್ತದೆ. ಆದರೆ ಇದು ಕೇಂದ್ರ ಸರ್ಕಾರದ ನಿಲುವಾಗಿರಲು ಸಾಧ್ಯವಿಲ್ಲ.

ಇಂಗ್ಲಿಷ್ ಶಾಲೆಗಳ ಹಿತಾಸಕ್ತಿಗಳ ಪರವಾಗಿರುವ ಅಧಿಕಾರಶಾಹಿಯ ಕುತಂತ್ರ ಎನ್ನುವುದು ನನ್ನ ಭಾವನೆ. ನೀವು ಮಾತೃಭಾಷಾ ಮಾಧ್ಯಮದ ಪ್ರಬಲ ಪ್ರತಿಪಾದಕರೆಂಬುದು ನನಗೆ ತಿಳಿದಿದೆ. ಹಾಗಾಗಿ ಈ ಸಂಬಂಧ ತಮ್ಮ ಸಚಿವಾಲಯದ ಮೂಲಕ ಕೇಂದ್ರ ಶಿಕ್ಷಣ ಇಲಾಖೆಗೆ ಆಕ್ಷೇಪಗಳನ್ನು ಹಿಂತೆಗೆದುಕೊಂಡು ಮಸೂದೆ ಅಂಗೀಕರಿಸಲು ರಾಷ್ಟ್ರಪತಿಗಳಿಗೆ ಶಿಫಾರಸು ಮಾಡುವಂತೆ ಆದೇಶ ನೀಡಬೇಕು. ಮಾತೃಭಾಷೆ ಶಿಕ್ಷಣ ಮಾಧ್ಯಮ ಆಗಬೇಕೆಂಬ ನಮ್ಮೆಲ್ಲರ ಆಶಯಗಳಿಗೆ ಒತ್ತಾಸೆಯಾಗಬೇಕು ಎಂದು ಪತ್ರದಲ್ಲಿ ಪ್ರಸಾದ್ ಕೋರಿದ್ದಾರೆ.

ರೈಲ್ವೆ ಪ್ರಸ್ತಾವನೆಯಲ್ಲೂ ಇಂಡಿಯಾ ಬದಲು 'ಭಾರತ'

ನವದೆಹಲಿ: ಇಂಡಿಯಾ ಎಂಬ ಹೆಸರನು 'ಭಾರತ' ಎಂದು ಬದಲಾಯಿಸಲಾಗುತ್ತದೆ ಎಂಬ ಚರ್ಚೆಗಳ ನಡುವೆಯೇ ಹೊಸ ಬೆಳವಣಿಗೆಯೊಂದು ನಡೆದಿದೆ. ರೈಲ್ವೇ ಸಚಿವಾಲಯವು ಕೇಂದ್ರ ಸಂಪುಟಕ್ಕೆ ಕಳುಹಿಸಿರುವ ಯೋಜನೆಯ ಪ್ರಸ್ತಾವನೆಯೊಂದರಲ್ಲಿ ಇಂಡಿಯಾ ಎಂದು ಮುದ್ರಿಸಬೇಕಾದಲ್ಲೆಲ್ಲ, 'ಭಾರತ' ಎಂದು ಉಲ್ಲೇಖಿಸಿ ಕಳುಹಿಸಿದೆ. ಹೀಗಾಗಿ ಹೆಸರು ಬದಲಾವಣೆ ವಿಚಾರ ಮತ್ತೆ ಮುನ್ನೆಲೆಗೆ ಬಂದಿದೆ. ಸೆಪ್ಟೆಂಬರ್‌ನಲ್ಲಿ ನವದೆಹಲಿಯಲ್ಲಿ ನಡೆದಿದ್ದ ಜಿ20 ಸಮ್ಮೇಳನದ ವೇಳೆ ವಿದೇಶಿ ಗಣ್ಯರಿಗೆ ರಾಷ್ಟ್ರಪತಿ ದ್ರೌಪದಿ ಮುರ್ಮು ನೀಡಿದ್ದ ಔತಣಕೂಟದ ಆಹ್ವಾನದಲ್ಲಿ 'ಪ್ರೆಸಿಡೆಂಟ್ ಆಫ್ ಭಾರತ್' ಎಂದು ಮುದ್ರಿಸಲಾಗಿತ್ತು. ಇತ್ತೀಚೆಗೆ ರಾಷ್ಟ್ರೀಯ ಶೈಕ್ಷಣಿಕ ಸಂಶೋಧನೆ ಮತ್ತು ತರಬೇತಿ ಮಂಡಳಿ (ಎನ್‌ಸಿಇಆರ್‌ಟಿ) ಎಲ್ಲಾ ಪಠ್ಯಪುಸ್ತಕಗಳಲ್ಲಿ ಇಂಡಿಯಾ ಬದಲು 'ಭಾರತ' ಎಂದು ಬದಲಾಯಿಸುವಂತೆ ಸಲಹೆ ನೀಡಿತ್ತು. ಕೇಂದ್ರ ಸರ್ಕಾರ ದೇಶದ ಹೆಸರು ಬದಲಾವಣೆ ಮಾಡುವ ಬಗ್ಗೆ ಪ್ರಯತ್ನ ನಡೆಸುತ್ತಿದೆ ಎಂದು ಪ್ರತಿಪಕ್ಷಗಳು ಆಕ್ರೋಶ ವ್ಯಕ್ತಪಡಿಸಿದ್ದವು. ಆದರೆ, ಇದಕ್ಕೆಲ್ಲ ಸೊಪ್ಪು ಹಾಕದ ಕೇಂದ್ರ ಸರ್ಕಾರ ಮುಂದಿನ ದಿನಗಳಲ್ಲಿ ಪ್ರಕಟವಾಗುವ ಸರ್ಕಾರಿ ದಾಖಲೆಗಳಲ್ಲಿ, 'ಭಾರತ' ಎಂದು ಬಳಕೆ ಮಾಡಲಾಗುತ್ತದೆ ಎಂದು ತಿಳಿಸಿತ್ತು.



ಮೈಸೂರಿನಲ್ಲಿ ಅದ್ಧೂರಿಯಾಗಿ ನೆರವೇರಿದ 'ರಾಮಾಯಣ' ಮಹಾಕಾವ್ಯ ಕರ್ತೃ

ಮಹರ್ಷಿ ವಾಲ್ಮೀಕಿ ಜಯಂತ್ಯುತ್ಸವ

ನಾಯಕ ಸಮುದಾಯದ ಪರ್ಯಾಯ ಪದ ಪರಿಶಿಷ್ಟ ಪಂಗಡಕ್ಕೆ ಸೇರಿಸಲು ಶೀಘ್ರವೇ ಕ್ರಮ: ಸಮಾಜ ಕಲ್ಯಾಣ ಸಚಿವ ಡಾ.ಮಹದೇವಪ್ಪ ಭರವಸೆ

● ವಾಲ್ಮೀಕಿ ರಾಮಾಯಣಕ್ಕೆ ಸರಿಸಾಟಿಯಾದ ಮಹಾಕಾವ್ಯ ಮತ್ತೊಂದಿಲ್ಲ
● ಜೀವನದ ಮೌಲ್ಯ ಸಾರಿದ ಮಹರ್ಷಿ ವಾಲ್ಮೀಕಿ; ಜ್ಞಾನ ಯಾರ ಸ್ವತ್ತಲ್ಲ

ಮೈಸೂರು, ಅ.28(ಬಿಎಲ್‌ಯು)– ಹಿಂದುಳಿದ ವರ್ಗದ ಪಟ್ಟಿಯಲ್ಲಿರುವ ನಾಯಕ ಸಮುದಾಯದ ಪರ್ಯಾಯ ಪದಗಳನ್ನು ಪರಿಶಿಷ್ಟ ಪಂಗಡಕ್ಕೆ ಸೇರಿಸಲು ಸರ್ಕಾರ ಶೀಘ್ರದಲ್ಲೇ ಕ್ರಮ ಕೈಗೊಳ್ಳಲಿದೆ ಎಂದು ಸಮಾಜ ಕಲ್ಯಾಣ ಸಚಿವ ಡಾ. ಹೆಚ್.ಸಿ.ಮಹದೇವಪ್ಪ ಭರವಸೆ ನೀಡಿದರು.

ಮೈಸೂರಿನ ಕಲಾಮಂದಿರದಲ್ಲಿ ಶನಿವಾರ ಜಿಲ್ಲಾಡಳಿತ ಆಯೋಜಿಸಿದ್ದ ಶ್ರೀ ಮಹರ್ಷಿ ವಾಲ್ಮೀಕಿ ಜಯಂತ್ಯುತ್ಸವ ಸಮಾರಂಭ ಉದ್ಘಾಟಿಸಿ ಮಾತನಾಡಿದ ಅವರು, ಈ ವಿಚಾರವಾಗಿ ಶೀಘ್ರದಲ್ಲೇ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಜೊತೆ ಚರ್ಚೆ ಮಾಡುತ್ತೇನೆ ಎಂದು ತಿಳಿಸಿದರು. ನಾಯಕ ಸಮುದಾಯದ ಪರ್ಯಾಯ ಪದಗಳು ಒಂದೇ ಆಗಿದ್ದು, ಇವುಗಳನ್ನು ಪರಿಶಿಷ್ಟ ಪಂಗಡಕ್ಕೆ ಸೇರಿಸಲಾಗುವುದು. ಈ ಮೂಲಕ ಈಗಿರುವ ನ್ಯೂನತೆ ಸರಿಪಡಿಸಲಾಗುವುದು ಎಂದು ಭರವಸೆ ನೀಡಿದರು. ನಾಯಕ ಸಮುದಾಯವನ್ನು ಪರಿಶಿಷ್ಟ ಪಂಗಡಕ್ಕೆ ಸೇರಿಸಲು ದಶಕಗಳ ಹೋರಾಟ ನಡೆದಿತ್ತು. ನಮ್ಮ ಸರ್ಕಾರದ ಅವಧಿಯಲ್ಲಿ ಈ ಸಂಬಂಧ ಕ್ಯಾಬಿನೆಟ್‌ನಲ್ಲಿ ತೀರ್ಮಾನ ಕೈಗೊಂಡು ಕೇಂದ್ರ ಸರ್ಕಾರಕ್ಕೆ ಶಿಫಾರಸ್ಸು ಮಾಡಲಾಗಿತ್ತು. ಹಿಂದಿನ ಪ್ರಧಾನಮಂತ್ರಿ ಚಂದ್ರಶೇಖರ್ ಸರ್ಕಾರ ನಾಯಕ ಸಮುದಾಯವನ್ನು ಪರಿಶಿಷ್ಟ ಪಂಗಡಕ್ಕೆ ಸೇರಿಸಿತ್ತು. ಈಗ ಪರ್ಯಾಯ ಪದಗಳಲ್ಲಿ ಗೊಂದಲ ಇದ್ದು, ಶೀಘ್ರದಲ್ಲೇ ಸರಿಪಡಿಸಲಾಗುವುದು ಎಂದು ಡಾ.ಮಹದೇವಪ್ಪ ಅಭಯ ನೀಡಿದರು. ಜಾತಿ ವ್ಯವಸ್ಥೆ ಇಲ್ಲದಾಗ 3ನೇ ಶತಮಾನದಲ್ಲಿದ್ದ ಮಹರ್ಷಿ ವಾಲ್ಮೀಕಿ ಅವರು ಸುಸಂಸ್ಕೃತ ಹಾಗೂ ಮೌಲ್ಯಗಳಿರುವ ರಾಮಾಯಣ ಮಹಾಕಾವ್ಯ ರಚಿಸಿದರು. ಇದು ವಿಶ್ವದ ಮೊದಲ ಮಹಾಕಾವ್ಯವಾಯಿತು. ಇದಾದ ಮೇಲೆ ಬಹಳಷ್ಟು ಕಾವ್ಯಗಳು ರಚನೆಗೊಂಡವು. ಆದರೆ ಮಹರ್ಷಿ ವಾಲ್ಮೀಕಿ ಅವರ ರಾಮಾಯಣಕ್ಕೆ ಸರಿಸಾಟಿಯಾದ ಯಾವ ಕಾವ್ಯಗಳು ಇದೂವರೆಗೆ ರಚನೆಯಾಗಲಿಲ್ಲ ಎಂದು ಹೇಳಿದರು.

ಬೆಟ್ಟ ಗುಡ್ಡ ಅಲೆಯುತ್ತಾ, ಬೇಟೆಯಾಡುತ್ತಾ ವಿದ್ಯಾರ್ಜನೆ ಮಾಡಿ ಮಹರ್ಷಿ ವಾಲ್ಮೀಕಿ ಅವರು ರಾಮಾಯಣ ಮಹಾಕಾವ್ಯ ರಚನೆ ಮಾಡಿದರು. ಇದು ನಾಯಕ ಸಮುದಾಯ ಮಾತ್ರವಲ್ಲದೆ ವಿಶ್ವದ ಎಲ್ಲಾ ಸಮುದಾಯ ಹೆಮ್ಮೆಪಡುವ ವಿಚಾರ ಎಂದು ಪ್ರತಿಪಾದಿಸಿದರು. ರಾಮ, ಸೀತೆ, ಲಕ್ಷ್ಮಣ, ರಾವಣ ಸೇರಿದಂತೆ ಹಲವು ಪಾತ್ರಗಳ ವಿಶ್ಲೇಷಣೆ ಮಾಡಿದ ಮಹರ್ಷಿ ವಾಲ್ಮೀಕಿ ಅವರು, ತಮ್ಮ ಮಹಾಕಾವ್ಯದಲ್ಲಿ ಆಡಳಿತ, ಪ್ರೀತಿ, ತ್ಯಾಗ, ನಾಯಕತ್ವ ಪಿತೃವಾಕ್ಯ ಪರಿಪಾಲನೆ, ನುಡಿದಂತೆ ನಡೆಯುವ ಆದರ್ಶ ಗುಣ, ದುಷ್ಟ ಸಂಹಾರ, ಶಿಷ್ಟರ ರಕ್ಷಣೆ ಸೇರಿದಂತೆ ● 6ನೇ ಪುಟಕ್ಕೆ



ಮೈಸೂರಿನ ಕಲಾಮಂದಿರದಲ್ಲಿ ಶನಿವಾರ ನಡೆದ ವೇದಿಕೆ ಕಾರ್ಯಕ್ರಮದಲ್ಲಿ ಮಹರ್ಷಿ ವಾಲ್ಮೀಕಿ ಅವರ ಪ್ರತಿಮೆಗೆ ಮೈಸೂರು ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ, ಶಾಸಕರಾದ ಜಿ.ಟಿ.ದೇವೇಗೌಡ, ಕೆ.ಹರೀಶ್‌ಗೌಡ, ಶ್ರೀವತ್ಸ, ವಿಧಾನಪರಿಷತ್ ಸದಸ್ಯರಾದ ಸಿ.ಎನ್.ಮಂಜೇಗೌಡ, ಡಾ.ತಿಮ್ಮಯ್ಯ, ಮೇಯರ್ ಶಿವಕುಮಾರ್, ಜಿಲ್ಲಾಧಿಕಾರಿ ಡಾ. ಕೆ.ವಿ.ರಾಜೇಂದ್ರ ಇನ್ನಿತರರು ಪುಷ್ಪಾರ್ಚನೆ ಮಾಡುವ ಮೂಲಕ ಗೌರವ ಸಮರ್ಪಣೆ ಮಾಡಿದರು.

ವರ್ಣರಂಜಿತ ಮೆರವಣಿಗೆ

ಮೈಸೂರಿನಲ್ಲಿ ಶ್ರೀ ಮಹರ್ಷಿ ವಾಲ್ಮೀಕಿ ಜಯಂತ್ಯುತ್ಸವದ ಅಂಗವಾಗಿ ಅದ್ಧೂರಿ ಮೆರವಣಿಗೆ ನಡೆಯಿತು. ಮೈಸೂರು ಅರಮನೆಯ ಆಂಜನೇಯಸ್ವಾಮಿ ದೇವಸ್ಥಾನದ ಮುಂದೆ ಶಾಸಕ ಜಿ.ಟಿ.ದೇವೇಗೌಡರು ಮೆರವಣಿಗೆಗೆ ಚಾಲನೆ ನೀಡಿದರು. ಪೂಜಾ ಕುಣಿತ, ಪಟ್ಟದ ಕುಣಿತ, ನಂದಿ ಧ್ವಜ, ನಗಾರಿ, ಕಂಸಾಳೆ, ತಮಟೆ ಸೇರಿದಂತೆ ಹಲವು ಜಾನಪದ ಪ್ರಕಾರಗಳ ಕಲಾ ತಂಡಗಳು ಮೆರವಣಿಗೆಗೆ ಮೆರುಗು ನೀಡಿದವು. ಮಹರ್ಷಿ ವಾಲ್ಮೀಕಿ ಅವರ ಭಾವಚಿತ್ರವಿರುವ ಸ್ತಬ್ಧಚಿತ್ರ ಹಾಗೂ ಮಹರ್ಷಿ ವಾಲ್ಮೀಕಿ ಅವರ ಪ್ರತಿಮೆ ಇರುವ ರಥ ಅತ್ಯಾಕರ್ಷಕವಾಗಿತ್ತು. ಸ್ತಬ್ಧಚಿತ್ರದಲ್ಲಿ ಮೈಸೂರು ಮೂಲ ನಿವಾಸಿ ದೊರೆ ನಾಡಪ್ರಭು ಕಾರ್ಗಳ್ಳಿ ಮಾರನಾಯಕ ಹೆಸರಿನ ಭಾವಚಿತ್ರವನ್ನು ಚಿತ್ರಿಸಲಾಗಿತ್ತು.

ವನಿತೆಯರ ಪೂರ್ಣಕುಂಭದೊಂದಿಗೆ ಅರಮನೆ ಬಲರಾಮ ದ್ವಾರದಿಂದ ಆರಂಭವಾದ ಮೆರವಣಿಗೆ ಚಾಮರಾಜೇಂದ್ರ ಒಡೆಯರ್ ವೃತ್ತ, ಆಲ್ಬರ್ಟ್ ವಿಕ್ಟರ್ ರಸ್ತೆ, ಕೆ.ಆರ್.ವೃತ್ತ, ಡಿ.ದೇವರಾಜ ಅರಸ್ ರಸ್ತೆ, ಜೆಎಲ್‌ಬಿ ರಸ್ತೆ, ವಿನೋಬಾ ರಸ್ತೆ ಮೂಲಕ ಕಲಾಮಂದಿರ ತಲುಪಿತು. ಹತ್ತಾರು ಸಾರೋಟಗಳೊಂದಿಗೆ ಸಾಗಿದ ಮೆರವಣಿಗೆ ಮಿನಿ ಜಂಬೂ ಸವಾರಿಯಂತಿತ್ತು ಎಂದು ಜಿಲ್ಲಾಧಿಕಾರಿ ಡಾ.ಕೆ.ವಿ. ರಾಜೇಂದ್ರ ಅವರೇ ಬಣ್ಣಿಸಿದರು.

ಪರಿಶಿಷ್ಟ ಪಂಗಡದ ಕಲ್ಯಾಣ ಕಾರ್ಯ ಜಾರಿಗೆ ಪ್ರತ್ಯೇಕ ಸಚಿವಾಲಯ ಸ್ಥಾಪನೆ

■ ಮುಖ್ಯಮಂತ್ರಿ ಸಿದ್ದರಾಮಯ್ಯ ಘೋಷಣೆ
■ ವಿಧಾನಸೌಧದಲ್ಲಿ ವಾಲ್ಮೀಕಿ ಜಯಂತಿ



ಬೆಂಗಳೂರು, ಅ.28(ಕೆಎಂಶಿ) – ಪರಿಶಿಷ್ಟ ಪಂಗಡಗಳ ಕಲ್ಯಾಣ ಕಾರ್ಯಕ್ರಮಗಳ ಅನುಷ್ಠಾನಕ್ಕಾಗಿ ಪ್ರತ್ಯೇಕ ಸಚಿವಾಲಯವನು ಸ್ಥಾಪಿಸಲು ಸರ್ಕಾರ ತೀರ್ಮಾನಿಸಿರುವುದಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

ವಿಧಾನಸೌಧದ ಬ್ಯಾಂಕ್ವೆಟ್ ಸಭಾಂಗಣದಲ್ಲಿ ಆಯೋಜಿಸಿದ್ದ ಮಹರ್ಷಿ ವಾಲ್ಮೀಕಿ ಜಯಂತಿ ಕಾರ್ಯಕ್ರಮವನ್ನು ಉದ್ಘಾಟಿಸಿ, ಮಹರ್ಷಿ ವಾಲ್ಮೀಕಿ ಪ್ರಶಸ್ತಿಗಳನ್ನು ಪ್ರದಾನ ಮಾಡಿ ಅವರು ಮಾತನಾಡಿದರು. ನಮ್ಮ ಹಿಂದಿನ ಸರ್ಕಾರದ ಅವಧಿಯಲ್ಲಿ ಬೆಳಗಾವಿಯ ಅಧಿವೇಶನದಲ್ಲಿ ಪರಿಶಿಷ್ಟ ಜಾತಿ ಹಾಗೂ ವರ್ಗಗಳಿಗೆ ಅವರ ಜನಸಂಖ್ಯೆಗೆ ಅನುಗುಣವಾಗಿ ಅನುದಾನವನ್ನು ಮೀಸಲಿಡುವ ತೀರ್ಮಾನವನ್ನು ಕೈಗೊಳ್ಳಲಾಯಿತು.

ಆದ ಕಾರಣ ಎಸ್‌ಸಿ, ಎಸ್‌ಟಿ ಹಾಗೂ ಟಿಎಸ್‌ಪಿ ಯೋಜನೆಯಡಿ ಹೆಚ್ಚು ಅನುದಾನ ಖರ್ಚು ಮಾಡಲು ಸಾಧ್ಯವಾಯಿತು. ಮೊದಲು ಈ ಯೋಜನೆಗಳಡಿ ಕೇವಲ 6 ಸಾವಿರ ಕೋಟಿ ಅನುದಾನ ಮೀಸಲಿಡಲಾಗುತ್ತಿತ್ತು. ಆದರೆ ಹಿಂದಿನ ನಮ್ಮ ಸರ್ಕಾರದ ಅವಧಿಯಲ್ಲಿ ಈ ಮೊತ್ತವನ್ನು 6 ಸಾವಿರದಿಂದ 30 ಸಾವಿರ ಕೋಟಿಗೂ ಹೆಚ್ಚಿಗೆ ● 9ನೇ ಪುಟಕ್ಕೆ

ಚುಟುಕು ಸಾಹಿತ್ಯ ಮಹತ್ತರ ಸಂದೇಶ ಸಾರಬಲ್ಲದು...

ಕವಯತ್ರಿ ಡಾ. ಲತಾ ರಾಜಶೇಖರ್ ಅಭಿಮತ



ಮೈಸೂರು, ಅ.28(ಜಿಎ)–ಚುಟುಕು ಕವಿಗಳೆಂದರೆ ಸಣ್ಣ ಕವಿಗಳಂತೆ ಎಂಬ ಭಾವನೆ ಬೇಡ. ಚುಟುಕು ಕವಿ ಹಾಗೂ ಕವಿಗಳಿಗೆ ಅವರದೇ ಆದ ಮಹತ್ವ ಇದೆ. ಚುಟುಕುಗಳಿಗೆ ಪರಂಪರೆ ಮತ್ತು ಮಹತ್ವ ಇದೆ ಎಂದು ಕವಯತ್ರಿ ಡಾ.ಲತಾ ರಾಜಶೇಖರ್ ತಿಳಿಸಿದರು.

ಮೈಸೂರು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಮಹಿಳಾ ಘಟಕ ಮತ್ತು ಚುಟುಕು ಸಾಹಿತ್ಯ ಪರಿಷತ್ ವತಿಯಿಂದ ವಿಜಯ ನಗರದ ಕನ್ನಡ ಸಾಹಿತ್ಯ ಪರಿಷತ್ ಭವನದಲ್ಲಿ ಶನಿವಾರ ಆಯೋಜಿಸಿದ್ದ ದಸರಾ ಚುಟುಕು ಕವಿಗೋಷ್ಠಿಯನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಚುಟುಕು ಕಾವ್ಯ ಆಕಾರದಲ್ಲಿ ಚಿಕ್ಕದಾಗಿದ್ದರೂ ಸತ್ವದಲ್ಲಿ ಅದು ಚಿಕ್ಕದಲ್ಲ. ಮಹತ್ತರ ಸಂದೇಶಗಳನ್ನು ಸಾರುತ್ತದೆ. ಬೇರೆ ಬೇರೆ ಕಾಲದಲ್ಲಿ ಬೇರೆ ರೀತಿಯಲ್ಲಿ ಕರೆಯಲಾಗಿದೆ. ಗಝಲ್, ಮುಕ್ತಕಗಳು, ಶಾಹಿರ್ ಇದೆಲ್ಲ ಚುಟುಕಿನ ಬೇರೆ ಬೇರೆ ಹೆಸರುಗಳು ಎಂದರು.

ಚುಟುಕುಗಳು ತಮ್ಮದೇ ಬೆಳಕನ್ನು ಪಸರಿಸುತ್ತಿವೆ. ಕ್ಷಣಾರ್ಧದಲ್ಲಿ ರಚಿಸಿದರು ಅರ್ಥ ಗರ್ಭಿತವಾಗಿರುತ್ತವೆ. ಕುವೆಂಪು ಸೇರಿದಂತೆ ಅನೇಕ ಮಹಾ ಕವಿಗಳು ಚುಟುಕು ಸಾಹಿತ್ಯದ ಮಹತ್ವ ಸಾರಿದ್ದಾರೆ. ಚುಟುಕು ಮಹತ್ವ ಹಾಗೂ ಉನ್ನತ ಸ್ಥಾನವನ್ನು ಅಲಂಕರಿಸಿದೆ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಕಸಾಪ ಜಿಲ್ಲಾಧ್ಯಕ್ಷ ಮಡ್ಡಿಕೆರೆ ಗೋಪಾಲ್, ಮೈಸೂರು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಮಹಿಳಾ ಘಟಕದ ಅಧ್ಯಕ್ಷೆ ಡಾ.ರತ್ನ ಹಾಲಪ್ಪಗೌಡ, ಚುಟುಕು ಸಾಹಿತ್ಯ ಪರಿಷತ್ ಕೇಂದ್ರ ಸಮಿತಿ ಸಂಸ್ಥಾಪಕ ಎಂ.ಜಿ.ಆರ್.ಅರಸ್, ಧರ್ಮದರ್ಶಿ ವೀರಭದ್ರೇಗೌಡ, ಬೆಂಗಳೂರಿನ ಚುಟುಕು ಸಾಹಿತ್ಯ ಪರಿಷತ್‌ನ ಅಧ್ಯಕ್ಷ ವಿಜಯಸಮರ್ಥ್, ಎಂ.ಎ.ಸುಜಾತ ಸ್ವಾಮಿ ಮತ್ತಿತರರು ಉಪಸ್ಥಿತರಿದ್ದರು.

ದೇಶಾದ್ಯಂತ 10ನೇ ರೋಜ್ಗಾರ್ ಮೇಳ

ಮೈಸೂರಲ್ಲಿ 185 ಮಂದಿಗೆ ನೇಮಕಾತಿ ಪತ್ರ ವಿತರಣೆ

ಪ್ರಧಾನಿ ಮೋದಿ ಅವರಿಂದ ವಿಡಿಯೋ ಕಾನ್ಫರೆನ್ಸ್ ಮೂಲಕ 51,000ಕ್ಕೂ ಅಧಿಕ ಜನರಿಗೆ ನೇಮಕಾತಿ ಪತ್ರ ಹಸ್ತಾಂತರ



ಮೈಸೂರು, ಅ.28(ಆರ್‌ಕೆ)–ಮೈಸೂರಿನ ಅಖಿಲ ಭಾರತ ವಾಕ್ ಮತ್ತು ಶ್ರವಣ ಸಂಸ್ಥೆ (AIISH)ಯ ನಾಲೆಡ್ಜ್ ಪಾರ್ಕ್ ಸಭಾಂಗಣದಲ್ಲಿ ಶನಿವಾರ ಆಯೋಜಿಸಿದ್ದ 10ನೇ ರೋಜ್ಗಾರ್ ಮೇಳ ಕಾರ್ಯಕ್ರಮದಲ್ಲಿ ಕೇಂದ್ರದ ವಿವಿಧ ಇಲಾಖೆಗಳಿಗೆ ಆಯ್ಕೆಯಾಗಿರುವ 185 ಮಂದಿಗೆ ನೇಮಕಾತಿ ಪತ್ರ ವಿತರಿಸಲಾಯಿತು.

ನೈರುತ್ಯ ರೈಲ್ವೇ ಮೈಸೂರು ವಿಭಾಗವು ಆಯೋಜಿಸಿದ್ದ ಕಾರ್ಯಕ್ರಮವನ್ನು ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಖಾತೆ ರಾಜ್ಯ ಸಚಿವ ಎ.ನಾರಾಯಣಸ್ವಾಮಿ ಉದ್ಘಾಟಿಸಿ ರೈಲ್ವೇ, ರೆವಿನ್ಯೂ, ಅಂಚೆ, ಶಿಕ್ಷಣ ಮತ್ತು ಭದ್ರತಾ ಇಲಾಖೆಗಳಿಗೆ ನೇಮಕಗೊಂಡ 185 ಮಂದಿಗೆ ನೇಮಕಾತಿ ಪತ್ರಗಳನ್ನು ಹಸ್ತಾಂತರಿಸಿ, ಶುಭ ಕೋರಿದರು.

ನಂತರ ಮಾತನಾಡಿದ ಸಚಿವರು, ದೇಶಾದ್ಯಂತ ಕೇಂದ್ರ ಸರ್ಕಾರವು 10 ಲಕ್ಷ ಯುವಕರಿಗೆ ಉದ್ಯೋಗ ನೀಡುವುದಾಗಿ ಪ್ರಧಾನಿ ನರೇಂದ್ರ ಮೋದಿ ಅವರು ನೀಡಿದ್ದ ಭರವಸೆಯಂತೆ ಇದೀಗ ರೋಜ್ಗಾರ್ ಮೇಳದ ಮೂಲಕ 6.5 ಲಕ್ಷ ಜನರಿಗೆ ಉದ್ಯೋಗ ಪತ್ರ ನೀಡಿದ್ದಾರಲ್ಲದೆ, ಭಾರತ ದೇಶವನ್ನು 'ಟ್ರಿಲಿಯನ್ ಡಾಲರ್ ಎಕಾನಮಿ' ಗುಂಪಿಗೆ ಸೇರಿಸಲು ಅಗತ್ಯವಿರುವ ಅಭಿವೃದ್ಧಿಗೆ ಆದ್ಯತೆ ನೀಡಿದ್ದಾರೆ ಎಂದರು.

ಮುದ್ರಾ ಯೋಜನೆ ಮೂಲಕ ಸ್ವ–ಉದ್ಯೋಗಕ್ಕೆ ಉತ್ತೇಜನ ನೀಡಿರುವುದಲ್ಲದೆ, ಕೌಶಲ್ಯಾಧಾರಿತ ಶಿಕ್ಷಣ ನೀಡಿ ಉದ್ಯೋಗಕ್ಕೆ ಆದ್ಯತೆ ನೀಡಲಾಗಿದೆ. ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ (IIT) ವೈದ್ಯಕೀಯ, ವಿಮಾನಯಾನ, ರೈಲ್ವೇ ಇಲಾಖೆಗಳಲ್ಲಿ ಅಭಿವೃದ್ಧಿ ಕಾರ್ಯ ಪ್ರಗತಿಯಲ್ಲಿದೆ ಎಂದು ಅವರು ತಿಳಿಸಿದರು.

ಜಿ–20 ಶೃಂಗಸಭೆ ಮೂಲಕ ಭಾರತದ ಸಾಮರ್ಥ್ಯವನ್ನು ವಿಶ್ವಕ್ಕೇ ಪರಿಚಯಿಸಲಾಗಿದೆ. ಡಿಜಿಟಲ್ ತಂತ್ರಜ್ಞಾನಕ್ಕೆ ಒತ್ತು ನೀಡಲಾಗಿದೆ. ಯುವ ಜನಾಂಗವು ಲಭ್ಯವಿರುವ ಅವಕಾಶಗಳನ್ನು ಬಳಸಿಕೊಂಡು ತಮ್ಮ ಜೀವನ ರೂಪಿಸಿಕೊಳ್ಳಬೇಕು ಹಾಗೂ ಸರ್ಕಾರಿ ಉದ್ಯೋಗಕ್ಕೆ ನೇಮಕಗೊಂಡಿರುವವರು ಸಮರ್ಥವಾಗಿ ಕೆಲಸ ಮಾಡಿ ದೇಶದ ಅಭಿವೃದ್ಧಿಗೆ ಸಹಕಾರ ನೀಡಬೇಕೆಂದು ನಾರಾಯಣಸ್ವಾಮಿ ಇದೇ ಸಂದರ್ಭ ಸಲಹೆ ನೀಡಿದರು.

ಶಾಸಕ ಟಿ.ಎಸ್.ಶ್ರೀವತ್ಸ, ಮೇಯರ್ ಶಿವಕುಮಾರ್, ಆಯಿಷ್ ನಿರ್ದೇಶಕಿ ಪುಷ್ಪಾವತಿ, ವಿಭಾಗೀಯ ರೈಲ್ವೇ ವ್ಯವಸ್ಥಾಪಕಿ ಶಿಲ್ಪಿ ಅಗರವಾಲ್, ಸುರತ್ಕಲ್‌ನ ಎನ್‌ಐಟಿ ಕುಲಸಚಿವ ಕೆ.ರವೀಂದ್ರ ನಾಥ, ಸೀನಿಯರ್ ಡಿವಿಷನಲ್ ಪರ್ಸನಲ್ ಮ್ಯಾನೇಜರ್ ಪ್ರಶಾಂತ ಮಾಸ್ತಿ ಹೋಳಿ ಅವರು ರೋಜ್ಗಾರ್ ಮೇಳದ 10ನೇ ಆವೃತ್ತಿಯಲ್ಲಿ ಪಾಲ್ಗೊಂಡಿದ್ದರು.

ಮಧ್ಯಾಹ್ನ 1 ಗಂಟೆಗೆ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ನವದೆಹಲಿಯಲ್ಲಿ ಆಯೋಜಿಸಿದ್ದ ಸಮಾರಂಭದಲ್ಲಿ ವಿಡಿಯೋ ಕಾನ್ಫರೆನ್ಸ್ ಮೂಲಕ ದೇಶದಾದ್ಯಂತ 51,116 ಮಂದಿಗೆ ಉದ್ಯೋಗ ಪತ್ರಗಳನ್ನು ಹಸ್ತಾಂತರಿಸಿ ಯುವ ಸಮೂಹಕ್ಕೆ ಶುಭ ಕೋರಿದರು.

ಅ.31, ಜೆಎಸ್‌ಎಸ್ ಉನ್ನತ ಶಿಕ್ಷಣ, ಆರೋಗ್ಯ ವಿಜ್ಞಾನ ವಿದ್ಯಾರ್ಥಿಗಳ ಪದವೀಧರ ದಿನಾಚರಣೆ



ಮೈಸೂರು, ಅ.28 (ಎಂಟಿವೈ)–ಜೆಎಸ್‌ಎಸ್ ಉನ್ನತ ಶಿಕ್ಷಣ ಮತ್ತು ಸಂಶೋಧನಾ ಅಕಾಡೆಮಿಯ ಆರೋಗ್ಯ ವಿಜ್ಞಾನ (ಅಲೈಡ್ ಹೆಲ್ತ್ ಸೈನ್ಸಸ್) ವಿದ್ಯಾರ್ಥಿಗಳ ಪದವೀಧರರ ದಿನಾಚರಣೆ ಅ.31ರಂದು ಸಂಜೆ 4ಕ್ಕೆ ಜೆಎಸ್‌ಎಸ್ ಮಹಾ ವಿದ್ಯಾಲಯದ ರಾಜೇಂದ್ರ ಸಭಾಂಗಣದಲ್ಲಿ ಜರುಗಲಿದೆ ಎಂದು ಜೆಎಸ್‌ಎಸ್ ವೈದ್ಯಕೀಯ ಮಹಾ ವಿದ್ಯಾಲಯದ ಪ್ರಾಚಾರ್ಯ ಡಾ.ಹೆಚ್.ಬಸವನಗೌಡಪ್ಪ ತಿಳಿಸಿದ್ದಾರೆ.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಜೆಎಸ್‌ಎಸ್ ಮಹಾ ವಿದ್ಯಾಲಯದಲ್ಲಿ 2010ರಿಂದ ಇದುವರೆಗೆ ಆರೋಗ್ಯ ವಿಜ್ಞಾನ ವಿಷಯದಲ್ಲಿ ಬಿಎಸ್‌ಸಿ, ಎಂಎಸ್‌ಸಿ, ಎಂಪಿಹೆಚ್ ಪದವಿಯನ್ನು 1424 ಮಂದಿ ಪಡೆದಿದ್ದಾರೆ. ಈ ವರ್ಷ 313 ವಿದ್ಯಾರ್ಥಿಗಳು ವಿವಿಧ ವಿಭಾಗಗಳಲ್ಲಿ ಪದವಿ ಪಡೆಯುತ್ತಿದ್ದಾರೆ ಎಂದರು.

ಇದು ಉತ್ತಮ ಬೇಡಿಕೆಯುಳ್ಳ ಕೋರ್ಸ್ ಆಗಿದ್ದು, ವೈದ್ಯರಿಗೆ ತಾಂತ್ರಿಕ ಸಾಧನಗಳ ಉತ್ತಮ ನಿರ್ವಹಣೆ ಮೂಲಕ ನೆರವಾಗುವ ಕೆಲಸ ಇವರದ್ದಾಗಿದೆ. ಪದವಿ ಪಡೆದವರಿಗೆ ದೇಶ, ವಿದೇಶಗಳಲ್ಲಿ ಉತ್ತಮ ವೇತನವುಳ್ಳ ಕೆಲಸವೂ ದೊರೆಯುತ್ತಿದೆ. ಪಿಯುಸಿ ವಿಜ್ಞಾನ ಕೋರ್ಸ್ ಮಾಡಿದವರು ಪ್ರವೇಶ ಪಡೆಯಬಹುದಾಗಿದೆ ಎಂದರು.

ಅ.31ರಂದು ಸಂಜೆ 4 ಗಂಟೆಗೆ ನಡೆಯುವ ಪದವೀಧರರ ದಿನದ ಕಾರ್ಯಕ್ರಮದ ಸಾನ್ನಿಧ್ಯವನ್ನು ಸುತ್ತೂರು ಕ್ಷೇತ್ರದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ವಹಿಸಲಿದ್ದಾರೆ. ವೈದ್ಯಕೀಯ ಶಿಕ್ಷಣ ಇಲಾಖೆ ನಿರ್ದೇಶಕಿ ಡಾ.ಬಿ.ಎನ್.ಸುಜಾತ ರಾಥೋಡ್ ವಹಿಸಲಿದ್ದು, ಕೇಂದ್ರ ಸರ್ಕಾರದ ಬಯೋಲಜಿ ಮಿನಿಸ್ಟ್ರಿ ಆಫ್ ಸೈನ್ಸ್ ಅಂಡ್ ಟೆಕ್ನಾಲಜಿ ಸಂಸ್ಥೆಯ ಪ್ರಿನ್ಸಿಪಲ್ ಸೈಂಟಿಸ್ಟ್ ಡಾ.ಸುಚೇತ ಬ್ಯಾನರ್ಜಿ ಕುರುಂದ್ಕರ್ ಮುಖ್ಯ ಅತಿಥಿಗಳಾಗಿ ಪಾಲ್ಗೊಳ್ಳಲಿದ್ದಾರೆ. ಜೆಎಸ್‌ಎಸ್ ವಿದ್ಯಾಪೀಠದ ಕಾರ್ಯನಿರ್ವಾಹಕ ಕಾರ್ಯದರ್ಶಿ ಡಾ.ಸಿ.ಜಿ. ಬೆಟಸೂರ ಮಠ, ಸಮ ಕುಲಾಧಿಪತಿ ಡಾ.ಬಿ. ಸುರೇಶ್, ಉಪಕುಲಪತಿ ಡಾ.ಸುರೀಂದರ್ ಸಿಂಗ್ ಹಾಗೂ ಇನ್ನಿತರರು ಉಪಸ್ಥಿತರಿರುತ್ತಾರೆ ಎಂದರು. ಡೀನ್ ಡಾ.ಬಿ.ಎನ್.ಸುಮ, ಕುಲಸಚಿವ ಡಾ.ಬಿ.ಮಂಜುನಾಥ್, ಡಾ. ವಿಶಾಲ್ ಗುಪ್ತ ಹಾಜರಿದ್ದರು.

ನಾಗಲಕ್ಷ್ಮಿಗೆ ಪಿಹೆಚ್.ಡಿ



ಮೈಸೂರು, ಅ.28–ಡಾ.ಕೆ.ಕುಮಾರ್ ಅವರ ಮಾರ್ಗದರ್ಶನದಲ್ಲಿ ಪಿ.ಕೆ. ನಾಗಲಕ್ಷ್ಮಿ ಅವರು ನೃತ್ಯ ವಿಷಯದಲ್ಲಿ ಸಂಶೋಧನೆ ನಡೆಸಿ ಸಾದರಪಡಿಸಿದ ಮಹಾಪ್ರಬಂಧವನ್ನು ಮೈಸೂರು ವಿಶ್ವವಿದ್ಯಾನಿಲಯ ಪಿಎಚ್.ಡಿ ಪದವಿಗೆ ಅಂಗೀಕರಿಸಿದೆ ಎಂದು ಮೈಸೂರು ವಿವಿ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದೆ.

ಮಾನವ ದೇಹ ರಚನೆಯ ರಹಸ್ಯ ಬಯಲು ಮಾಡುವ ವೈದ್ಯಕೀಯ ವಸ್ತುಪ್ರದರ್ಶನ



ಮೈಸೂರು,ಅ.28(ಎಸ್‌ಬಿಡಿ)–ಮಾನವ ದೇಹದ ರಚನೆಯೇ ಅತ್ಯದ್ಭುತ. ಮೈಸೂರು ವೈದ್ಯಕೀಯ ಕಾಲೇಜು ಹಾಗೂ ಸಂಶೋಧನಾ ಸಂಸ್ಥೆಯ ನೂತನ ಗ್ರಂಥಾಲಯ ಕಟ್ಟಡಕ್ಕೆ ಭೇಟಿ ನೀಡಿದರೆ ಇದು ಅರಿವಾಗುತ್ತದೆ.

ಸಂಸ್ಥೆಯ ಶತಮಾನೋತ್ಸವ ಸಂಭ್ರಮಾಚರಣೆ ಪ್ರಯುಕ್ತ ಇಲ್ಲಿ ಏರ್ಪಡಿಸಲಾಗಿರುವ ವೈದ್ಯಕೀಯ ವಸ್ತು ಪ್ರದರ್ಶನ, ಮಾನವ ದೇಹದ ಮಹತ್ವವನ್ನು ಮನಸ್ಸಿಗೆ ಮುಟ್ಟಿಸುವಂತಿದೆ. ಮೂಳೆ–ಮಾಂಸಗಳ ತಡಿಕೆಯಂತಿರುವ ಮಾನವ ದೇಹದಲ್ಲಿರುವ ವಿವಿಧ ಅಂಗಾಂಗಗಳನ್ನು ಸಂಸ್ಕರಣೆ ಮಾಡಿರುವುದನ್ನು ಇಲ್ಲಿ ಪ್ರದರ್ಶಿಸಲಾಗಿದೆ. ಒಂದು ಸುತ್ತು ಹಾಕಿದರೆ ನಮ್ಮ ಅತ್ಯಮೂಲ್ಯವಾದ ದೇಹವನ್ನು ಸ್ವಯಂಕೃತ ತಪ್ಪುಗಳಿಂದ ಹಾಳು ಮಾಡಿಕೊಳ್ಳಬಾರದು ಎಂಬುದು ಅರಿವಿಗೆ ಬರುತ್ತದೆ.

ಮನುಷ್ಯನ ಹುಟ್ಟು, ಬೆಳವಣಿಗೆ, ದೇಹದ ಪ್ರತಿಯೊಂದು ಅಂಗಾಂಗದ ಬೆಳವಣಿಗೆ, ಜನ್ಮದತ್ತವಾಗಿ ಬಾಧಿಸುವ ರೋಗಗಳು, ಜನಿಸಿದ ನಂತರದಲ್ಲಿ ಹಲವು ಕಾರಣಗಳಿಂದ ಉಂಟಾಗುವ ಸಮಸ್ಯೆಗಳು, ರೋಗ ಲಕ್ಷಣಗಳು, ಪಾಲಿಸಬೇಕಾದ ಮುಂಜಾಗ್ರತಾ ಕ್ರಮಗಳು, ಅನಾರೋಗ್ಯ ನಿವಾರಣೆಗೆ ಅಗತ್ಯವಾದ ಚಿಕಿತ್ಸೆ, ಮಾರಣಾಂತಿಕ ಕಾಯಿಲೆಗಳ ನಿರ್ವಹಣೆ, ಹೀಗೆ ಸಮಗ್ರ ವೈದ್ಯಕೀಯ ಮಾಹಿತಿ ಇಲ್ಲಿದೆ.

ಭ್ರೂಣ ಬೆಳವಣಿಗೆಯ ವಿವಿಧ ಹಂತಗಳನ್ನು ಗಾಜಿನ ಬಾಟಲಿಗಳಲ್ಲಿ ಸಂಸ್ಕರಣೆ ಮಾಡಲಾಗಿದೆ. ಎರಡು ಅಂಡಾಣುಗಳು ಒಂದೇ ಅಂಡಾಂಶದ ಚಕ್ರದಲ್ಲಿ ಎರಡು ವಿಭಿನ್ನ ವೀರ್ಯಗಳಿಂದ ಫಲವತ್ತಾದಾಗ ಸಂಭವಿಸುವ ಡೈಜೈಗೋಟಿಕ್ ಅವಳಿ ಮಕ್ಕಳ ಭ್ರೂಣವನ್ನೂ ಪ್ರದರ್ಶನಕ್ಕಿಡಲಾಗಿದೆ. ಹುಟ್ಟಿನಿಂದ ಬರುವ ನೀರು ತುಂಬಿದ ತಲೆ ಬುರುಡೆಯನ್ನೂ ಇಲ್ಲಿ ಇಡಲಾಗಿದೆ. ಗರ್ಭಿಣಿಯಾಗಿದ್ದಾಗ ವೈದ್ಯರ ಸೂಚನೆಯಿಲ್ಲದೆ ಔಷಧ ಸೇವಿಸಿದ ತಾಯಿಗೆ ಜನಿಸಿದ ಥಾಲಿ ಡೋಮೈಡ್ ಶಿಶುವಿನ ಬಗ್ಗೆಯೂ ಮಾಹಿತಿ ನೀಡಲಾಗಿದೆ. ನಿದ್ದೆ ಮಾತ್ರೆಯಿಂದಾಗುವ ಅಂಗವೈಕಲ್ಯ, ಮುಖದ ವಿರೂಪ, ಆಂತರಿಕ ಅಂಗಗಳ ಅಸಾಮಾನ್ಯ ಲಕ್ಷಣ ಎಲ್ಲವನ್ನೂ ಸಾಕ್ಷಿ ಸಹಿತ ಮನದಟ್ಟು ಮಾಡಲಾಗಿದೆ.

ಚರ್ಮದ ಕ್ಯಾನ್ಸರ್, ಜಠರದ ಹುಣ್ಣು, ಕರುಳಿನ ಕ್ಯಾನ್ಸರ್, ಶ್ವಾಸಕೋಶದ ಕ್ಯಾನ್ಸರ್, ಯಕೃತ್ತಿನಲ್ಲಿ ಉಂಟಾಗುವ ಸಮಸ್ಯೆ, ಕ್ಷಯರೋಗದಿಂದ ಮೃತಪಟ್ಟ ವ್ಯಕ್ತಿಗಳ ಅಂಗಗಳನ್ನಿಟ್ಟು ರೋಗದ ಪರಿಣಾಮವನ್ನು ತಿಳಿಸಲಾಗಿದೆ. ಸೀಳು ತುಟಿ, ಸೀಳು ಅಂಗಗಳ ಬಗ್ಗೆ ಅರಿವು ಮೂಡಿಸಲಾಗಿದೆ. ಕ್ಯಾನ್ಸರ್ ರೋಗಕ್ಕೆ ಒಳಗಾದವರು ಹಾಗೂ ಸಾಮಾನ್ಯರ ಮೂಳೆಗಳಲ್ಲಿನ ವ್ಯತ್ಯಾಸವನ್ನು ಪ್ರದರ್ಶಿಸಲಾಗಿದೆ. ಸೂಕ್ಷ್ಮ ಅಂಗವಾದ ಗಂಟಲು, ಕೊಬ್ಬಿನ ಗೆಡ್ಡೆಗಳು, ಹೃದಯ, ಶ್ವಾಸಕೋಶ, ಯಕೃತ್ತು, ಮೂತ್ರಪಿಂಡ, ಮೆದುಳು ಸೇರಿದಂತೆ ವಿವಿಧ ಅಂಗಗಳ ಸಾಮಾನ್ಯ ಮತ್ತು ಅಸಾಮಾನ್ಯ ರೂಪಗಳನ್ನು ಇಲ್ಲಿ ಕಾಣಬಹುದಾಗಿದೆ.

ವೈದ್ಯಕೀಯ ಕಾಲೇಜಿನ ಎಲ್ಲಾ ವಿಭಾಗಗಳ ಪ್ರತ್ಯೇಕ ಮಳಿಗೆಗಳಿದ್ದು, ವೈದ್ಯಕೀಯ ವಿದ್ಯಾರ್ಥಿಗಳು ವಿವರಣೆ ನೀಡುತ್ತಾರೆ. ಎನ್‌ಐಇ ಕಾಲೇಜಿನ ಉಪನ್ಯಾಸಕರು ಹಾಗೂ ವಿದ್ಯಾರ್ಥಿಗಳು ವೈದ್ಯಕೀಯ ಸೇವೆಯಲ್ಲಿ ರೋಬೋಟ್ ಬಳಕೆ ಬಗ್ಗೆ ಪ್ರಾತ್ಯಕ್ಷಿಕೆ ನೀಡಿದ್ದಾರೆ. ನರವ್ಯೂಹದ ಮೂಲಕ ಮಿದುಳಿನ ಸಂದೇಶವನ್ನು ಅರಿತು ಕೃತಕವಾದ ಕೈ ಕಾರ್ಯನಿರ್ವಹಿಸುವ ಆರಂಭಿಕ ಹಂತದ ಸಂಶೋಧನೆ ಗಮನ ಸೆಳೆಯುತ್ತದೆ. ಅಂಗಾಂಗ ದಾನದ ಮಹತ್ವ ಸಾರುವ ಮಳಿಗೆಯಲ್ಲಿ ದಾನಿಗಳ ನೋಂದಣಿಗೂ ಅವಕಾಶವಿದೆ.

ವೈದ್ಯಕೀಯ ಶಿಕ್ಷಣ ಸಚಿವ ಡಾ.ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್ ವೈದ್ಯಕೀಯ ವಸ್ತು ಪ್ರದರ್ಶನವನ್ನು ಉದ್ಘಾಟಿಸಿದರು. ಶಾಸಕರಾದ ಕೆ.ಹರೀಶ್‌ಗೌಡ, ಡಾ.ಡಿ.ತಿಮ್ಮಯ್ಯ, ಎಂಎಂಸಿಆರ್‌ಐ ಡೀನ್ ಅಂಡ್ ಡೈರೆಕ್ಟರ್ ಡಾ.ಕೆ.ಆರ್. ದಾಕ್ಷಾಯಣಿ, ಸಿಎಓ ಕಲ್ಪಶ್ರೀ, ವಿವಿಧ ವಿಭಾಗಗಳ ಮುಖ್ಯಸ್ಥರು ಉಪಸ್ಥಿತರಿದ್ದರು. ಇಂದಿನಿಂದ ಒಂದು ತಿಂಗಳು ಈ ವಸ್ತುಪ್ರದರ್ಶನ ವೀಕ್ಷಿಸಬಹುದು. ವೈದ್ಯಕೀಯ ಮಾತ್ರವಲ್ಲದೆ ಎಲ್ಲಾ ವಿದ್ಯಾರ್ಥಿಗಳಿಗೆ ಇದು ಅತ್ಯಂತ ಪ್ರಯೋಜನಕಾರಿಯಾಗಿದೆ. ಸಾರ್ವಜನಿಕರಿಗೂ ಮುಕ್ತ ಅವಕಾಶವಿದೆ.

ಶಶಾಂಕ್ ಮೈಸೂರು ತಾಲೂಕು ಉಪ ತಹಸೀಲ್ದಾರ್



ಮೈಸೂರು,ಅ.28(ಆರ್‌ಕೆ)–ಗುಂಡ್ಲುಪೇಟೆ ತಾಲೂಕು ಚುನಾವಣಾ ಶಿರಸ್ತೇದಾರ್ ಆಗಿದ್ದ ಎಲ್.ಶಶಾಂಕ್ ಅವರನ್ನು ಮೈಸೂರು ತಾಲೂಕು ಉಪತಹಸೀಲ್ದಾರ್ ಆಗಿ ಸರ್ಕಾರ ವರ್ಗಾವಣೆ ಮಾಡಿದೆ. ಮೇ 31ರಂದು ಪ್ರಾದೇಶಿಕ ಆಯುಕ್ತರು ಆನಂದ ಮತ್ತು ಕೆ.ಎಸ್.ರೂಪ ಅವರ ಪರಸ್ಪರ ವರ್ಗಾವಣೆ ಮಾಡಿರುವುದನ್ನು ರದ್ದುಪಡಿಸಿ ಮುಖ್ಯಮಂತ್ರಿಗಳ ನಿರ್ದೇಶನದಂತೆ ಹಾಲಿ ಕರ್ತವ್ಯ ನಿರ್ವಹಿಸುತ್ತಿದ್ದ ಉಪ ತಹಸೀಲ್ದಾರ್ ಆನಂದ ಅವರ ಜಾಗಕ್ಕೆ ಶಶಾಂಕ್ ಅವರನ್ನು ವರ್ಗಾಯಿಸಲಾಗಿದೆ.

ನಿಧನ

ಡಾ.ಎಂ.ವಿ.ಶಾಂತಕುಮಾರ್



ಮೈಸೂರು: ಜೈನ ಸಮಾಜದ ಸೇವಕರು, ಹಿರಿಯ ನೇತ್ರ ತಜ್ಞರಾದ ಡಾ.ಎಂ.ವಿ.ಶಾಂತಕುಮಾರ್ (78) ಅವರು ಇಂದು ಸಂಜೆ ದಿವಾನ್ಸ್ ರಸ್ತೆಯ ತಮ್ಮ ನಿವಾಸದಲ್ಲಿ ನಿಧನರಾದರು. ಇವರು ಪುತ್ರ ಸಂತೋಷ್ ಕುಮಾರ್ ಜೈನ್, ಸೊಸೆ ಚೇತನ, ಮೊಮ್ಮಕ್ಕಳಾದ ಸ್ಮರಣ, ಸಾನ್ವಿ ಸೇರಿದಂತೆ ಅಪಾರ ಬಂಧು ವರ್ಗ, ಸ್ನೇಹಿತರನ್ನು ಅಗಲಿದ್ದಾರೆ.

ಇವರು ಗೊಮ್ಮಟಗಿರಿ ಕ್ಷೇತ್ರ ಸೇವಾ ಸಮಿತಿ, ಮಹಾವೀರ ವಿದ್ಯಾ ಮಂದಿರ ಅಧ್ಯಕ್ಷರಾಗಿದ್ದರು. ಅಲ್ಲದೆ, ಮೈಸೂರು ನೇತ್ರ ತಜ್ಞರ ಸಂಘದ ಮಾಜಿ ಅಧ್ಯಕ್ಷರೂ ಆಗಿದ್ದರು. ವಚಕನಹಳ್ಳಿ ಬ್ರಹ್ಮದೇವ ಸಮಿತಿಯ ಉಪಾಧ್ಯಕ್ಷರೂ ಆಗಿದ್ದರು. ಜೊತೆಗೆ ಪಿಂಜರಾಪೋಲ್ ಸದಸ್ಯರೂ, ಜೈನ ಮಿಲನ್ ನಿಕಟಪೂರ್ವ ಅಧ್ಯಕ್ಷರಾಗಿದ್ದರು. ಇವರ ಅಂತ್ಯಕ್ರಿಯೆ ನಾಳೆ (ಭಾನುವಾರ) ಮಧ್ಯಾಹ್ನ 1 ಗಂಟೆಗೆ ಚಾಮುಂಡಿ ಬೆಟ್ಟದ ತಪ್ಪಲಿನ ಚಿತಾಗಾರದಲ್ಲಿ ನೆರವೇರಲಿದೆ ಎಂದು ಮೂಲಗಳು ತಿಳಿಸಿವೆ.

ಟಿ.ಆರ್.ರಾಮಯ್ಯ



ಮೈಸೂರಿನ ಸುಕೃತಾ ಶಿಕ್ಷಣ ಸಂಸ್ಥೆ ಸಂಸ್ಥಾಪಕರು, ನಿವೃತ್ತ ಪ್ರಿನ್ಸಿಪಾಲ್ ಟಿ.ಆರ್.ರಾಮಯ್ಯ (93) ಅವರು ಇಂದು ನಿಧನರಾದರು. ಮೃತರು ಪತ್ನಿ ಇಂದಿರಮ್ಮ, ಪುತ್ರ ಶಮಂತ, ಪುತ್ರಿ ಡಾ.ಸುಜಾತ, ಅಳಿಯ ಡಾ.ಹಾಲಪ್ಪ ಸೇರಿದಂತೆ ಅಪಾರ ಬಂಧು ವರ್ಗ ಅಗಲಿದ್ದಾರೆ. ಇವರು ಮಿರ್ಲೆ, ಮಧುಗಿರಿ, ತುಮಕೂರು ಪದವಿ ಪೂರ್ವ ಕಾಲೇಜುಗಳಲ್ಲಿ ಪ್ರಿನ್ಸಿಪಾಲರಾಗಿ ಸೇವೆ ಸಲ್ಲಿಸಿದ್ದರು. ಅಲ್ಲದೆ ಬೆಂಗಳೂರಲ್ಲಿ ಡಿಡಿಪಿಐ ಆಗಿಯೂ ಕಾರ್ಯನಿರ್ವಹಿಸಿದ್ದರು. ಇವರ ಅಂತ್ಯಕ್ರಿಯೆ ನಾಳೆ(ಭಾನುವಾರ) ಮಧ್ಯಾಹ್ನ 1 ಗಂಟೆಗೆ ಕುವೆಂಪುನಗರ ರುದ್ರಭೂಮಿಯಲ್ಲಿ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಎನ್.ಉಮೇಶ್




ಮೈಸೂರಿನ ವಿಜಯನಗರ ಎರಡನೇ ಹಂತದ ನಿವಾಸಿ ಎನ್.ಉಮೇಶ್ (63) ಅನಾರೋಗ್ಯದಿಂದ ಇಂದು ಸಂಜೆ 5 ಗಂಟೆಗೆ ನಿಧನರಾದರು. ಮೃತರು ಪತ್ನಿ, ಓರ್ವ ಪುತ್ರಿ, ಬಂಧು–ಬಳಗ ಹಾಗೂ ಅಪಾರ ಮಿತ್ರರನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ನಾಳೆ (ಭಾನುವಾರ) ಬೆಳಗ್ಗೆ ಗೋಕುಲಂನ ರುದ್ರಭೂಮಿಯಲ್ಲಿ ನೆರವೇರಲಿದೆ.

ಗಜಾನನ ಶ್ರೀಪಾದ ಭಿಡೆ



ಮೈಸೂರಿನ ಐಡಿಯಲ್ ಜಾವಾ ಕಾರ್ಖಾನೆ ನಿವೃತ್ತ ಜನರಲ್ ಮ್ಯಾನೇಜರ್‌ಗಜಾನನ ಶ್ರೀಪಾದ ಭಿಡೆ(80) ಅಲ್ಪಕಾಲದ ಅಸ್ವಸ್ಥತೆಯಿಂದ ಶನಿವಾರ ಸಂಜೆ ನಿಧನರಾದರು. ಮೃತರ ಅಂತ್ಯಕ್ರಿಯೆ ನಾಳೆ (ಭಾನುವಾರ) ಬೆಳಗ್ಗೆ 10 ಗಂಟೆಗೆ ಚಾಮುಂಡಿಬೆಟ್ಟದ ಪಾದದ ಬಳಿಯಿರುವ ರುದ್ರಭೂಮಿಯಲ್ಲಿ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.


ಪುಟ್ಟೇಗೌಡ



ತಿ.ನರಸೀಪುರ, ಅ.28– ಕಾಂಗ್ರೆಸ್‌ನ ಹಿರಿಯ ಮುಖಂಡ ಯರಗನಹಳ್ಳಿ ಪುಟ್ಟೇಗೌಡ(70) ಇಂದು ಬೆಳಗ್ಗೆ ಪಟ್ಟಣದ ಹಳೆ ಕುರುಬಗೇರಿಗೆ ನಿವಾಸದಲ್ಲಿ ನಿಧನರಾದರು. ಮೃತರು ಪುರಸಭಾ ಸದಸ್ಯ ಬಾದಾಮಿ ಮಂಜು ಸೇರಿದಂತೆ ಇಬ್ಬರು ಪುತ್ರರು ಮೂವರು ಪುತ್ರಿಯರು ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದು ಇವರ ಅಂತ್ಯಕ್ರಿಯೆಯನ್ನು ಕುರುಬರ ರುದ್ರಭೂಮಿಯಲ್ಲಿ ನೆರವೇರಿಸಲಾಯಿತು.

ಇವರ ನಿಧನಕ್ಕೆ ಮಾಜಿ ಶಾಸಕ ಡಾ.ಯತೀಂದ್ರ ಸಿದ್ದರಾಮಯ್ಯ, ಕೆಡಿಪಿ ಸದಸ್ಯ ಸುನಿಲ್ ಬೋಸ್, ಪುರಸಭಾ ಅಧ್ಯಕ್ಷ ಟಿ.ಎಂ.ನಂಜುಂಡಸ್ವಾಮಿ, ಮದನ್ ರಾಜ್, ಉಪಾಧ್ಯಕ್ಷ ನಾಗರತ್ನ ಮಾದೇಶ್, ಸದಸ್ಯರಾದ ಸಿ.ಪ್ರಕಾಶ್, ಮೆಡಿಕಲ್ ನಾಗರಾಜ್, ಮಂಜುನಾಥ್, ಸ್ವಾಮಿ, ತಾಲೂಕು ಕುರುಬರ ಸಂಘದ ಅಧ್ಯಕ್ಷ ಮನ್ನೆ ಹುಂಡಿ ಮಹೇಶ್, ವೆಂಕಿ, ನೇತ್ರ ಪರೀಕ್ಷಕ ಉಮೇಶ್‌ಕುಮಾರ್, ದೈಹಿಕ ಶಿಕ್ಷಕ ಕುಮಾರಸ್ವಾಮಿ, ಅನೇಕ ಕಾಂಗ್ರೆಸ್ ಮುಖಂಡರು ಅಂತಿಮ ದರ್ಶನ ಪಡೆದು ಸಂತಾಪ ಸೂಚಿಸಿದ್ದಾರೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

29.10.2023 ಭಾನುವಾರ, ಮಳೆ ನಕ್ಷತ್ರ: ಸ್ವಾತಿ, 25.10.2023ರಿಂದ 06.11.2023
ಶ್ರೀ ಶೋಭಕೃತ್ ನಾಮ ಸಂವತ್ಸರ, ದಕ್ಷಿಣಾಯನ, ಶರದ್ ಋತು, ಅಶ್ವಯುಜ ಮಾಸ,
ಕೃಷ್ಣ ಪಕ್ಷ, ತಿಥಿ: ಪಾಡ್ಯ, ನಕ್ಷತ್ರ: ಅಶ್ವಿನಿ, ರಾಹುಕಾಲ: ಬೆಳಗ್ಗೆ 9ರಿಂದ 10.30ರವರೆಗೆ

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ–ಉದಯ್ ಇಟಗಿ, 6.15 ಗೀತಾರಾಧನ, 6.35 ಮತ್ತು ಸಂಜೆ 6.10ಕ್ಕೆ– ಸೈಬರ್ ಮಿತ್ರ, ಸೈಬರ್ ಸುರಕ್ಷೆವಾರದ ಮಾತು, ಪ್ರಸ್ತುತಿ–ಸತೀಶ್ ಪ್ರಾಯೋಜಕರು cybermitra.in ಮೈಸೂರು, 6.40 ರೈತರಿಗೆ ಸಲಹೆ, 6.45 ಕಲ್ಯಾಣ ಕರೆದಿದೆ ಕಲ್ಯಾಣ–ಪ್ರಾಯೋಜಿತ ಕಾರ್ಯಕ್ರಮ, 9.05 ಹಾಸನ ನಗರದ ಹಾಸನಾಂಬೆಯ ದರ್ಶನ ಕುರಿತ ಕಾರ್ಯಕ್ರಮ, 9.40 ನಮ್ಮ ಆರೋಗ್ಯ–ಸಯಾಟಿಕಾ, ಕೈಕಾಲು ಸೆಳೆತ ಇತ್ಯಾದಿ ತೊಂದರೆಗಳಿಗೆ ಪರಿಹಾರ ಕುರಿತು ಡಾ. ಜಿ.ಎಸ್.ಮಂಜುನಾಥ್ ಅವರೊಂದಿಗೆ ಮಾತುಕತೆ, 10.00 ಕೇಳಿ ಗಿಳಿಗಳೇ ಕಥೇ ಹೇಳ್ತೀಯೋ ಹಾಡು ಹೇಳ್ತೀಯೋ, 10.30 ಮಕ್ಕಳ ಮಂಟಪ–"ಹಾಡುವ ಪ್ರತಿಭೆ ಹರಿಣಿ ನಂದಕುಮಾರ್" ಪರಿಚಯ, ಪ್ರಸ್ತುತಿ–ಎಂ.ಎಸ್.ಭಾರತಿ, 11.00 ಮನ್ ಕೀ ಬಾತ್–ದೇಶದ ಜನತೆ ಯೊಂದಿಗೆ ಪ್ರಧಾನಿ ನರೇಂದ್ರ ಮೋದಿಯವರ ಮನದ ಮಾತು ನಂತರ ಮನ್ ಕೀ ಬಾತ್–ದೇಶದ ಜನತೆಯೊಂದಿಗೆ ಪ್ರಧಾನಿ ನರೇಂದ್ರ ಮೋದಿಯವರ ಮನದ ಮಾತಿನ ಕನ್ನಡ ಅನುವಾದ **ಮಧ್ಯಾಹ್ನ:** 12.30 ದೇವರನಾಮ–ಬಾಂಬೆ ಎಸ್. ಜಯಶ್ರೀ, ಮಾಧವಗುಡಿ, 12.45 ಜನಪದ ಸಂಗೀತ– ಯರಗನಹಳ್ಳಿ ಸಣ್ಣಮ್ಮ ಮತ್ತು ಸಂಗಡಿಗರು, 1.30 ಲಕ್ನೋದಲ್ಲಿ ನಡೆಯಲಿರುವ ಭಾರತ ಹಾಗೂ ಇಂಗ್ಲೆಂಡ್ ತಂಡಗಳ ನಡುವೆ ನಡೆಯಲಿರುವ ಏಕದಿನ ವಿಶ್ವಕಪ್ ಕ್ರಿಕೆಟ್ ಪಂದ್ಯದ ವೀಕ್ಷಕ ವಿವರಣೆ

■ **ಸ್ಕೋಪ್ ಫೌಂಡೇಷನ್ :** ವಾಕಥಾನ್, ಸಾನ್ನಿಧ್ಯ : ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಉದ್ಘಾಟನೆ : ರಾಜವಂಶಸ್ಥೆ ಶ್ರೀಮತಿ ತ್ರಿಷಿಕಾ ಕುಮಾರಿ ದೇವಿ, ಮುಖ್ಯ ಅತಿಥಿಗಳು : ಸಂಸದ ಪ್ರತಾಪ್ ಸಿಂಹ, ಸ್ಥಳ: ಅರಮನೆ ಕೋಟೆ ಆಂಜನೇಯಸ್ವಾಮಿ ದೇವಸ್ಥಾನ, ಬೆಳಗ್ಗೆ 7ಕ್ಕೆ.

■ **ಡಾ. ರಾಜ್‌ಕುಮಾರ್ ಕಲಾ ಸೇವಾ ಟ್ರಸ್ಟ್, ಕೊಯಮತ್ತೂರು ಅರವಿಂದ ಕಣ್ಣಿನ ಆಸ್ಪತ್ರೆ :** ಬೆಳಗ್ಗೆ 7.30ಕ್ಕೆ ಪುನೀತ್ ರಾಜ್‌ಕುಮಾರ್ ಅವರ 2ನೇ ವರ್ಷದ ಪುಣ್ಯಸ್ಮರಣೆ ಅಂಗವಾಗಿ ಉಚಿತ ಕಣ್ಣಿನ ತಪಾಸಣಾ ಶಿಬಿರ, ಬೆಳಗ್ಗೆ 10.30ಕ್ಕೆ ಪುನೀತ್ ರಾಜ್‌ಕುಮಾರ್ ಭಾವಚಿತ್ರಕ್ಕೆ ಪುಷ್ಪಾರ್ಚನೆ, ಸಾನ್ನಿಧ್ಯ : ಇಳೈ ಆಳ್ವಾರ್ ಸ್ವಾಮೀಜಿ, ಉಪಸ್ಥಿತರು : ಸಂಸದ ಪ್ರತಾಪ್ ಸಿಂಹ, ಶಾಸಕ ಟಿ.ಎಸ್. ಶ್ರೀವತ್ಸ, ಮಾಜಿ ಶಾಸಕ ಎಸ್. ಬಾಲರಾಜ್, ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ. ರಾಜೀವ್, ಉದ್ಯಮಿ ರವಿಗೌಡ, ಚಂದ್ರಹಾಸ್, ಅರಣ್ಯಾಧಿಕಾರಿ ಡಿ. ಸಿದ್ದರಾಜು, ಮಹದೇವಸ್ವಾಮಿ, ಮಧ್ಯಾಹ್ನ 1ಕ್ಕೆ ಅನ್ನಸಂತರ್ಪಣೆ, ಮಧ್ಯಾಹ್ನ 2ಕ್ಕೆ ವಿವಿಧ ಗಾಯಕರಿಂದ ಗಾಯನ ಕಾರ್ಯಕ್ರಮ, ಸ್ಥಳ: ಪುರಭವನ.

■ **ಬನ್ನಿ ಮಹಾಕಾಳೇಶ್ವರಿ ಮತ್ತು ಆಯರಳ್ಳಿ ಮಾಕಮ್ಮನವರ ದೇವಸ್ಥಾನ ಟ್ರಸ್ಟ್:** ಶ್ರೀ ಬನ್ನಿ ಮಹಾಕಾಳೇಶ್ವರಿ ಮತ್ತು ಆಯರಳ್ಳಿ ಮಾಕಮ್ಮ ಮತ್ತು ಶ್ರೀ ಮಾಲಮ್ಮ ಜಾತ್ರಾ ಮಹೋತ್ಸವ, ಬೆಳಗ್ಗೆ 9ಕ್ಕೆ ವಾಹನೋತ್ಸವ ಪೂಜೆ, ಸ್ಥಳ: ಟ್ರಸ್ಟ್ ಆವರಣ, ಕುರುಬಾರಹಳ್ಳಿ, ಸಿದ್ದಾರ್ಥನಗರ.

■ **ರಾಮ್‌ಸನ್ಸ್ ಬೊಂಬೆ ಮನೆ:** ದಸರಾ ಬೊಂಬೆ ಪ್ರದರ್ಶನ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್ ಮುಖ್ಯ ರಸ್ತೆ, ಬೆಳಗ್ಗೆ 10ರಿಂದ ಸಂಜೆ 7 ಗಂಟೆವರೆಗೆ.

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ :** ಮಧುಮೇಹ ತೊಂದರೆಗೆ ಚಿಕಿತ್ಸಾ ಶಿಬಿರ, ಸ್ಥಳ: ಆಸ್ಪತ್ರೆ ಆವರಣ, ಲಲಿತಾದ್ರಿಪುರ ರಸ್ತೆ, ಬೆಳಗ್ಗೆ 10 ರಿಂದ.

■ **ಜನಪ ಸೇವಾ ಟ್ರಸ್ಟ್, ಮೇಲುಕೋಟೆ, ಜನಪದ ಪ್ರಕಾಶನ :** ಜೆ.ಸಿ. ಕುಮಾರಪ್ಪನವರ ಶಾಶ್ವತ ಆರ್ಥಿಕತೆ ಪುಸ್ತಕ ಬಿಡುಗಡೆ ಸಮಾರಂಭ, ಉಪಸ್ಥಿತರು : ಅಂಕಣಕಾರರಾದ ಎ. ನಾರಾಯಣ, ಟಿ.ಎಸ್. ವೇಣುಗೋಪಾಲ್, ಸ್ಥಳ: ರೋಟರಿ ಶಾಲೆ ಸಭಾಂಗಣ, ಜೆಎಲ್‌ಬಿ ರಸ್ತೆ, ಬೆಳಗ್ಗೆ 10ಕ್ಕೆ.

■ **ಸ್ಪಂದನಾ ಸಾಂಸ್ಕೃತಿಕ ಪರಿಷತ್ತು :** ದಸರಾ ಕವಿ–ಕಾವ್ಯ ಸಂಭ್ರಮ, ರಾಜ್ಯ ಮಟ್ಟದ ಕಾವ್ಯೋತ್ಸವ, ಸಂಜೆ ವಿಹಾರ ಪುಸ್ತಕ ಲೋಕಾರ್ಪಣೆ, ಡಾ.ಸಿಪಿಕೆ ಕಾವ್ಯ ಪ್ರಶಸ್ತಿ ಪ್ರದಾನ ಸಮಾರಂಭ, ಉದ್ಘಾಟನೆ : ಕವಯತ್ರಿ ಎಚ್.ಆರ್. ಲೀಲಾವತಿ, ಅಧ್ಯಕ್ಷತೆ : ಶಾಸ್ತ್ರೀಯ ಕನ್ನಡ ಅತ್ಯುನ್ನತ ಅಧ್ಯಯನ ಕೇಂದ್ರದ ಯೋಜನಾ ನಿರ್ದೇಶಕ ಪ್ರೊ ನೀಲಗಿರಿ ಎಂ. ತಳವಾರ್, ಆಶಯ ನುಡಿ : ಸ್ಪಂದನಾ ಸಾಂಸ್ಕೃತಿಕ ಪರಿಷತ್ ಸಂಸ್ಥಾಪಕ ಅಧ್ಯಕ್ಷ ಟಿ. ಸತೀಶ್ ಜವರೇಗೌಡ, ಪುಸ್ತಕ ಲೋಕಾರ್ಪಣೆ : ಹಿರಿಯ ಪತ್ರಕರ್ತರ ಅಂಶಿ ಪ್ರಸನ್ನಕುಮಾರ್, ಸ್ಥಳ:ನೇಗಿಲಯೋಗಿ ಮರುಳೇಶ್ವರ ಸೇವಾ ಭವನ, ಕೆ.ಜಿ. ಕೊಪ್ಪಲು, ಬೆಳಗ್ಗೆ 10ಕ್ಕೆ

■ **ಸ್ವಜನ್ಯ ಕಲಾ ವೇದಿಕೆ :** ಗಿರಿಜಾಶಾಸ್ತ್ರಿ ಅವರ ಸಿದ್ಧ ಮಾದರಿಗಳಾಚೆಗೆ ಕೃತಿ ಲೋಕಾರ್ಪಣೆ ಸಮಾರಂಭ, ಅಧ್ಯಕ್ಷತೆ : ಸಾಹಿತಿ ಡಾ. ಕಾಳೇಗೌಡ ನಾಗವಾರ, ಪುಸ್ತಕ ಬಿಡುಗಡೆ : ನಿವೃತ್ತ ಕನ್ನಡ ಪ್ರಾಧ್ಯಾಪಕ ಎ.ವಿ. ಸೂರ್ಯನಾರಾಯಣಸ್ವಾಮಿ, ಪುಸ್ತಕ ಪರಿಚಯ : ಸಾಹಿತಿ ಡಾ. ಕೆ. ಷರೀಫಾ, ಪ್ರಾಸ್ತಾವಿಕ ನುಡಿ : ಸ್ವಜನ್ಯ ಕಲಾ ವೇದಿಕೆ ಅಧ್ಯಕ್ಷ ಎಸ್. ಶಿಶಿರಂಜನ್, ಉಪಸ್ಥಿತರು : ಕೃತಿಕಾರ ಗಿರಿಜಾಶಾಸ್ತ್ರಿ, ರೂಪ ಪ್ರಕಾಶನ ಪ್ರಕಾಶಕ ಯು.ಎಸ್. ಮಹೇಶ್, ಸ್ಥಳ: ಧ್ವನ್ಯಾಲೋಕ, ಬೋಗಾದಿ ಮುಖ್ಯ ರಸ್ತೆ, ಬೆಳಗ್ಗೆ 10.30ಕ್ಕೆ.

■ **ಹಳೇನಾಡು ಕರ್ನಾಟಕ ಸ್ಮಾರ್ತ ಬ್ರಾಹ್ಮಣ ಸಂಘ:** ಸುವರ್ಣ ಮಹೋತ್ಸವ ಸಮಾರಂಭ, ಅಧ್ಯಕ್ಷತೆ: ಸಂಘದ ಅಧ್ಯಕ್ಷ ಎಸ್.ವಸಂತ್, ಸ್ಮರಣ ಸಂಚಿಕೆ ಬಿಡುಗಡೆ: ಶಾಸಕ ಶ್ರೀವತ್ಸ, ಮುಖ್ಯ ಅತಿಥಿಗಳು: ಸಂಸದ ಪ್ರತಾಪ್ ಸಿಂಹ, ಮಾಜಿ ಶಾಸಕ ಎಸ್.ಎ.ರಾಮದಾಸ್, ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ.ರಾಜೀವ್, ಮೈಸೂರು ನಗರ–ಜಿಲ್ಲಾ ಬ್ರಾಹ್ಮಣ ಸಂಘದ ಅಧ್ಯಕ್ಷ ಡಿ.ಟಿ.ಪ್ರಕಾಶ್, ವಿಪ್ರ ಮುಖಂಡ ಕೆ.ಆರ್. ಸತ್ಯನಾರಾಯಣ್, ಕೆ. ರಾಮಸ್ವಾಮಿ, ಸ್ಥಳ: ಶಾಂತಿನಿಕೇತನ, ಕೃಷ್ಣಮೂರ್ತಿಪುರಂ, ಬೆಳಗ್ಗೆ 10.30ಕ್ಕೆ.

■ **ಕರ್ನಾಟಕ ವಸ್ತು ಪ್ರದರ್ಶನ ಪ್ರಾಧಿಕಾರ, ಕರ್ನಾಟಕ ರತ್ನ ಅಪ್ಪು ಅಭಿಮಾನಿಗಳ ಬಳಗ :** ಪವರ್‌ಸ್ಟಾರ್ ಪುನೀತ್ ರಾಜ್‌ಕುಮಾರ್ ಅವರ 2ನೇ ವರ್ಷದ ನೆನಪು ಅಂಗವಾಗಿ ಗಂಧದಗುಡಿ ಚಿತ್ರಕಲಾ ಸ್ಪರ್ಧೆ, ಸ್ಥಳ: ಪಿ. ಕಾಳಿಂಗರಾವ್ ಗಾನ ಮಂಟಪ, ಬೆಳಗ್ಗೆ 10.30 ರಿಂದ.

■ **ಮೈಸೂರು ಜಿಲ್ಲಾ ಪ್ರಾಕೃತಿಕ ಚಿಕಿತ್ಸಾ ಪರಿಷತ್ :** ಅಕ್ಯೂಪ್ರೆಶರ್, ಸುಜೋಕ್ ಮತ್ತು ಅಕ್ಯೂಡಿಜಿಟಲ್ ಫಿಶಿಯೋಥೆರಪಿ ಚಿಕಿತ್ಸಾ ಶಿಬಿರ, ಸ್ಥಳ: ಸುಜ್ಞಾನ ಟ್ರಸ್ಟ್, ಕೆಹೆಚ್‌ಬಿ ಕಾಲೋನಿ, ಹೂಟಗಳ್ಳಿ, ಬೆಳಗ್ಗೆ 10.30 ರಿಂದ

■ **ಅಲ್ ಅನ್ಸಾರ್ ಆಸ್ಪತ್ರೆ:** ಸಹಾನುಭೂತಿ ಪ್ರಯಾಣ, ವೈದ್ಯಕೀಯ ಆರೈಕೆಯಲ್ಲಿ ಶ್ರೇಷ್ಠತೆಯ 10 ವರ್ಷಗಳ ಸಂಭ್ರಮಾಚರಣೆ, ಮುಖ್ಯ ಅತಿಥಿಗಳು: ಶಾಸಕ ತನ್ವೀರ್ ಸೇಠ್, ಸ್ಥಳ: ಆಸ್ಪತ್ರೆ ಆವರಣ, ಬೆಳಗ್ಗೆ 11ರಿಂದ.

■ **ಭಾರತೀ ಯೋಗಧಾಮ :** ಅರ್ಧ ಮಂಡಲೋತ್ಸವ, ವರ್ಷ ಪೂರ್ತಿ ನಡೆಯಲಿರುವ ಕಾರ್ಯಕ್ರಮಗಳ ಪ್ರಾರಂಭೋತ್ಸವ, ಬೆಳಗ್ಗೆ 10ಕ್ಕೆ ಉದ್ಘಾಟನೆ, ಉದ್ಘಾಟನೆ: ಅಷ್ಟಾಂಗಯೋಗ ವಿಜ್ಞಾನ ಮಂದಿರಮ್ ಅಧ್ಯಕ್ಷ ಡಾ.ಟಿ.ಶ್ರೀನಿವಾಸ್, ಅಭ್ಯಾಗತರು : ಸಂಸ್ಕೃತಿ ಚಿಂತಕ ಡಾ.ವಿ.ಬಿ.ಆರತಿ, ಅಧ್ಯಕ್ಷತೆ: ಭಾರತೀ ಯೋಗಧಾಮ ಸಂಸ್ಥಾಪಕ ಡಾ.ಕೆ.ಎಲ್.ಶಂಕರನಾರಾಯಣ ಜೋಯ್ಸ್, ಬೆಳಗ್ಗೆ 11.30ಕ್ಕೆ 'ಸ್ವಾಸ್ಥ'– ಒಂದು ಬಹುಶಾಸ್ತ್ರೀಯ ಚಿಂತನ (ಜ್ಯೌತಿಷ, ಆಯುರ್ವೇದ, ಧರ್ಮಶಾಸ್ತ್ರ, ಯೋಗ ವಿದ್ಯೆಗಳ ಹಿನ್ನೆಲೆಯಲ್ಲಿ ಸ್ವಾಸ್ಥ್ಯದ ಕುರಿತಾದ ಒಂದು ಆಪ್ತಸಂವಾದ), ಧರ್ಮಶಾಸ್ತ್ರ–ವಿದ್ವಾನ್ ಬಿ.ಜಿ.ಅನಂತ, ಆಯುರ್ವೇದ–ಡಾ.ಪ್ರಸನ್ನ ವೆಂಕಟೇಶ್, ಜ್ಯೌತಿಷ–ವಿ.ಗಣಪತಿ ಭಟ್ಟ, ಯೋಗಶಾಸ್ತ್ರ–ಮಧುಕೇಶ್ವರ ಹೆಗಡೆ, ಮಧ್ಯಾಹ್ನ 2.30ಕ್ಕೆ ಭಕ್ತಿ ಸಂಗೀತ, ಯುವಗಾಯಕಿ ಕು. ಸಾಧ್ವಿನಿ ಕೊಪ್ಪ ಮತ್ತು ಸಂಗಡಿಗರಿಂದ ಸಂಗೀತ ಕಾರ್ಯಕ್ರಮ, ಸಂಜೆ 4ಕ್ಕೆ ತ್ರಯೀಯೋಗ ಶಿಕ್ಷಣ ವಿಭಾಗದ ಲೋಕಾರ್ಪಣೆ ಹಾಗೂ ಸಮಾ ರೋಪ ಸಮಾರಂಭ, ಅಭ್ಯಾಗತರು: ನಿವೃತ್ತ ಪೀಠ ಪ್ರಾಧ್ಯಾಪಕ ಪ್ರೊ.ಕೆ.ಎಸ್.ಕಣ್ಣನ್, ಪತ್ರಕರ್ತ ಹರಿಪ್ರಕಾಶ್ ಕೋಣೆಮನೆ, ಸದ್ವಿದ್ಯಾ ಫೌಂಡೇಷನ್ ಅಧ್ಯಕ್ಷ ಜೊನಥನ್ ಮಾರ್ಕ್ ಫಿಶರ್, ಅಧ್ಯಕ್ಷತೆ: ಡಾ.ಕೆ.ಎಲ್.ಶಂಕರನಾರಾಯಣ ಜೋಯ್ಸ್, ಸಾನ್ನಿಧ್ಯ: ಶ್ರೀ ರಾಘವೇಶ್ವರ ಭಾರತೀ ಸ್ವಾಮೀಜಿ, ಸಂಜೆ 6.15ಕ್ಕೆ ಯೋಗಪ್ರದರ್ಶಿನಿ, ಸಂಸ್ಥೆಯ ವಿದ್ಯಾರ್ಥಿಗಳಿಂದ ಯೋಗಾಸನ ಪ್ರದರ್ಶನ, ಸ್ಥಳ: ಭಾರತೀ ಯೋಗಧಾಮ, ವಿಜಯಗಿರಿ, ಉತ್ತನಹಳ್ಳಿ.

■ **ರಂಗಾಸ್ಥೆ ಟ್ರಸ್ಟ್, ಬೆಂಗಳೂರು :** ದ್ರೋಪತಿ ಹೇಳ್ತವ್ಳೆ ನಾಟಕ ಪ್ರದರ್ಶನ, ನಿರ್ದೇಶನ : ಗಣೇಶ್ ಮಂದಾರ್ತಿ, ಉಪಸ್ಥಿತರು: ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ಎಸ್.ಟಿ.ರವಿಕುಮಾರ್, ಕೃಷ್ಣಮಿತ್ರ ಮಂಡಳಿ ಅಧ್ಯಕ್ಷ ರವಿಶಾಸ್ತ್ರಿ, ಹೋಟೆಲ್ ಮಾಲೀಕರ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ನಾರಾಯಣ ಹೆಗಡೆ, ಬಿಎನ್‌ಐ ಸ್ಥಳೀಯ ನಿರ್ದೇಶಕ ಕಿಶೋರ್ ರಾಚಯ್ಯ, ಸ್ಥಳ: ರಂಗಾಯಣ, ಮಧ್ಯಾಹ್ನ 3.30 ಮತ್ತು ಸಂಜೆ 7.30ಕ್ಕೆ

■ **ಶ್ರೀರಾಮಕೃಷ್ಣ ಆಶ್ರಮ :** ಸ್ವಾಮಿ ಸರ್ವಜಯಾನಂದ ಅವರಿಂದ ಶ್ರೀ ಶ್ರೀ ರಾಮಕೃಷ್ಣ ಚರಿತೆ ಕುರಿತು ಉಪನ್ಯಾಸ, ಸ್ಥಳ: ಆಶ್ರಮದ ಸ್ವಾಮಿ ಶಾಂಭವಾನಂದಜಿ ಸಭಾಂಗಣ, ಯಾದವಗಿರಿ, ಸಂಜೆ 6ಕ್ಕೆ.

■ **ರಂಗಾಯಣ:** ಭಾರತೀಯ ರಂಗ ಶಿಕ್ಷಣ ಕೇಂದ್ರದ ಕಲಾವಿದರಿಂದ ವೆನಿಸ್ಸಿನ ವ್ಯಾಪಾರ ನಾಟಕ ಪ್ರದರ್ಶನ, ಪರಿಕಲ್ಪನೆ ಮತ್ತು ನಿರ್ದೇಶನ: ಅಮಿತ್ ರೆಡ್ಡಿ, ಸ್ಥಳ: ಭೂಮಿಗೀತ, ರಂಗಮಂದಿರ, ಸಂಜೆ 6.30ಕ್ಕೆ.

ನಂಜನಗೂಡಿನಲ್ಲಿಂದು

■ **ಶಾಸಕ ದರ್ಶನ್ ಧ್ರುವನಾರಾಯಣ್ ಸ್ನೇಹ ಬಳಗ :** ದಿವಂಗತ ಆರ್.ಧ್ರುವನಾರಾಯಣ್ ಸವಿನೆನಪಿನ ಅಂಗವಾಗಿ ಕುಸ್ತಿ ಪಂದ್ಯಾವಳಿ, ಉದ್ಘಾಟನೆ : ಜಿಲ್ಲಾ ಉಸ್ತುವಾರಿ ಸಚಿವ ಡಾ. ಹೆಚ್.ಸಿ. ಮಹದೇವಪ್ಪ, ಮುಖ್ಯ ಅತಿಥಿಗಳು : ಶಾಸಕರಾದ ದರ್ಶನ್ ಧ್ರುವನಾರಾಯಣ್, ಗಣೇಶ್ ಪ್ರಸಾದ್, ಅನಿಲ್ ಚಿಕ್ಕಮಾದು, ಮಾಜಿ ಶಾಸಕ ಕಳಲೆ ಕೇಶವಮೂರ್ತಿ, ಸ್ಥಳ: ವಿದ್ಯಾವರ್ಧಕ ಶಾಲಾ ಮೈದಾನ, ಸಂಜೆ 4ಕ್ಕೆ.

ಮೈಸೂರು ವಿಶ್ವವಿದ್ಯಾನಿಲಯದ ಗೌರವ ಡಾಕ್ಟರೇಟ್ ಪುರಸ್ಕೃತ
ಡಾ.ಕೆ.ಬಿ.ಗಣಪತಿ ಅವರಿಗೆ ಬಿವಿಬಿ ವತಿಯಿಂದ ಸನ್ಮಾನ



ಮೈಸೂರು ವಿಶ್ವವಿದ್ಯಾನಿಲಯದಿಂದ ಅಕ್ಟೋಬರ್ 18ರಂದು ಗೌರವ ಡಾಕ್ಟರೇಟ್ ಸ್ವೀಕರಿಸಿದ ಭಾರತೀಯ ವಿದ್ಯಾಭವನದ (ಬಿವಿಬಿ) ಮೈಸೂರು ಕೇಂದ್ರದ ಅಧ್ಯಕ್ಷರೂ ಆದ 'ಮೈಸೂರು ಮಿತ್ರ' ಹಾಗೂ 'ಸ್ಟಾರ್ ಆಫ್ ಮೈಸೂರ್' ಸಂಸ್ಥಾಪಕ ಸಂಪಾದಕರಾದ ಡಾ. ಕೆ.ಬಿ.ಗಣಪತಿ ಅವರನ್ನು ಬಿವಿಬಿ, ಮೈಸೂರು ಕೇಂದ್ರದ ವ್ಯವಸ್ಥಾಪನಾ ಸಮಿತಿ ಹಾಗೂ ಬಿವಿಬಿ ಶಾಲಾ ಸಿಬ್ಬಂದಿ ವತಿಯಿಂದ ವಿಜಯನಗರ ಮೊದಲ ಹಂತದ ಬಿವಿಬಿ ಆವರಣದಲ್ಲಿ ಶನಿವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಸನ್ಮಾನಿಸಲಾಯಿತು. ಚಿತ್ರದಲ್ಲಿ (ಎಡದಿಂದ) ಬಿವಿಬಿ ಶಾಲಾ ಪ್ರಿನ್ಸಿಪಾಲ್ ಎಸ್.ಲೇಖಾ ನಾಯರ್; ಕಾರ್ಯಕಾರಿ ಸಮಿತಿ (ಇಸಿ) ಸದಸ್ಯ ಮರಿಗೌಡ; ಆಡಳಿತಾಧಿಕಾರಿ ಎಸ್.ಆರ್.ರವಿಕುಮಾರ್; ಇಸಿ ಎಸ್.ಎ.ತಿಮ್ಮಯ್ಯ; ಗೌರವ ಕಾರ್ಯದರ್ಶಿ ಪಿ.ಎಸ್.ಗಣಪತಿ; ಇಸಿ ಟಿ.ಎಸ್.ಗಂಗಾಧರ್; ಉಪಾಧ್ಯಕ್ಷ ಡಾ.ಸಿ.ನಾಗಣ್ಣ; ಗೌರವ ಖಜಾಂಚಿ ಡಾ.ಎ.ಟಿ.ಭಾಷ್ಯಂ; ಇಸಿ ಸದಸ್ಯರಾದ ಡಾ.ಜೆ.ವಿ.ಗಾಯತ್ರಿ; ಡಾ.ತುಳಸಿ ರಾಮಚಂದ್ರ; ಕೆ.ಎಂ.ಹರೀಶ್; ವಿಂಗ್ ಕಮಾಂಡರ್ (ನಿವೃತ್ತ) ಎಸ್.ಸಿ.ಬಾಲಸುಬ್ರಮಣ್ಯಂ ಮತ್ತು ಬಿ.ಯೋಗೀಶ್ ಅವರನ್ನು ಕಾಣಬಹುದು.

ಮಾಜಿ ಮುಖ್ಯಮಂತ್ರಿ ಕುಮಾರಸ್ವಾಮಿ ವಿರುದ್ಧ ಮಾತನಾಡಿದರೆ ನೆಟ್ಟಗಿರಲ್ಲ...!?

● ಕಾಂಗ್ರೆಸ್ ವಕ್ತಾರ ಲಕ್ಷ್ಮಣ್‌ಗೆ ಜೆಡಿಎಸ್ ಮುಖಂಡರ ಬೆದರಿಕೆ ಆರೋಪ ● ಪೊಲೀಸ್ ಆಯುಕ್ತರಿಗೆ ದೂರು

ಮೈಸೂರು, ಅ.28– ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಅವರ ಬಗ್ಗೆ ಮಾತನಾಡದಂತೆ ಕಾಂಗ್ರೆಸ್ ವಕ್ತಾರ ಎಂ.ಲಕ್ಷ್ಮಣ್ ಅವರಿಗೆ ಕೆಲವರು ಜೀವ ಬೆದರಿಕೆ ಹಾಕಿರುವುದಾಗಿ ಪೊಲೀಸರಿಗೆ ದೂರು ನೀಡಲಾಗಿದೆ. ಕಾಂಗ್ರೆಸ್ ಜಿಲ್ಲಾಧ್ಯಕ್ಷ ಡಾ.ಬಿ.ಜೆ. ವಿಜಯ್‌ಕುಮಾರ್, ನಗರಾಧ್ಯಕ್ಷ ಆರ್. ಮೂರ್ತಿ ಅವರೊಂದಿಗೆ ಎಂ.ಲಕ್ಷ್ಮಣ್, ಮೈಸೂರು ನಗರ ಪೊಲೀಸ್ ಆಯುಕ್ತ ಬಿ.ರಮೇಶ್ ಅವರಿಗೆ ಶನಿವಾರ ದೂರು ಸಲ್ಲಿಸಿದರು. ಈ ವೇಳೆ ಕಾಂಗ್ರೆಸ್ ನಗರ ಪ್ರಧಾನ ಕಾರ್ಯದರ್ಶಿ ಶಿವಣ್ಣ, ನಾಗೇಶ್, ಮಹೇಶ್ ಸೇರಿದಂತೆ ಹಲವು ಮುಖಂಡರು ಹಾಜರಿದ್ದರು.



ಅಕ್ಟೋಬರ್ 27ರಂದು ಕೆಲವರು ನನ್ನ ಮೊಬೈಲ್‌ಗೆ ಕರೆ ಮಾಡಿ, ಕುಮಾರಸ್ವಾಮಿ ಅವರ ವಿರುದ್ಧ ಯಾವ ಕಾರಣಕ್ಕೂ ಮಾತನಾಡಬಾರದು. ಏನಾದರು ಮಾತನಾಡಿದರೆ ಪರಿಸ್ಥಿತಿ ನೆಟ್ಟಗಿರುವುದಿಲ್ಲ ಎಂದು ಜೀವ ಬೆದರಿಕೆ ಹಾಕಿದ್ದಾರೆ. ಅಲ್ಲದೆ ಅ.28ರಂದು ಬೆಳಗ್ಗೆ 10 ಗಂಟೆ ಸಮಯದಲ್ಲಿ ಕಲಾಮಂದಿರ ಆವರಣದಲ್ಲಿ ಕೆಲ ಜೆಡಿಎಸ್ ಮುಖಂಡರು ಹಾಗೂ ಕುಮಾರಸ್ವಾಮಿ ಅವರ ಅಭಿಮಾನಿಗಳು, ಎಂ.ಲಕ್ಷ್ಮಣ್, ಕುಮಾರಸ್ವಾಮಿಯವರ ಬಗ್ಗೆ ಪತ್ರಿಕಾಗೋಷ್ಠಿಯಲ್ಲಿ ಬಾಯಿಗೆ ಬಂದಂತೆ ಮಾತನಾಡುತ್ತಿದ್ದಾರೆ. ಇವರಿಗೆ ಬುದ್ಧಿ ಕಲಿಸಬೇಕು. ಅವರ ಮನೆಗೆ ಹೋಗಿ, ವಾಕಿಂಗ್ ಮಾಡುವಾಗ ಅಟ್ಯಾಕ್ ಮಾಡೋಣ ಎಂದು ಮಾತನಾಡಿಕೊಳ್ಳುತ್ತಿದ್ದರು ಎಂದು ಅಲ್ಲೇ ಇದ್ದ ವ್ಯಕ್ತಿಯೊಬ್ಬರು ನನಗೆ ಮಾಹಿತಿ ನೀಡಿದ್ದಾರೆ. ನಾನು ಕಾಂಗ್ರೆಸ್ ಪಕ್ಷದ ಅಧಿಕೃತ ರಾಜ್ಯ ವಕ್ತಾರ. ಪಕ್ಷ, ಮುಖಂಡರು ಮತ್ತು ಸರ್ಕಾರದ ಬಗ್ಗೆ ಆಧಾರರಹಿತ ಆರೋಪ ಮಾಡಿದಾಗ ಉತ್ತರ ಕೊಡುವುದೇ ವಕ್ತಾರನ ಕೆಲಸ. ಪ್ರಜಾಪ್ರಭುತ್ವದಲ್ಲಿ ಇಂತಹ ಬೆದರಿಕೆಗಳು ಹಾಗೂ ಗೂಂಡಾವರ್ತನೆಗಳಿಗೆ ಅವಕಾಶವಿರುವುದಿಲ್ಲ. ಆದ್ದರಿಂದ ಬೆದರಿಕೆ ಹಾಕುತ್ತಿರುವ ವ್ಯಕ್ತಿಗಳ ವಿರುದ್ಧ ಎಫ್‌ಐಆರ್ ದಾಖಲಿಸಿ, ಸೂಕ್ತ ಕ್ರಮ ಜರುಗಿಸಬೇಕು. ಜೊತೆಗೆ ನನಗೆ ಸೂಕ್ತ ಭದ್ರತೆ ನೀಡುವಂತೆ ಎಂ.ಲಕ್ಷ್ಮಣ್ ದೂರಿನಲ್ಲಿ ಕೋರಿದ್ದಾರೆ.

ಕೆಆರ್‌ಎಸ್ ರಸ್ತೆಯಲ್ಲಿ ಸರ್ಕಾರಿ ಜಾಗ ಒತ್ತುವರಿ ಮಾಡಿ ಕಟ್ಟಡ ನಿರ್ಮಾಣ

ತೆರವುಗೊಳಿಸದಿದ್ದರೆ ನೆಲಸಮ: ಮುಡಾ ನೋಟಿಸ್

ಮೈಸೂರು, ಅ.28(ಆರ್‌ಕೆ)– ಮೈಸೂರಿನ ಗೋಕುಲಂ 1ನೇ ಹಂತದಲ್ಲಿ ಕೆಆರ್‌ಎಸ್ ರಸ್ತೆಗೆ ಹೊಂದಿಕೊಂಡಂತಿರುವ ಮುಡಾ ಜಾಗ ಒತ್ತುವರಿ ಮಾಡಿ ಅನಧಿಕೃತವಾಗಿ ಕಟ್ಟಡ ನಿರ್ಮಿಸಲಾಗುತ್ತಿದೆ. ಈ ಕುರಿತು ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ (ಮುಡಾ)ದ ವಲಯ ಕಚೇರಿ–4ರ ವಲಯಾಧಿಕಾರಿಗಳು ಅ.27ರಂದು ಜೆ.ಹೊನ್ನಮ್ಮ ಮತ್ತು ಸೀತಾ ಎಂಬುವರಿಗೆ ನೋಟಿಸ್ ಜಾರಿ ಮಾಡಿದ್ದಾರೆ. ಮೈಸೂರು ನಗರ, ದೇವರಾಜ ಮೊಹಲ್ಲಾ, ಗೋಕುಲಂ 1ನೇ ಹಂತದಲ್ಲಿ ಕೆಆರ್‌ಎಸ್ ರಸ್ತೆಗಭಿಮುಖವಾಗಿರುವ 97ನೇ ಸಂಖ್ಯೆಯ ಸ್ವತ್ತಿನಲ್ಲಿ ಅನಧಿಕೃತವಾಗಿ ಮುಡಾ ಜಾಗ ಒತ್ತುವರಿ ಮಾಡಿ ಕಟ್ಟಡ ಮತ್ತು ಕಾಂಪೌಂಡ್ ನಿರ್ಮಿಸಲಾಗುತ್ತಿದೆ ಎಂದು ತಿಳುವಳಿಕೆ ಪತ್ರದಲ್ಲಿ ತಿಳಿಸಿದ್ದಾರೆ.

ಪ್ರಾಧಿಕಾರದಿಂದ (76.00+ 35.50) 2x64.21 ಅಡಿ ಜಾಗವನ್ನು ಮಂಜೂರು ಮಾಡಲಾಗಿದೆ. ಆದರೆ ಪಕ್ಕದಲ್ಲಿರುವ ಪ್ರಾಧಿಕಾರದ ಆಸ್ತಿಯನ್ನು ಒತ್ತುವರಿ ಮಾಡಿ ಕಟ್ಟಡ ನಿರ್ಮಿಸಿರುವುದಲ್ಲದೇ 2 ಮರಗಳನ್ನೂ ಸೇರಿಸಿಕೊಂಡು ಕಾಂಪೌಂಡ್ ನಿರ್ಮಿಸಲು ಅಡಿಪಾಯ ಕಾಮಗಾರಿ ಕೈಗೊಂಡಿದ್ದು, ಒತ್ತುವರಿ ಜಾಗದ ಕಟ್ಟಡ ಹಾಗೂ ಕಾಂಪೌಂಡ್ ಅಡಿಪಾಯವನ್ನು ತೆರವುಗೊಳಿಸುವಂತೆ ಸೂಚಿಸಿರುವ ವಲಯಾಧಿಕಾರಿಗಳು, ತಪ್ಪಿದಲ್ಲಿ ನಿಯಮಾನುಸಾರ ಪ್ರಾಧಿಕಾರದ ವತಿಯಿಂದ ಅನಧಿಕೃತ ಭಾಗವನ್ನು ನೆಲಸಮ ಮಾಡಿ ತೆರವುಗೊಳಿಸಲು ಕ್ರಮ ಕೈಗೊಳ್ಳುತ್ತೇವೆ ಎಂದು ಎಚ್ಚರಿಕೆ ನೀಡಿದ್ದಾರೆ.



ಮುಡಾ ಜಾಗ ಒತ್ತು ವರಿ ಮಾಡಿ ಅನಧಿಕೃತವಾಗಿ ಕಟ್ಟಡ ನಿರ್ಮಿಸುತ್ತಿರುವುದು.

ಫ್ರೀಡಂ ರಿಫೈನ್ಡ್ ಸನ್‌ಫ್ಲವರ್ ಆಯಿಲ್ 10 ಲೀಟರ್ ಜಾರ್ ಬಿಡುಗಡೆ



ಮೈಸೂರು, ಅ.28– ಜೆಮಿನಿ ಎಡಿಬಲ್ಸ್ ಅಂಡ್ ಫ್ಯಾಟ್ಸ್ (ಜಿಇಎಫ್) ಇಂಡಿಯಾ ವತಿಯಿಂದ 10 ಲೀಟರ್ ಫ್ರೀಡಂ ರಿಫೈನ್ಡ್ ಸನ್ ಫ್ಲವರ್ ಆಯಿಲ್ ಶೇಖರಣೆಯ ಬಹುಬಳಕೆ ಜಾರ್ ಅನ್ನು ಇತ್ತೀಚೆಗೆ ಬಿಡುಗಡೆ ಮಾಡಿದೆ.

ಬ್ರ್ಯಾಂಡ್ ಅಂಬಾಸಿಡರ್‌ಗಳಲ್ಲಿ ಒಬ್ಬರಾದ ಜನಪ್ರಿಯ ನಟಿ ರಾಧಿಕಾ ಪಂಡಿತ್, ಜಿಇಎಫ್ ಇಂಡಿಯಾದ ಕಂಪನಿಯ ಹಿರಿಯ ಉಪಾಧ್ಯಕ್ಷ ಪಿ.ಚಂದ್ರಶೇಖರ ರೆಡ್ಡಿ ಹಾಗೂ ಆಡಳಿತ ಮಂಡಳಿಯವರು ಜೊತೆಗೂಡಿ 10 ಲೀಟರ್ ಆಯಿಲ್ ಶೇಖರಣೆಯುಳ್ಳ ನೂತನ ಅತ್ಯಾಕರ್ಷಕ ಜಾರ್ ಅನ್ನು ಬಿಡುಗಡೆ ಮಾಡಿದ್ದಾರೆ.

ಈ ವೇಳೆ ಮಾತನಾಡಿದ ಪಿ.ಚಂದ್ರಶೇಖರರೆಡ್ಡಿ, ನಮ್ಮದು ಗ್ರಾಹಕ ಕೇಂದ್ರಿತ ಸಂಸ್ಥೆಯಾಗಿದ್ದು ಅವರ ಅಗತ್ಯತೆಗಳ ಬಗ್ಗೆ ನಿರಂತರವಾಗಿ ಮೌಲ್ಯಮಾಪನ ನಡೆಸಲಾಗುತ್ತಿದೆ. ರಾಕಿಂಗ್ ಜೋಡಿ ಯಶ್ ಹಾಗೂ ರಾಧಿಕಾ ಅವರು ನಮ್ಮ ಬ್ರ್ಯಾಂಡ್ ಅಂಬಾಸಿಡರ್‌ಗಳಾಗಿರುವುದರಿಂದ ಕರ್ನಾಟಕದ ಜನರೊಂದಿಗೆ ಸಂಪರ್ಕ ಸಾಧಿಸಿ, ಉತ್ಪನ್ನದ ಗುಣಮಟ್ಟದ ಬಗ್ಗೆ ಅರಿವು ಮೂಡಿಸಲು ತುಂಬಾ ಸಹಕಾರಿಯಾಯಿತು ಎಂದು ಹೇಳಿದರು.

ನಮ್ಮದು ಸೂರ್ಯಕಾಂತಿ ಎಣ್ಣೆ ವಿಭಾಗದಲ್ಲಿ ದೇಶದಲ್ಲೇ ನಂ.1 ಮಾರಾಟದ ಬ್ರ್ಯಾಂಡ್ ಆಗಿದೆ. 200 ಮಿ.ಲೀ., 500 ಮಿ.ಲೀ, 1 ಲೀಟರ್ ಪೌಚ್, 500 ಮಿ.ಲೀ., 1 ಲೀಟರ್ ಹಾಗೂ 2 ಲೀಟರ್ ಪೆಟ್ ಬಾಟಲ್, 5 ಲೀಟರ್ ಹೆಚ್‌ಡಿಪಿಇ ಜಾರ್ ಜೊತೆಗೆ ಇದೀಗ ಹೊಸ ವಿನ್ಯಾಸದ 10 ಲೀಟರ್ ಜಾರ್ ಪರಿಚಯಿಸಿರುವುದಕ್ಕೆ ಸಂತಸವಿದೆ. ಉತ್ಪನ್ನ ಬಳಸಿದ ಬಳಿಕ ಈ ಅತ್ಯಾಕರ್ಷಕ ಜಾರ್‌ನಲ್ಲಿ ಅಗತ್ಯ ವಸ್ತುಗಳ ಶೇಖರಣೆ ಮಾಡಿಕೊಳ್ಳಬಹುದು. ಇದು ಟ್ಯಾಂಪರ್ ಪ್ರೂಫ್ ಮುಚ್ಚಳ ಹೊಂದಿದ್ದು, ಆಯಿಲ್ ಅನ್ನು ಸುಲಭವಾಗಿ ಸುರಿಯುವಂತೆ ವಿನ್ಯಾಸಗೊಳಿಸಲಾಗಿದೆ. ಆದ್ದರಿಂದ ಗ್ರಾಹಕರಿಗೆ ತುಂಬಾ ಇಷ್ಟವಾಗಲಿದೆ. ಹಣಕ್ಕಿಂತ ಫ್ರೀಡಂ(ಸ್ವಾತಂತ್ರ್ಯ) ಮೌಲ್ಯಯುತವಾದದ್ದು. ಈ ನಿಟ್ಟಿನಲ್ಲಿ ನಮ್ಮ ಆಹಾರ ಆಸ್ವಾದಿಸುವ ಸ್ವಾತಂತ್ರ್ಯ ಒದಗಿಸಿದೆ ಎಂದು ಹರ್ಷ ವ್ಯಕ್ತಪಡಿಸಿದರು.

ಭಾನುವಾರ ದುಬೈನಲ್ಲಿ ಬೆಂಗಳೂರು ನಿರ್ಮಾತೃ
ಕೆಂಪೇಗೌಡ ಉತ್ಸವ

ಬೆಂಗಳೂರು, ಅ.28– ದುಬೈನಲ್ಲಿ ಭಾನುವಾರ (ಅ.29) ಬೆಂಗಳೂರು ನಿರ್ಮಾತೃ ಕೆಂಪೇಗೌಡ ಉತ್ಸವ ನಡೆಯಲಿದೆ. ಯುಎಇ ಒಕ್ಕಲಿಗರ ಸಂಘದಿಂದ ಕೆಂಪೇಗೌಡ ಉತ್ಸವ ಆಯೋಜನೆ ಮಾಡಲಾಗಿದ್ದು, ಆದಿಚುಂಚನಗಿರಿ ಮಠದ ಶ್ರೀ ನಿರ್ಮಲಾನಂದನಾಥ ಸ್ವಾಮೀಜಿ ಸಾನಿಧ್ಯದಲ್ಲಿ ಕೆಂಪೇಗೌಡ ಉತ್ಸವ ನಡೆಯಲಿದೆ. ಕಾರ್ಯಕ್ರಮದಲ್ಲಿ ಮಾಜಿ ಸಿಎಂ ಹೆಚ್.ಡಿ ಕುಮಾರಸ್ವಾಮಿ ಭಾಗವಹಿಸುತ್ತಿದ್ದು, ಸಚಿವರಾದ ಕೆ.ವೆಂಕಟೇಶ್, ಮಾಜಿ ಸಚಿವ ಸಿ.ಪಿ ಯೋಗೇಶ್ವರ್ ಸೇರಿದಂತೆ ಕರ್ನಾಟಕದಿಂದ ಅನೇಕ ಗಣ್ಯರು ಭಾಗವಹಿಸಲಿದ್ದಾರೆ.

ಈಗಾಗಲೇ ದುಬೈನಲ್ಲಿರುವ ಮಾಜಿ ಸಿಎಂ ಹೆಚ್.ಡಿ.ಕುಮಾರಸ್ವಾಮಿ ಅವರನ್ನು ದುಬೈ ಒಕ್ಕಲಿಗ ಸಂಘದ ಸಂಚಾಲಕ ಕಿರಣ್‌ಗೌಡ ಸೇರಿದಂತೆ ಸಂಘದ ಸದಸ್ಯರು ಸ್ವಾಗತಿಸಿ ಬರಮಾಡಿಕೊಂಡರು.

ಅಕ್ರಮ, ಅನೈತಿಕ ಚಟುವಟಿಕೆ ತಾಣವಾಗೋಯ್ತು ಮೈಸೂರಿನ ಜಿಲ್ಲಾಧಿಕಾರಿಗಳ ಹಳೇ ಕಚೇರಿ ಕಟ್ಟಡ!
ಮದ್ಯ ಪ್ರಿಯರ 'ಗುಂಡು ಪಾರ್ಟಿ'ಗೆ ಹೇಳಿ ಮಾಡಿಸಿದ ಜಾಗ







● ಎಲ್ಲೆಂದರಲ್ಲಿ ಬಿದ್ದಿರುವ ಬಿಯರ್ ಬಾಟಲ್‌ಗಳು ● ಸಿಗರೇಟ್ ಪ್ಯಾಕ್‌ಗಳಿಗಂತೂ ಲೆಕ್ಕವೇ ಇಲ್ಲ ● ಚಾಪೆ ಹಾಸಿಕೊಂಡು ಪಾನಪ್ರಿಯರ ಮದ್ಯಾರಾಧನೆ! ● ಲ್ಯಾನ್ಸ್‌ಡೌನ್ ಬಿಲ್ಡಿಂಗ್ ಗತಿಯೇ ಇದಕ್ಕೂ ಬರಬಹುದೆ...?

ಬಾಪುಲಿಂಗರಾಜ್ ಅರಸ್

ಮೈಸೂರು, ಅ.28– ಮೈಸೂರಿನ ಜಿಲ್ಲಾಧಿಕಾರಿಗಳ ಕಚೇರಿ ಸಿದ್ಧಾರ್ಥನಗರದ ಹೊಸ ಕಟ್ಟಡಕ್ಕೆ ಸ್ಥಳಾಂತರಗೊಂಡಿದೆ. ಖಾಲಿ ಇರುವ ಹಳೆ ಕಚೇರಿ ಕಟ್ಟಡ ಶತಮಾನೋತ್ಸವ ಸಂಭ್ರಮ ಕಂಡಿದ್ದು, ಮಹಾರಾಜರ ಕಾಲದಲ್ಲಿ ದಿವಾನರು ಇದೇ ಕಚೇರಿಯಲ್ಲಿ ಕುಳಿತು ಆಡಳಿತ ನಡೆಸುತ್ತಿದ್ದ ಈ ಮಹತ್ವದ ಸ್ಥಳ ಇಂದು ಅಕ್ರಮ, ಅನೈತಿಕ ಚಟುವಟಿಕೆಯ ತಾಣವಾಗಿ ಮಾರ್ಪಟ್ಟಿದೆ. ಒಂದು ರೀತಿ ಭೂತ ಬಂಗಲೆಯಂತಿರುವ ಈ ಕಟ್ಟಡದ ಸುತ್ತಮುತ್ತ ರಾತ್ರಿ ವೇಳೆ ಗುಂಡು ಪಾರ್ಟಿಗಳು ಎಗ್ಗಿಲ್ಲದೆ ನಡೆಯುತ್ತಿವೆ.

ಮೈಸೂರಿನ ಜಿಲ್ಲಾಧಿಕಾರಿ ಕಚೇರಿಯನ್ನು ಸಿದ್ಧಾರ್ಥನಗರದಲ್ಲಿರುವ ನೂತನ ಕಟ್ಟಡಕ್ಕೆ ಕೆಲ ತಿಂಗಳ ಹಿಂದೆ ಸ್ಥಳಾಂತರ ಮಾಡಲಾಯಿತು. ಹಳೆ ಕಚೇರಿ ಕಟ್ಟಡದಲ್ಲಿದ್ದ ಆಡಳಿತದ ಎಲ್ಲಾ ಶಾಖೆಗಳನ್ನು ನೂತನ ಕಚೇರಿಗೆ ವರ್ಗಾಯಿಸಲಾಯಿತು.

ಈಗ ಖಾಲಿ ಇರುವ ಪಾರಂಪರಿಕ ಶೈಲಿಯ ಡಿಸಿ ಹಳೆ ಕಚೇರಿ ಕಟ್ಟಡದಲ್ಲಿ ವಾರ್ ಮ್ಯೂಸಿಯಂ ಮಾಡಲು ಉದ್ದೇಶಿಸಲಾಗಿದೆ. ಸದಾ ಜನರಿಂದ ಗಿಜಿಗುಡುತ್ತಿದ್ದ ಈ ಕಟ್ಟಡ ಈಗ ಭೂತ ಬಂಗಲೆಯಂತೆ ಕಾಣಿಸುತ್ತಿದೆ.

ಮೈಸೂರು ಮಹಾರಾಜರ ಕಾಲದಲ್ಲಿ, ಅದೂ 18ನೇ ಶತಮಾನದ ಮಧ್ಯ ಭಾಗದಲ್ಲಿ ಇದನ್ನು ನಿರ್ಮಾಣ ಮಾಡಲಾಗಿತ್ತು. ಮೈಸೂರು ರೆಸಿಡೆಂಟ್ ಸರ್ ಜೇಮ್ಸ್ ಗಾರ್ಡನ್ ಅವರಿಗೆ ಪಾರಂಪರಿಕ ಶೈಲಿಯ ಈ ಕಟ್ಟಡ ಸಮರ್ಪಿಸಲಾಗಿದೆ. 1895ರಲ್ಲಿ ಔಪಚಾರಿಕವಾಗಿ ಪ್ರಾರಂಭವಾದ ಈ ಕಟ್ಟಡದಲ್ಲಿ ಬ್ರಿಟಿಷ್ ಪ್ರತಿನಿಧಿಗಳಿದ್ದರು.

ಐತಿಹಾಸಿಕ ಪರಂಪರೆ ಹಾಗೂ ಆಧುನಿಕ ಸ್ಪರ್ಶದ ಉತ್ತಮ ಸಂಯೋಜನೆಯೊಂದಿಗೆ ನಿರ್ಮಾಣಗೊಂಡಿರುವ ಪಾರಂಪರಿಕ ಶೈಲಿಯ ಈ ಕಟ್ಟಡದಲ್ಲಿ ಮಹಾರಾಜರ ಕಾಲದಲ್ಲಿ ದಿವಾನರು ಆಳ್ವಿಕೆ ನಡೆಸುತ್ತಿದ್ದರು. ಸ್ವಾತಂತ್ರ್ಯ ನಂತರದಲ್ಲಿ ಜಿಲ್ಲಾಧಿಕಾರಿ ಕಚೇರಿಯಾಗಿ ಮಾರ್ಪಟ್ಟ ಈ ಕಟ್ಟಡದಲ್ಲಿ ಇದುವರೆಗೆ ನೂರಾರು ಜಿಲ್ಲಾಧಿಕಾರಿಗಳು ಕಾರ್ಯ ನಿರ್ವಹಿಸಿದ್ದರು.


> ಜಿಲ್ಲಾಧಿಕಾರಿಗಳ ಹಳೆ ಕಚೇರಿ ಕಟ್ಟಡ ಹಾಗೂ ಎದುರಿನ ಪಾರ್ಕ್ ನಿರ್ಜನ ಪ್ರದೇಶವಾಗಿದೆ. ಈ ಹಿನ್ನೆಲೆಯಲ್ಲಿ ಅಲ್ಲಿಗೆ 24 ಗಂಟೆ ಪೊಲೀಸರು ಇಲ್ಲವೇ ಹೋಂ ಗಾರ್ಡ್ ನಿಯೋಜನೆ ಮಾಡಲು ಕ್ರಮ ಕೈಗೊಳ್ಳಲಾಗುವುದು. ಈ ಸಂಬಂಧ ಪೊಲೀಸ್ ಆಯುಕ್ತರಿಗೆ ಪತ್ರ ಬರೆಯುತ್ತೇನೆ. **–ಡಾ.ಕೆ.ವಿ.ರಾಜೇಂದ್ರ, ಡಿಸಿ.**

ಇಂತಹ ಮಹತ್ವ ಪಡೆದಿರುವ ಅತೀ ಸುಂದರ ಕಟ್ಟಡ ಈಗ ಪಾಳು ಬಿದ್ದಿದೆ. ಕಟ್ಟಡವನ್ನು ನವೀಕರಿಸದ ಕಾರಣ ಕಟ್ಟಡದ ಕೆಲವು ಭಾಗ ಶಿಥಿಲಾವಸ್ಥೆ ತಲುಪಿದೆ. ಕಟ್ಟಡದ ನೆಲ ಭಾಗ ಅಲ್ಲಲ್ಲಿ ಕಿತ್ತು ಬಂದಿದೆ.

ಹಗಲು ವೇಳೆ ಕೂಡ ಈ ಕಟ್ಟಡದತ್ತ ಯಾರೂ ಸುಳಿಯುವುದಿಲ್ಲ. ರಾತ್ರಿ ವೇಳೆ ಗುಂಡು ಪಾರ್ಟಿ ಮಾಡಲು ಈ ಸ್ಥಳ ಹೇಳಿ ಮಾಡಿಸಿದಂತಿದೆ. ರಾತ್ರಿಯಾದರೆ ಇತ್ತ ಯಾರೂ ಸುಳಿಯದ ಕಾರಣ ಮದ್ಯಪ್ರಿಯರು ಈ ಸ್ಥಳ ಸೂಕ್ತವೆಂದು ಆಯ್ಕೆ ಮಾಡಿಕೊಂಡಿದ್ದಾರೆ. ಕಟ್ಟಡದ ಹಿಂಭಾಗದಲ್ಲಿ ಬಿಯರ್ ಬಾಟಲ್ ಹಾಗೂ ಜ್ಯೂಸ್ ಬಾಟಲ್‌ಗಳು ರಾಶಿ ಬಿದ್ದಿವೆ. ಸಿಗರೇಟ್ ಪ್ಯಾಕ್‌ಗಳಿಗಂತೂ ಲೆಕ್ಕವೇ ಇಲ್ಲ. ಚಾಪೆ ಹಾಸಿಕೊಂಡು ಗುಂಡು ಪಾರ್ಟಿ ಮಾಡಿರುವುದು ಕಣ್ಣಿಗೆ ರಾಚುತ್ತಿದೆ.

ಜಿಲ್ಲಾಧಿಕಾರಿ ಕಚೇರಿಯನ್ನು ನೂತನ ಕಟ್ಟಡಕ್ಕೆ ಸ್ಥಳಾಂತರ ಮಾಡಿದ ನಂತರ ಈ ಕಟ್ಟಡವನ್ನು ತಕ್ಷಣ ಸುರಕ್ಷತೆ ಮಾಡಬೇಕಿತ್ತು. ಆದರೆ ಕಳೆದ ಕೆಲವು ತಿಂಗಳಿನಿಂದ ಪಾಳು ಬಿಟ್ಟಿರುವುದರಿಂದ ಅನೈತಿಕ ಚಟುವಟಿಕೆಯ ತಾಣವಾಗಿದೆ. ಈ ಪಾರಂಪರಿಕ ಕಟ್ಟಡವನ್ನು ಹೀಗೇ ಬಿಟ್ಟರೆ ಇದಕ್ಕೂ ಲ್ಯಾನ್ಸ್‌ಡೌನ್ ಬಿಲ್ಡಿಂಗ್ ಗತಿ ಬರುವುದರಲ್ಲಿ ಅನುಮಾನವಿಲ್ಲ.





ನಕ್ಕರೆ ಅದೇ ಸ್ವರ್ಗ

ಪತ್ನಿ : ನಾನು ನಿಮಗಾಗಿ ಸಂಪೂರ್ಣ ಜಗತ್ತಿನ ಜೊತೆ ಜಗಳವಾಡ ಬಲ್ಲೆ.
ಪತಿ : ಆದರೆ ನೀನು ಯಾವಾಗಲೂ ನನ್ನ ಜೊತೆಯೇ ಹೆಚ್ಚು ಜಗಳವಾಡುತ್ತಿರುವೆ...?
ಪತ್ನಿ : ಹೌದು, ನೀವೇ ತಾನೆ ನನ್ನ ಪ್ರಪಂಚ

ಮೈಸೂರು ಮಿತ್ರ

ಭಾನುವಾರ, 29 ಅಕ್ಟೋಬರ್ 2023

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತವಾಹಿನಿ..........

ನಿಮ್ಮಲ್ಲಿರುವ ನೈಪುಣ್ಯತೆಯನ್ನು ಗುರುತಿಸಿ, ಅದನ್ನು ಬೆಳೆಸುವ ಪ್ರಯತ್ನ ಮಾಡಿ. ಅಜ್ಞಾನ ಎನ್ನುವುದು ಒಂದು ಅಂಗವಿಕಲತೆ – ನುಡಿಮುತ್ತು

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಮನೆ ಗೆದ್ದು ಮಾರು ಗೆಲ್ಲು

ನಿಮ್ಮ ಪತ್ರಗಳು

ಅಪೋಲೋ ಆಸ್ಪತ್ರೆ ಬಳಿ ಕಸದ ರಾಶಿ ತೆರವುಗೊಳಿಸಿ



ಮಾನ್ಯರೆ,

ಮೈಸೂರಿನ ಪ್ರತಿಷ್ಠಿತ ಬಡಾವಣೆಗಳಲ್ಲಿ ಒಂದಾದ ಕುವೆಂಪುನಗರ ಅಪೋಲೋ ಆಸ್ಪತ್ರೆ ರಸ್ತೆಯಲ್ಲಿರುವ HDFC ಬ್ಯಾಂಕ್ ಎದುರು ರಸ್ತೆಯಲ್ಲಿರುವ ಖಾಲಿ ಮೂಲೆ ನಿವೇಶನ ಸಂಖ್ಯೆ 52 ರಲ್ಲಿ ಕಳೆದ ಎರಡು ತಿಂಗಳಿಂದ ಚರಂಡಿ ಹಾಗೂ ರಸ್ತೆಗೆ ಕಸದ ರಾಶಿ ಬಂದು ಬೀಳುತ್ತಿದೆ. ಇದರಿಂದ ಚರಂಡಿ ತುಂಬಿ ಮಳೆ ನೀರು ಹರಿಯದೆ ವಾಸನೆ ಹಾಗೂ ಇಲಿ –ಹೆಗ್ಗಣ, ಹಾವು, ಮುಂಗುಸಿಗಳ ವಾಸಸ್ಥಾನವಾಗಿದೆ. ಈ ಬಗ್ಗೆ ಕಾರ್ಪೋರೇಷನ್ ನೌಕರರ ಗಮನಕ್ಕೆ ಮುಖತಃ ಮನವಿ ಮಾಡಿದರೂ ಕಸ ವಿಲೇವಾರಿ ಹಾಗೂ ಚರಂಡಿ ಸ್ವಚ್ಛವಾಗಿಲ್ಲ. ಮನೆ ಕಸ ತೆಗೆದುಕೊಳ್ಳುವ ನೌಕರರು ಎರಡು ದಿನಗಳಿಗೊಮ್ಮೆ ಬರುವ ಪರಿಪಾಟವಿರುವುದರಿಂದ ಬಹುಶಃ ಸಾರ್ವಜನಿಕರು ಕಸ ತಂದು ಹಾಕುತ್ತಿರಬಹುದು. ಸಂಬಂಧಪಟ್ಟವರು ಕೂಡಲೇ ಇತ್ತ ಗಮನಹರಿಸಬೇಕಾಗಿ ಮನವಿ.

–ಕಲ್ಲೇಶ್ ಹಾಗೂ ಬಡಾವಣೆಯ ನಿವಾಸಿಗಳು, ಮೈಸೂರು.

ಮನೆಗಳಲ್ಲಿ ಮದ್ಯ ಮಾರಾಟ ವಿರುದ್ಧ ಕ್ರಮಕ್ಕೆ ಮನವಿ

ಮಾನ್ಯರೆ,

ಮೈಸೂರಿನ ಮಂಜುನಾಥಪುರ ಗ್ರಾಮದ ಕೆಲ ಮನೆಗಳಲ್ಲಿ ಮದ್ಯ ಮಾರಾಟವಾಗುತ್ತಿದ್ದು, ಮದ್ಯ ವ್ಯಸನಿಗಳ ಸಂಖ್ಯೆ ಹೆಚ್ಚಾಗಿದೆ. ಅದರಲ್ಲೂ 16–25 ವಯಸ್ಕರ ಹುಡುಗರೇ ಹೆಚ್ಚಾಗಿ ಕಂಡುಬಂದಿರುವುದು ಆತಂಕವನ್ನು ಉಂಟು ಮಾಡಿದೆ ಮತ್ತು ಅವರ ಹಾವಳಿ ಕೂಡ ಮಿತಿಮೀರಿ ಹೆಚ್ಚಾಗಿದೆ.

ದಾರಿಯಲ್ಲಿ ಹೋಗುವ ಸಾರ್ವಜನಿಕರಿಗೆ ಕುಡಿದ ಮತ್ತಿನಲ್ಲಿ ಗೂಂಡಾಗಿರಿ ಮಾಡಿ ಅವರ ಬಳಿ ಹಣ ವಸೂಲಿ ಮಾಡುವುದು, ಅವಾಚ್ಯ ಶಬ್ದಗಳಿಂದ ನಿಂದಿಸುವುದು, ಹೀಗೆ ಅನೇಕ ರೀತಿಯ ಕಿರುಕುಳಗಳು ಕಂಡು ಬರುತ್ತಿರುವುದು ಶೋಚನೀಯ ಸಂಗತಿ. ಹಗಲು ರಾತ್ರಿಯೆನ್ನದೆ ಹತ್ತಿರವಿರುವಂತಹ ಹೋಟೆಲ್ ಬಳಿ ಕುಳಿತು ಕುಡಿಯುವ ಯುವಕರ ಸಂಖ್ಯೆ ದೊಡ್ಡ ಮಟ್ಟದಲ್ಲಿ ಕಾಣಬಹುದಾಗಿದೆ.

ಇದರ ಬಗ್ಗೆ ಯಾವೊಬ್ಬ ಪೊಲೀಸ್ ಅಧಿಕಾರಿಗಳು ತಲೆಕೆಡಿಸಿಕೊಳ್ಳದೆ ಸುಮ್ಮನಿದ್ದಾರೆ ಹಾಗೂ ಮಹಿಳೆಯರು ಹೆಚ್ಚಾಗಿ ಮನೆಯಲ್ಲಿ ಮದ್ಯ ಮಾರುವವರಾಗಿರುವುದು ಬೇಸರದ ವಿಷಯವಾಗಿದೆ. ಮನೆಯಲ್ಲಿ ಮದ್ಯ ಮಾರಾಟವಾಗುತ್ತಿರುವುದರಿಂದ ಮುಂದೊಂದು ದಿನ ಸಣ್ಣ ಪುಟ್ಟ ಮಕ್ಕಳು ಮದ್ಯ ವ್ಯಸನಿಗಳಾಗುವರೇನೂ ಎಂಬ ಕಳವಳ ಮನದಲ್ಲಿ ಕಾಡುತ್ತಿದೆ. ದಯಮಾಡಿ ಇದಕ್ಕೆ ಸಂಬಂಧಿಸಿದ ಅಧಿಕಾರಿಗಳು ಗಮನ ಹರಿಸಿ ಮನೆಯಲ್ಲಿ ಮದ್ಯ ಮಾರಾಟ ಮಾಡುವವರ ಮೇಲೆ ಕಾನೂನು ಕ್ರಮ ಜರುಗಿಸಬೇಕೆಂದು ತಮ್ಮಲ್ಲಿ ಮನವಿ.

–ವಿನಯ್ ಕುಮಾರ, ಮಂಜುನಾಥಪುರ ನಿವಾಸಿ

ದರ್ಶನ್ ಧ್ರುವನಾರಾಯಣ್ ನಡೆ ಅನುಕರಣೀಯ



ಮಾನ್ಯರೆ,

ಇತ್ತೀಚಿನ ದಿನಗಳಲ್ಲಿ ಚುನಾವಣೆ ಗೆದ್ದ ನಂತರ ಕೆಲ ಶಾಸಕರು ತಮ್ಮ ನಡೆ ನುಡಿಗಳಲ್ಲಿ ಅಪಾರ ಬದಲಾವಣೆ ತಂದುಕೊಂಡು ದಂತದ ಗೋಪುರದಲ್ಲಿ ವಿಹರಿಸುವುದೇ ಹೆಚ್ಚು. ಅಂತಹದ್ದರಲ್ಲಿ ಯುವ ಶಾಸಕರೊಬ್ಬರು ಸರ್ಕಾರಿ ರಜಾ ದಿನದಂದು ವಿರಾಮ ಪಡೆಯದೇ ಸಾವಿರಾರು ಬೆಂಬಲಿಗರನ್ನು ಸೇರಿಸಿ ರಾಷ್ಟ್ರಪಿತ ಮಹಾತ್ಮ ಗಾಂಧಿಯವರು ಭೇಟಿ ನೀಡಿದ ಸ್ಥಳಕ್ಕೆ ಕಾಲ್ನಡಿಗೆಯಲ್ಲಿ ತೆರಳಿ ಸಭೆ ನಡೆಸಿ ಮಹಾತ್ಮರ ಆದರ್ಶಗಳನ್ನು ಪಾಲಿಸುವಂತೆ ಮನವಿ ಮಾಡಿ ಸಾರ್ಥಕತೆ ಮೆರೆದಿದ್ದಾರೆ. ಅವರು ನಂಜನಗೂಡು ನೂತನ ಯುವ ಶಾಸಕ ದರ್ಶನ್ ಧ್ರುವನಾರಾಯಣ್. ಬೆಳೆಯುವ ಪೈರು ಮೊಳಕೆಯಲ್ಲಿ ಎಂಬ ನಾಣ್ನುಡಿಯಂತೆ ಶಾಸಕರಾದ ದಿನದಿಂದಲೇ ಕ್ಷೇತ್ರದ ಮತದಾರರ ಸಮಸ್ಯೆಗಳಿಗೆ ಸ್ಪಂದಿಸುತ್ತಾ ನಂಜನಗೂಡು ಮತ ಕ್ಷೇತ್ರದಲ್ಲಿ ಹೊಸದೊಂದು ಆಶಾಕಿರಣ ಮೂಡಿಸಿದ್ದಾರೆ ಎಂದರೆ ಅತಿಶಯೋಕ್ತಿಯಾಗಲಾರದು. ದರ್ಶನ್ ಅವರ ನಡೆಗೆ ಸ್ಫೂರ್ತಿಗೊಂಡ ಎಲ್ಲಾ ಶಾಸಕರು ಈ ರೀತಿಯ ವಿಶಿಷ್ಟ ಕಾರ್ಯಕ್ರಮಗಳನ್ನು ಏರ್ಪಡಿಸುವುದೇ ನಮ್ಮ ಆಶಯ.

–ಸುರೇಶ, ನೋಟರಿ, ವಕೀಲರ ಸಂಘದ ಅಧ್ಯಕ್ಷ, ನಂಜನಗೂಡು.

ರಸ್ತೆ ಬದಿಯ ಗಿಡಗಂಟಿ ತೆರವುಗೊಳಿಸಿ



ಮಾನ್ಯರೆ,

ನಂಜನಗೂಡು ತಾಲೂಕಿನ ಹುರ–ಹುಲ್ಲಹಳ್ಳಿ ರಾಜ್ಯ ಹೆದ್ದಾರಿ ಬದಿಯಲ್ಲಿ ಗಿಡಗಂಟಿಗಳು ಬೆಳೆದು ರಸ್ತೆಗೆ ಚಾಚಿಕೊಂಡಿವೆ. ಇದರಿಂದ ಎದುರಿಗೆ ಬರುವ ವಾಹನಗಳು ಕಾಣದೆ ಅಪಘಾತಕ್ಕೆ ಆಹ್ವಾನ ನೀಡುವಂತಾಗಿದೆ.

ಈ ರಸ್ತೆಯಲ್ಲಿ ನಿತ್ಯ ಸಾವಿರಾರು ವಾಹನಗಳು ಸಂಚರಿಸುತ್ತಿದ್ದು, ಕೆಲ ದಿನಗಳ ಹಿಂದೆ ಅಪಘಾತ ಸಂಭವಿಸಿದೆ. ರಸ್ತೆಯ ಪಕ್ಕದಲ್ಲಿ ಕೆರೆ ಕೂಡ ಇದೆ. ರಸ್ತೆಯಲ್ಲಿ ಅನೇಕ ತಿರುವುಗಳಿದ್ದು, ರಸ್ತೆಯುದ್ದಕ್ಕೂ ಗಿಡಗಂಟಿಗಳು ಬೆಳೆದು ನಿಂತಿವೆ. ಇದರಿಂದ ತಿರುವುಗಳಲ್ಲಿ ಎದುರಿನಿಂದ ಬರುವ ವಾಹನಗಳು ಕಾಣದೆ ಅಪಘಾತಗಳು ಸಂಭವಿಸುತ್ತಿವೆ. ಆದ್ದರಿಂದ ಲೋಕೋಪಯೋಗಿ ಇಲಾಖೆಯ ಅಧಿಕಾರಿಗಳು ಗಿಡಗಂಟಿಗಳನ್ನು ತೆರವುಗೊಳಿಸಿ ಸಾರ್ವಜನಿಕರಿಗೆ ಅನುಕೂಲ ಮಾಡಿಕೊಡಬೇಕೆಂದು ಸ್ಥಳೀಯರ ಮನವಿ.

–ಮಲ್ಲುಂಡಿ ಗ್ರಾಮಸ್ಥರು, ನಂಜನಗೂಡು ತಾ.



ಕಾರ್ಕಳ ಆನಂದ ಭಟ್
ಮೊ : 7676554198
ಫ್ಲಾಟ್ ನಂ.204, ಮೂರನೇ ಮಹಡಿ, ಏಕದಂತ ಅಪಾರ್ಟ್‌ಮೆಂಟ್ಸ್, Opp. H.P. ಗ್ಯಾಸ್ ಪೆರ್ವಾಜೆ ರಸ್ತೆ, ಕಾರ್ಕಳ, – 574 104 ಉಡುಪಿ ಜಿಲ್ಲೆ

ದಿಕ್ಕುದೆಸೆ

ಉಚಿತಗಳಿಂದ ಆರ್ಥಿಕತೆಗೆ ಆಪತ್ತು ಖಚಿತ

ಸರಕಾರಗಳು ನೀಡುವ ಉಚಿತ ಭಾಗ್ಯಗಳು, ಸೌಲಭ್ಯಗಳಿಂದ ದೇಶಗಳ, ರಾಜ್ಯಗಳ ಆರ್ಥಿಕತೆ ನಾಶವಾಗುವ ಸಾಧ್ಯತೆಗಳಿವೆ. ಉಚಿತ ಭಾಗ್ಯಗಳಿಂದ 1990ರ ದಶಕದವರೆಗೆ ಸಮೃದ್ಧವಾಗಿದ್ದ, ಶಕ್ತಿಶಾಲಿಯಾಗಿದ್ದ ಲ್ಯಾಟಿನ್ ಅಮೇರಿಕಾದ ಒಂದು ಪುಟ್ಟ ದೇಶ ವೆನೆಜುವೆಲಾದ ಆರ್ಥಿಕತೆ ನಾಶವಾಗಿ ಆ ದೇಶದ ಸರಕಾರ ದಿವಾಳಿಯಾಗಿದ್ದು, ಜನಸಾಮಾನ್ಯರು ಬಿಕಾರಿಗಳಾಗಿದ್ದಾರೆ. ತೊಂಬತ್ತರ ದಶಕದಿಂದ 2004ರವರೆಗೆ ಸಮೃದ್ಧವಾಗಿದ್ದ ಕಚ್ಚಾ ತೈಲವನ್ನು ರಫ್ತು ಮಾಡಿ ವೆನೆಜುವೆಲಾ ಹೇರಳ ಲಾಭ ಗಳಿಸಿತು. ಆ ಸಂದರ್ಭದಲ್ಲಿ ದೇಶದ ಅಧ್ಯಕ್ಷರಾಗಿದ್ದ ಕಮ್ಯೂನಿಷ್ಟ್ ನಾಯಕ ಹೂಗೊ ಚವೆಜ್ ಮತ್ತೆ ಚುನಾವಣೆಯಲ್ಲಿ ಗೆದ್ದು ಬರಲು ಉಚಿತ ಪ್ರಯಾಣ, ಶಿಕ್ಷಣ, ಚಿಕಿತ್ಸೆ ಹೀಗೆ ಎಲ್ಲವನ್ನೂ ಉಚಿತವಾಗಿ ಸರ್ಕಾರದಿಂದ ನೀಡಿದರು. ಜನ ಸೋಮಾರಿಗಳಾದರು. ಉದ್ಯೋಗವಿಲ್ಲದವರಿಗೆ ನಿರುದ್ಯೋಗ ಭತ್ಯೆ ನೀಡಲಾಯಿತು. ಪರಿಣಾಮ ಎಲ್ಲಾ ರೀತಿಯ ಉತ್ಪಾದನಾ ಚಟುವಟಿಕೆಗಳು ಕಾರ್ಮಿಕರಿಲ್ಲದೇ ಸ್ಥಗಿತಗೊಂಡವು. 2007–08 ತೈಲ ಬೆಲೆ ಕುಸಿಯುವುದರೊಂದಿಗೆ ವೆನೆಜುವೆಲಾದಲ್ಲಿ ಆರ್ಥಿಕ ಸಂಕಷ್ಟ ಆರಂಭವಾಯಿತು. ಸಮೃದ್ಧವಾಗಿದ್ದ ದೇಶದಲ್ಲಿ ಇಂದು ಎಲ್ಲೆಂದರಲ್ಲಿ ಭಿಕ್ಷೆ ಬೇಡುವವರು, ತುಂಡು ಬ್ರೆಡ್‌ಗಾಗಿ ಹಾಹಾಕಾರ, ಹಣಕ್ಕಾಗಿ ಅಪಹರಣ, ಕೊಲೆಗಳು ಸಾಮಾನ್ಯವಾಗಿವೆ. ಆ ದೇಶದಲ್ಲೀಗ ಪ್ರತಿ ವರ್ಷ ಸುಮಾರು ಇಪ್ಪತ್ತು ಸಾವಿರ ಕೊಲೆಗಳಾಗುತ್ತಿದ್ದು, ಕೊಲೆಗಡುಕರ ದೇಶವಾಗಿದೆ. ಜಗತ್ತಿನ ಅತೀ ಅಪಾಯಕಾರಿ ದೇಶಗಳಲ್ಲಿ ವೆನೆಜುವೆಲಾ ಒಂದನೇ ಸ್ಥಾನದಲ್ಲಿದೆ. ಅಧಿಕಾರದಲ್ಲಿರಲು ಆ ದೇಶದ ರಾಜಕಾರಣಿಗಳು ಜನರಿಗೆ ನೀಡಿದ ಉಚಿತ ಭಾಗ್ಯಗಳಿಂದ ಅಲ್ಲಿನ ಆರ್ಥಿಕತೆ ಸಂಪೂರ್ಣ ನಾಶವಾಗಿದೆ. ಇತ್ತೀಚಿನ ವರ್ಷಗಳಲ್ಲಿ ಭಾರತದಲ್ಲೂ ಕೆಲವು ರಾಜಕೀಯ ಪಕ್ಷಗಳು ಘೋಷಿಸುತ್ತಿರುವ, ನೀಡುತ್ತಿರುವ ಉಚಿತ ಸೌಲಭ್ಯಗಳಿಂದ ವೆನೆಜುವೆಲಾದಂತಹ ಪರಿಸ್ಥಿತಿ ಸೃಷ್ಟಿಯಾಗುವ ಸಾಧ್ಯತೆ ಹೆಚ್ಚಾಗುತ್ತಿದೆ.

ವಿಶ್ವದ ಅತ್ಯಂತ ಬೃಹತ್ ಯಶಸ್ವಿ ಪ್ರಜಾಸತ್ತಾತ್ಮಕ ದೇಶ ಭಾರತವೆಂದು ನಾವು ಅಭಿಮಾನದಿಂದ ಹೇಳುತ್ತಿದ್ದೇವೆ. ಆದರೆ ನಮ್ಮ ಪ್ರಜಾಸತ್ತಾತ್ಮಕ ವ್ಯವಸ್ಥೆಯ ಅಡಿಪಾಯವಾಗಿರುವ ಚುನಾವಣೆಗಳು ಮುಕ್ತ, ಪಾರದರ್ಶಕ, ನ್ಯಾಯಸಮ್ಮತವಾಗಿವೆ ಎಂದು ನಾವು ಧೈರ್ಯದಿಂದ ಹೇಳುವ ಸ್ಥಿತಿಯಲ್ಲಿಲ್ಲ. ನಮ್ಮ ಜನಪ್ರತಿನಿಧಿಗಳನ್ನು ಆರಿಸುವಲ್ಲಿ ನಾವು ತೆಗೆದುಕೊಳ್ಳುವ ನಿರ್ಧಾರಗಳು ನಮ್ಮ ಮುಂದಿನ ಪೀಳಿಗೆಯ ಭವಿಷ್ಯವನ್ನು ನಿರ್ಧರಿಸುತ್ತದೆ. ದೇಶದ ಚುನಾವಣಾ ವ್ಯವಸ್ಥೆಯಲ್ಲಿ ಮತದಾರರನ್ನು ವ್ಯವಸ್ಥಿತವಾಗಿ ಭ್ರಷ್ಟಗೊಳಿಸುವ ಉಚಿತ ಗ್ಯಾರಂಟಿಗಳ ಯೋಜನೆಗಳು ಆರಂಭವಾಗಿವೆ. ದೇಶದ ರಾಜ್ಯಗಳ ಖಜಾನೆಯನ್ನು ಗ್ಯಾರಂಟಿ ಭಾಗ್ಯಗಳಿಗೆ ಬರಿದುಗೊಳಿಸಲು ರಾಜಕೀಯ ಪಕ್ಷಗಳ ನಡುವೆ ಸ್ಪರ್ಧೆ ಆರಂಭವಾಗಿದೆ. ಆರಂಭದಲ್ಲಿ ತಮಿಳುನಾಡಲ್ಲಿ ಆರಂಭವಾದ ಈ ಉಚಿತ ಯೋಜನೆಗಳು ಒಂದೊಂದೇ ರಾಜ್ಯಕ್ಕೆ ಕಾಲಿಡಲಾರಂಭಿಸಿವೆ. 2019ರ ಸಾರ್ವತ್ರಿಕ ಚುನಾವಣೆಯ ಸಂದರ್ಭದಲ್ಲಿ ಕಾಂಗ್ರೆಸ್ ಪಕ್ಷವು ತಮ್ಮ ಪಕ್ಷ ಅಧಿಕಾರಕ್ಕೆ ಬಂದಲ್ಲಿ ದೇಶದ ಪ್ರತಿ ಕುಟುಂಬಕ್ಕೆ ಪ್ರತಿ ತಿಂಗಳು ಆರು ಸಾವಿರ ರೂ. ನೀಡುವ ವಾಗ್ದಾನ ಮಾಡಿತು. ಆದರೆ ಅದೃಷ್ಟವಶಾತ್ ದೇಶದ ಮತದಾರರು ಈ ಆಮಿಷಕ್ಕೆ ಬಲಿ ಬೀಳಲಿಲ್ಲ. ಅದರ ಫಲವಾಗಿ ಭಾರತವಿಂದು ಜಗತ್ತಿನ ಅತೀ ದೊಡ್ಡ ಆರ್ಥಿಕತೆಯಲ್ಲಿ ಬ್ರಿಟನ್ ಅನ್ನು ಹಿಂದಿಕ್ಕಿ ಐದನೇ ಸ್ಥಾನಕ್ಕೇರಿದೆ.

ಉಚಿತ ಗ್ಯಾರಂಟಿ ಯೋಜನೆಗಳಿಂದಾಗಿ ಮತದಾರನಿಂದು ವೈಯಕ್ತಿಕ ಸ್ವಾರ್ಥದ ಆಧಾರದಲ್ಲಿ ತಮ್ಮ ಪ್ರತಿನಿಧಿಯನ್ನು ಆರಿಸುವ ಕೆಟ್ಟ ಪ್ರವೃತ್ತಿ ಆರಂಭವಾಗಿದೆ. ಉಚಿತಗಳ ಆಶ್ವಾಸನೆ ನೀಡಿದ ವ್ಯಕ್ತಿಗೆ ನಾವು ಮತವಿತ್ತು ಆಯ್ಕೆ ಮಾಡಿದಲ್ಲಿ ಆತ ನಿಜವಾದ ಜನಪ್ರತಿನಿಧಿಯಾಗಲು ಸಾಧ್ಯವಿಲ್ಲ. ಮತಗಳನ್ನು ಮಾರಾಟ ಮಾಡಿದ ಮತದಾರರು ತಾವು ಆರಿಸಿದ ಜನಪ್ರತಿನಿಧಿ ಕ್ಷೇತ್ರದಲ್ಲಿ ಅಭಿವೃದ್ಧಿ ಕಾರ್ಯ ಮಾಡದಿದ್ದರೆ ಆತನನ್ನು ಪ್ರಶ್ನಿಸುವ ನೈತಿಕತೆ ಕಳೆದುಕೊಳ್ಳುತ್ತಾರೆ.



ಜನರು ಮತದಾನದ ಪಾವಿತ್ರ್ಯವನ್ನು ಭ್ರಷ್ಟಗೊಳಿಸಿ ಮತಗಳನ್ನು ಮಾರಾಟ ಮಾಡುವಂತಹ ಕೆಟ್ಟ ಸಂಸ್ಕೃತಿ ಆರಂಭವಾಗಿದೆ. ರಾಜಕೀಯ ಪಕ್ಷಗಳು ಜಾತಿ ಭಾವನೆಗಳನ್ನು ಕೆರಳಿಸಿ ಚುನಾವಣೆಗಳಲ್ಲಿ ಸುಲಭವಾಗಿ ಮತಗಳ ಬೇಟೆ ಮಾಡುತ್ತಿದ್ದಾರೆ. ಪ್ರಸ್ತುತ ಭಾರತದಲ್ಲಿ ಚುನಾವಣಾ ಪೂರ್ವ ಹಾಗೂ ನಂತರ ಜನಪ್ರತಿನಿಧಿಗಳ ವರ್ತನೆ ಪ್ರಶ್ನಾರ್ಹವಾಗಿದೆ.

ಭಾರತದಲ್ಲಿ ಸುಮಾರು ಶೇ.64ರಷ್ಟು ಜನರು ಗ್ರಾಮೀಣ ಪ್ರದೇಶಗಳಲ್ಲಿದ್ದು ಬಡತನ, ಅನಕ್ಷರತೆ, ಮೂಲಸೌಕರ್ಯಗಳ ಕೊರತೆ, ದೇಶದಲ್ಲಾಗುತ್ತಿರುವ ಬದಲಾವಣೆಗಳ ಬಗ್ಗೆ ಮಾಹಿತಿ ಇಲ್ಲದೇ ಜೀವನ ಸಾಗಿಸುತ್ತಿದ್ದಾರೆ. ಇವರಲ್ಲಿ ಶೇ.90ಕ್ಕಿಂತ ಹೆಚ್ಚು ಮಂದಿ ಉಚಿತ ಭಾಗ್ಯಗಳ ದುರಾಸೆಗೆ ಬಲಿಬಿದ್ದು ದೇಶದ, ತಮ್ಮ ರಾಜ್ಯಗಳ ಭವಿಷ್ಯದ ಬಗ್ಗೆ ಚಿಂತಿಸದೇ ಕೆಟ್ಟ ಸರಕಾರಗಳನ್ನು ಆರಿಸುತ್ತಾರೆ. ಇತ್ತೀಚಿನ ವರ್ಷಗಳಲ್ಲಿ ಮತದಾರ ಮತ್ತು ಜನಪ್ರತಿನಿಧಿಗಳ ನಡುವಿನ ಸಂಬಂಧ ಮಾರಾಟಗಾರ ಮತ್ತು ಖರೀದಿದಾರನಂತಾಗಿದೆ. ತಾವು ಆರಿಸಿದ ಜನಪ್ರತಿನಿಧಿ ಭಾರಿ ಪ್ರಮಾಣದಲ್ಲಿ ಭ್ರಷ್ಟಾಚಾರ, ಸರಕಾರಿ ಖಜಾನೆ ಲೂಟಿ ಹೊಡೆಯುವಾಗ ತಾವು ಕೂಡಾ ಉಚಿತ ಯೋಜನೆಗಳಿಂದ ಲಾಭ ಪಡೆಯುವುದರಲ್ಲಿ ಯಾವುದೇ ತಪ್ಪಿಲ್ಲ ಎಂಬ ಭಾವನೆ ಹೆಚ್ಚಿನ ಫಲಾನುಭವಿ ಮತದಾರರಲ್ಲಿದೆ. ಆದರೆ ಉಚಿತ ಯೋಜನೆಗಳಿಂದಾಗಿ ಪಂಜಾಬ್‌ನ ಆರ್ಥಿಕತೆ ವಿನಾಶದತ್ತ ಮುಖ ಮಾಡಿದೆ. ಕರ್ನಾಟಕದ ಪರಿಸ್ಥಿತಿಯು ಪಂಜಾಬ್‌ಗಿಂತ ಭಿನ್ನವಾಗಿಲ್ಲ. ಆಮ್ ಆದ್ಮಿ ಪಕ್ಷ (ಎಎಪಿ) ಆಡಳಿತವಿರುವ ಪಂಜಾಬ್ ಸರಕಾರದ ಆರ್ಥಿಕತೆ ಓಟ್ ಬ್ಯಾಂಕ್ ರಾಜಕಾರಣದಿಂದ ಹೀನಾಯಸ್ಥಿತಿಗೆ ತಲುಪಿದೆ. ಹಿಂದಿನ ಹಾಗೂ ಈಗಿನ ಸರಕಾರಗಳು ನೀಡಿದ ಉಚಿತ ಕೊಡುಗೆಗಳಿಂದಾಗಿ ಪಂಜಾಬ್ ಸರಕಾರದ ಸಾಲದ ಪ್ರಮಾಣ 3.27 ಲಕ್ಷ ಕೋಟಿ ರೂ.ಗೆ ಏರಿದೆ. ಪಂಜಾಬ್ ಬಳಿ ಸಾಲ ಮರು ಪಾವತಿಸಲು ದುಡ್ಡಿಲ್ಲ. ಪಂಜಾಬ್‌ನ ಈ ಹೀನ ಆರ್ಥಿಕ ಸ್ಥಿತಿಗೆ ಕಾರಣ ಚುನಾವಣಾ ಸಂದರ್ಭದಲ್ಲಿ ಎಎಪಿ ನೀಡಿದ ಉಚಿತ ನೀರು, ವಿದ್ಯುತ್, ಹದಿನೆಂಟು ದಾಟಿದ ಮಹಿಳೆಯರಿಗೆ ತಿಂಗಳಿಗೆ ಒಂದು ಸಾವಿರ ರೂ. ನಗದು ಹಣ ಮೊದಲಾದ ಗ್ಯಾರಂಟಿ ಭಾಗ್ಯಗಳ ಆಶ್ವಾಸನೆಯಿಂದಾಗಿದೆ. ಸರಕಾರವು ರಾಜ್ಯದಲ್ಲಿರುವ ಸುಮಾರು 51 ಲಕ್ಷ ಮನೆಗಳಿಗೆ 300 ಯೂನಿಟ್ ವಿದ್ಯುತ್ ನೀಡುತ್ತಿದೆ. ಸುಮಾರು ಒಂದು ಕೋಟಿಯಷ್ಟಿರುವ ಮಹಿಳೆಯರಿಗೆ (18 ವರ್ಷ ದಾಟಿದ) ಮಾಸಿಕ ತಲಾ ರೂ. 1000 ನೀಡಲು 18 ಸಾವಿರ ಕೋಟಿ ರೂ. ಬೇಕಾಗಿದೆ. ಈ ಯೋಜನೆಗಳೊಂದಿಗೆ ಇನ್ನಿತರ ಭಾಗ್ಯಗಳು ಜಾರಿಯಾದಲ್ಲಿ ರಾಜ್ಯದ ಆರ್ಥಿಕತೆ ಸಂಪೂರ್ಣ ದಿವಾಳಿಯಾಗಲಿದೆ ಎಂದು ಯೋಜನಾ ಆಯೋಗದ ಮಾಜಿ ಉಪಾಧ್ಯಕ್ಷ ಮೊಂಟೆಕ್ ಸಿಂಗ್ ಆಹ್ಲುವಾಲಿಯಾ ಎಚ್ಚರಿಸಿದ್ದಾರೆ. ಹಿಂದೆ 1997ರಲ್ಲಿ ರಾಜಿಂದರ್ ಕೌರ್ ಭಟ್ಟಲ್ ನೇತೃತ್ವದ ಕಾಂಗ್ರೆಸ್ ಸರಕಾರವು ರೈತರು, ಉದ್ಯಮಿಗಳಿಗೆ ಸಬ್ಸಿಡಿ ದರದಲ್ಲಿ ವಿದ್ಯುತ್ ನೀಡಿದ್ದರು. ಹೀಗಾಗಿ ಈವರೆಗೆ ಸರಕಾರವು 1.38 ಲಕ್ಷ ಕೋಟಿ ರೂ. ವಿದ್ಯುತ್ ಸಬ್ಸಿಡಿ ನೀಡಿದೆ. ವಿದ್ಯುತ್ ಸಬ್ಸಿಡಿಗೆ ವರ್ಷಕ್ಕೆ 20 ಸಾವಿರ ಕೋಟಿ ರೂ. ಮಹಿಳೆಯರಿಗೆ ಉಚಿತ ಸಾರಿಗೆಗಾಗಿ 547 ಕೋಟಿ ರೂ. ಬಜೆಟ್‌ನಲ್ಲಿ ಮೀಸಲಿಡಬೇಕಾಗಿದೆ. ಇವುಗಳ ಪರಿಣಾಮ ಪಂಜಾಬ್ ಸರಕಾರವು ವಾರ್ಷಿಕ ಬಜೆಟ್‌ನ ಶೇ.20ರಷ್ಟು ಹಣವನ್ನು ಸಾಲ ಮರುಪಾವತಿಗಾಗಿ ವ್ಯಯಿಸುತ್ತಿದೆ. ಪಂಜಾಬ್ ಸರಕಾರ ಇದೇ ರೀತಿ ಹಣ ಹಂಚುವ ಯೋಜನೆಗಳ ಮುಂದುವರಿಸಿದರೆ ಮುಂದಿನ ಹತ್ತು ವರ್ಷಗಳಲ್ಲಿ ಸರಕಾರದ ಸಾಲದ ಹೊರೆ ಐದು ಲಕ್ಷ ಕೋಟಿ ದಾಟಲಿದೆಯೆಂದು ಸಿಎಜಿ ವರದಿ ಎಚ್ಚರಿಸಿದೆ.

ಕರ್ನಾಟಕದಲ್ಲೂ ಇತ್ತೀಚೆಗೆ ನಡೆದ ಚುನಾವಣೆಯಲ್ಲಿ ಐದು ಉಚಿತ ಗ್ಯಾರಂಟಿಗಳನ್ನು ಘೋಷಿಸುವ ಮೂಲಕ ಸಿದ್ದರಾಮಯ್ಯ ನೇತೃತ್ವದಲ್ಲಿ ಕಾಂಗ್ರೆಸ್ ಪಕ್ಷ ಅಧಿಕಾರಕ್ಕೇರಿತು. ಕೆಲವೇ ದಿನಗಳಲ್ಲಿ ಗ್ಯಾರಂಟಿಗಳನ್ನು ಜಾರಿಗೊಳಿಸಿ ನಾವು ನುಡಿದಂತೆ ನಡೆದಿದ್ದೇವೆ ಎಂದು ತಮಗೆ ತಾವೇ ಹೊಗಳಿ ಬೆನ್ನು ತಟ್ಟಿಕೊಳ್ಳುತ್ತಿದ್ದಾರೆ. ಆದರೆ ಕರ್ನಾಟಕ ಸರಕಾರದ ಆರ್ಥಿಕ ಪರಿಸ್ಥಿತಿಯನ್ನು ಅವಲೋಕಿಸಿದರೆ 2012–13ನೇ ಸಾಲಿನಲ್ಲಿ ಹೊರ ಬಾಕಿ ಸಾಲವು ಒಂದು ಲಕ್ಷ ಕೋಟಿ ರೂ. ದಾಟಿತ್ತು. 2023–24ನೇ ಸಾಲಿನ ಬಜೆಟ್‌ನಲ್ಲಿ 77750 ಕೋಟಿ ರೂ.ಸಾಲ ಎತ್ತುವ ಸಾಧ್ಯತೆಗಳಿದ್ದು, ಒಟ್ಟು ಸಾಲ 5.64 ಲಕ್ಷ ಕೋಟಿ ರೂ.ಗೆ ಏರುವುದೆಂದು ನಿರೀಕ್ಷಿಸಲಾಗಿದೆ. ಉಚಿತ ಯೋಜನೆಗಳು ರಾಜ್ಯದ ಆರ್ಥಿಕತೆ ಮೇಲೆ ದುಷ್ಪರಿಣಾಮ ಬೀರಲಾರಂಭಿಸಿವೆ.

ಉಚಿತ ಗ್ಯಾರಂಟಿಗಳ ದುಷ್ಪರಿಣಾಮಗಳು: ಉಚಿತ ಯೋಜನೆಗಳಿಂದ ಪಂಜಾಬ್‌ನಲ್ಲಿ ಅಭಿವೃದ್ಧಿ ಕಾರ್ಯಗಳು ಸ್ಥಗಿತಗೊಂಡಿವೆ. ಪಂಜಾಬ್ ಸರಕಾರದ ಆದಾಯದಲ್ಲಿ ಶೇ.64ರಷ್ಟು ಹಣ ಸಾಲ ಬಡ್ಡಿ ಪಾವತಿಸಲು ಖರ್ಚಾಗುತ್ತಿದೆ. ಸರಕಾರಿ ನೌಕರರಿಗೆ ಕಳೆದ ಕೆಲವು ತಿಂಗಳುಗಳಿಂದ ವೇತನ ನೀಡಿಲ್ಲ. ಉಚಿತ ಕೊಡುಗೆಗಳ ಫಲಾನುಭವಿಗಳಿಂದ ರಾಜ್ಯದ ಅಭಿವೃದ್ಧಿಗೆ ಏನೂ ದೊರೆತಿಲ್ಲ. ಬದಲಾಗಿ ಜನರು ಸೋಮಾರಿಗಳಾಗುತ್ತಿದ್ದಾರೆ. ಕಳ್ಳತನ, ಕೊಲೆ, ಸುಲಿಗೆ, ಅತ್ಯಾಚಾರದ ಪ್ರಕರಣಗಳು ಹೆಚ್ಚಿದೆ. ಮಾದಕ ವಸ್ತುಗಳ ದಂಧೆ ಜೋರಾಗಿದೆ. ಬಡತನ ಇನ್ನಷ್ಟು ಹೆಚ್ಚಾಗಿದೆ.

ಕರ್ನಾಟಕದಲ್ಲೂ ಉಚಿತಗಳ ದುಷ್ಪರಿಣಾಮ ಕಾಣಲಾರಂಭಿಸಿದೆ. ಹಾಲಿನ ಬೆಲೆ ಲೀ.ಗೆ ರೂ. ಮೂರು ಏರಿಕೆಯಾಗಿದೆ. ಕರ್ನಾಟಕ ಸರಕಾರವು ರೈತರಿಗೆ ನೀಡುತ್ತಿದ್ದ ರೂ. 4000 ಕೃಷಿ ಸಮ್ಮಾನ್ ಸಹಾಯ ಧನವನ್ನು ಸ್ಥಗಿತಗೊಳಿಸಿದೆ ಎಂಬ ಸುದ್ದಿ ಹರಿದಾಡುತ್ತಿದೆ. ಕರ್ನಾಟಕದ ಖಜಾನೆಗೆ ಹೆಚ್ಚು ಆದಾಯ ನೀಡುತ್ತಿರುವ ಮದ್ಯದ ದರವನ್ನು ಭಾರಿ ಪ್ರಮಾಣದಲ್ಲಿ ಏರಿಸಲಾಗಿದೆ. ಮನೆ, ನಿವೇಶನ ಖರೀದಿಯ ಭೂ ನೋಂದಣಿ ಶುಲ್ಕ ಶೇ.30ರಷ್ಟು ಏರಿಸಲಾಗಿದೆ. ಉಚಿತ ಬಸ್ ಪ್ರಯಾಣದಿಂದ ಮಹಿಳೆಯರಲ್ಲಿ ಉದ್ಯಮಶೀಲತೆ ಹೆಚ್ಚುವುದರ ಬದಲು ಭಾರಿ ಸಂಖ್ಯೆಯ ಮಹಿಳೆಯರಲ್ಲಿ ಜಾಲಿ ಪ್ರಯಾಣ (ಜಾಲಿ ಟ್ರಾವೆಲ್) ಪ್ರವೃತ್ತಿ ಹೆಚ್ಚಾಗಿದೆ. ಉಚಿತ ಗ್ಯಾರಂಟಿಗಳಿಂದ ಅಭಿವೃದ್ಧಿ ಕಾರ್ಯಗಳು ಸ್ಥಗಿತಗೊಳ್ಳುವುದರೊಂದಿಗೆ ಗ್ಯಾರಂಟಿಗಳ ಫಲಾನುಭವಿಗಳಾದ ಕಾಕಾ ಪಾಟೀಲರು, ದಯಾನಂದರು, ಜನರೊಂದಿಗೆ ಪ್ರಾಮಾಣಿಕವಾಗಿ ತೆರಿಗೆ ಪಾವತಿಸುತ್ತಿರುವವರು, ವಿದ್ಯುತ್ ಶುಲ್ಕ ಪಾವತಿಸುವವರು, ಟಿಕೆಟ್ ಹಣ ತೆತ್ತು ಬಸ್‌ನಲ್ಲಿ ಪ್ರಯಾಣಿಸುವ ಧೀಮಂತ ಮಹಿಳೆಯರು ಸೇರಿ ಮುಂದಿನ ದಿನಗಳಲ್ಲಿ ಎಲ್ಲರೂ ರಾಜ್ಯದ ಆರ್ಥಿಕತೆಯ ದುಷ್ಪರಿಣಾಮಗಳನ್ನು ಎದುರಿಸಬೇಕಾಗಿದೆ. ಆದ್ದರಿಂದ ರಾಜ್ಯದ ಪ್ರಜ್ಞಾವಂತರು, ಪ್ರಾಮಾಣಿಕವಾಗಿ ತೆರಿಗೆ ಶುಲ್ಕ ನೀಡುವವರು, ರಾಜಕೀಯ ಪಕ್ಷಗಳ ರಾಜಕಾರಣಿಗಳ ಉಚಿತ ಕೊಡುಗೆಗಳ ಬಗ್ಗೆ ಜನಜಾಗೃತಿ ಮೂಡಿಸಬೇಕಾಗಿದೆ. ಪ್ರಧಾನಿ ಮೋದಿಯವರು ಗ್ಯಾರಂಟಿಗಳ ವಿರುದ್ಧ ಜನರನ್ನು ಈಗಾಗಲೇ ಎಚ್ಚರಿಸಿದ್ದಾರೆ. ದೇಶ ಕಂಡ ಧೀಮಂತ ವ್ಯಕ್ತಿತ್ವದ **ಪ್ರಧಾನಿ ಅಟಲ್ ಬಿಹಾರಿ ವಾಜಪೇಯಿಯವರು ಶಿಕ್ಷಣ, ಔಷಧ ಮತ್ತು ನ್ಯಾಯವನ್ನು** ಬಿಟ್ಟು ಜನರಿಗೆ ಏನನ್ನೂ ಉಚಿತವಾಗಿ ನೀಡಬೇಡಿ. ಉಚಿತ ವಿಷಯಗಳು ಜನರನ್ನು ಕಳ್ಳರನ್ನಾಗಿ ಮಾಡಿ ದೇಶವನ್ನು ದುರ್ಬಲಗೊಳಿಸುತ್ತವೆ ಎಂದಿದ್ದರು. ಅಟಲ್ ಜೀಯವರು ಹೇಳಿದ ಈ ಸಾರ್ವಕಾಲಿಕ ಸತ್ಯವನ್ನು ಅರ್ಥಮಾಡಿಕೊಂಡು ಪ್ರಜ್ಞಾವಂತರು ಜನಸಾಮಾನ್ಯರು ಉಚಿತಗಳ ವಿರುದ್ಧ ಎಚ್ಚೆತ್ತುಕೊಳ್ಳಬೇಕಾಗಿದೆ.

ಬ್ಲೂಟೂತ್ ಬಳಸಿ ಕೆಪಿಎಸ್‌ಸಿ ಪರೀಕ್ಷೆ ಬರೆಯುತ್ತಿದ್ದ ನಕಲಿ ಅಭ್ಯರ್ಥಿ ವಶಕ್ಕೆ

ಯಾದಗಿರಿ,ಅ.28–ಕೆಪಿಎಸ್‌ಸಿ ಪರೀಕ್ಷೆಯಲ್ಲಿ ಬ್ಲೂಟೂತ್ ಬಳಸಿ ನಕಲು ಮಾಡುತ್ತಿದ್ದ ಯುವಕನನ್ನು ಪೊಲೀಸರು ವಶಕ್ಕೆ ಪಡೆದ ಘಟನೆ ಯಾದಗಿರಿಯಲ್ಲಿ ನಡೆದಿದೆ. ಅಲ್ಲದೇ ಆತನಿಗೆ ಸಹಕರಿಸಿದ ಇಬ್ಬರು ಆರೋಪಿಗಳನ್ನು ಪೊಲೀಸರು ವಶಕ್ಕೆ ಪಡೆದಿದ್ದಾರೆ. ವಶಕ್ಕೆ ಪಡೆದ ಆರೋಪಿಯನ್ನು ಅಫಜಲಪುರದ ಸೊನ್ನಾ ಗ್ರಾಮದ ಪುಟ್ಟು ಎಂದು ಗುರುತಿಸಲಾಗಿದೆ. ಮತ್ತಿಬ್ಬರ ಹೆಸರನ್ನು ಪೊಲೀಸರು ಬಹಿರಂಗಪಡಿಸಿಲ್ಲ. ಆರೋಪಿ ಬ್ಲೂಟೂತ್ ಬಳಸಿಕೊಂಡು ಪರೀಕ್ಷೆ ಬರೆಯುತ್ತಿದ್ದ. ಈ ವೇಳೆ ವಿಚಾರಣೆ ನಡೆಸಿದಾಗ ಆತ ನಕಲಿ ಅಭ್ಯರ್ಥಿ ಎಂದು ತಿಳಿದು ಬಂದಿದೆ. ಆರೋಪಿಗಳನ್ನು ಯಾದಗಿರಿ ನಗರ ಠಾಣೆಗೆ ಕರೆತಂದು ಎಸ್‌ಪಿ ನೇತೃತ್ವದಲ್ಲಿ ಪೊಲೀಸರು ವಿಚಾರಣೆ ನಡೆಸು ತ್ತಿದ್ದಾರೆ. ಆರೋಪಿಗಳು ಪಿಎಸ್‌ಐ ಹಗರಣ ಕಿಂಗ್‌ಪಿನ್ ಆರ್.ಟಿ.ಪಾಟೀಲ್ ಗ್ರಾಮದವರು ಎಂದು ತಿಳಿದು ಬಂದಿದೆ.



ಮೈಸೂರಿನಲ್ಲಿ ಶ್ರೀ ಮಹರ್ಷಿ ವಾಲ್ಮೀಕಿ ಜಯಂತ್ಯುತ್ಸವದ ಅಂಗವಾಗಿ ಏರ್ಪಡಿಸಿದ್ದ ಅದ್ಧೂರಿ ಮೆರವಣಿಗೆಗೆ ಹಿರಿಯ ಶಾಸಕರಾದ ಜಿ.ಟಿ.ದೇವೇಗೌಡ ಚಾಲನೆ ನೀಡಿದರು. ಈ ವೇಳೆ ಶಾಸಕ ಕೆ.ಹರೀಶ್‌ಗೌಡ, ವಿಧಾನಪರಿಷತ್ ಸದಸ್ಯ ಮರಿತಿಬ್ಬೇಗೌಡ, ಮೇಯರ್ ಶಿವಕುಮಾರ್, ಉಪ ಮೇಯರ್ ರೂಪಾ, ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ, ಜಿಪಂ ಸಿಇಓ ಕೆ.ಎಂ.ಗಾಯತ್ರಿ, ಪೊಲೀಸ್ ಆಯುಕ್ತ ರಮೇಶ್, ಜಿಪಂ ಮಾಜಿ ಅಧ್ಯಕ್ಷ ಕೆ.ಮರೀಗೌಡ, ಕಾರ್ಪೋರೇಟರ್ ಲೋಕೇಶ್ ಪಿಯಾ ಇತರರು ಇದ್ದಾರೆ.

ಗಾಜಾದಲ್ಲಿ 150 ಸುರಂಗಗಳ ಮೇಲೆ ಇಸ್ರೇಲ್ ಸೇನೆ ದಾಳಿ

ಟೆಲ್‌ಅವಿವ್: ಇಸ್ರೇಲಿ ಯುದ್ಧ ವಿಮಾನಗಳು ಉತ್ತರ ಗಾಜಾದಲ್ಲಿ ತೀವ್ರವಾದ ದಾಳಿ ನಡೆಸಿದ್ದು, ಈ ವೇಳೆ ಹಮಾಸ್ ಉಗ್ರರ ಸುಮಾರು 150 "ಸುರಂಗ ಅಡಗು ದಾಣ ಗುರಿಗಳನ್ನು" ನಾಶಪಡಿಸಲಾಗಿದೆ ಎಂದು ಇಸ್ರೇಲ್ ಸೇನೆ ಹೇಳಿದೆ. ಇಸ್ರೇಲ್ ದೇಶದ ಇತಿಹಾಸದಲ್ಲೇ ಹಮಾಸ್ ಉಗ್ರರು ನಡೆಸಿದ ಅತ್ಯಂತ ಭೀಕರ ದಾಳಿಯ ಮೂರು ವಾರಗಳ ನಂತರ ಸೇನೆ ಗಾಜಾದಲ್ಲಿನ ಸುರಂಗ ಗುರಿಗಳನ್ನು ನಾಶಪಡಿಸಿದ ಕುರಿತು ಮೊದಲ ಬಾರಿಗೆ ಅಧಿಕೃತ ಹೇಳಿಕೆ ನೀಡಿದೆ. ಈ ಹೇಳಿಕೆಯಲ್ಲಿ ದಾಳಿಗೊಳಗಾದ ಪ್ರದೇಶಗಳಲ್ಲಿ ಹಮಾಸ್ ಉಗ್ರರ ಸುರಂಗ ಅಡಗು ದಾಣಗಳು ಭಯೋತ್ಪಾದಕ ಸುರಂಗಗಳು, ಭೂಗತ ಯುದ್ಧ ಸ್ಥಳಗಳು ಮತ್ತು ಹೆಚ್ಚುವರಿ ಭೂಗತ ಮೂಲಸೌಕರ್ಯಗಳು ಸೇರಿವೆ ಅಲ್ಲದೆ ಈ ದಾಳಿಯಲ್ಲಿ ಹಲವಾರು ಹಮಾಸ್ ಭಯೋತ್ಪಾದಕರು ಕೊಲ್ಲಲ್ಪಟ್ಟಿದ್ದಾರೆ ಎಂದು ಇಸ್ರೇಲ್ ಸೇನೆ ಸ್ಪಷ್ಟಪಡಿಸಿದೆ.

ಮೌಲ್ಯಯುತ ಶಿಕ್ಷಣದ ಮೂಲಕ ಯುವ ಸಮೂಹ ದುಷ್ಟ ಶಕ್ತಿಗಳೊಂದಿಗೆ ಕೈಜೋಡಿಸುವುದ ತಡೆಗಟ್ಟಬಹುದು

ಮೈಸೂರು ನಗರ ಕೆ.ಆರ್.ವಿಭಾಗದ ಎಸಿಪಿ ಗಂಗಾಧರಸ್ವಾಮಿ ಅಭಿಮತ

ಮೈಸೂರು,ಅ.28(ಎಸ್‌ಪಿಎನ್)–ಮೌಲ್ಯಯುತ ಶಿಕ್ಷಣ ಕುರಿತು ವಿದ್ಯಾರ್ಥಿದೆಸೆಯಿಂದಲೇ ಅರಿವು ಮೂಡಿಸಿದರೆ, ಯುವ ಸಮೂಹ ಸಮಾಜದ ದುಷ್ಟ ಶಕ್ತಿಗಳ ಜೊತೆ ಕೈಜೋಡಿಸುವುದಿಲ್ಲ. ಇದರಿಂದ ಪೊಲೀಸ್ ಇಲಾಖೆಗೂ ಸಹಕಾರ ಆಗಲಿದೆ ಎಂದು ಕೆ.ಆರ್.ವಿಭಾಗದ ಸಹಾಯಕ ಪೊಲೀಸ್ ಆಯುಕ್ತ (ಎಸಿಪಿ) ಎಸ್.ಇ.ಗಂಗಾಧರಸ್ವಾಮಿ ಅಭಿಪ್ರಾಯಪಟ್ಟರು.

ಮೈಸೂರು ಜೆ.ಪಿ.ನಗರ ಅಕ್ಕಮಹಾದೇವಿ ಪ್ರತಿಮೆ ಆವರಣದಲ್ಲಿ ಜೆ.ಪಿ.ನಗರ ಶರಣ ವೇದಿಕೆ ವತಿಯಿಂದ ಆಯೋಜಿಸಿದ್ದ ಪ್ರತಿಭಾ ಪುರಸ್ಕಾರ, ಅಕ್ಕ ಮಹಾದೇವಿ ದತ್ತಿ ಉಪನ್ಯಾಸ ಹಾಗೂ ಲೇಖಕ ನಗರ್ಲೆ ಶಿವಕುಮಾರ್ ಸಂಪಾದಿತ 'ನುಡಿದೀಪ್ತಿ' ಕೃತಿ ಬಿಡುಗಡೆ ಕಾರ್ಯಕ್ರಮದಲ್ಲಿ ಮಾತನಾಡಿದರು.

ಜನ ಸಾಮಾನ್ಯರಲ್ಲಿ ಕಾನೂನು ಸುವ್ಯವಸ್ಥೆ ಕುರಿತು ಜಾಗೃತಿ ಇರುವುದಿಲ್ಲ. ಅಂತಹ ಜನರ ಮನಸ್ಸಿನಲ್ಲಿ ಅಪರಾಧ ಕೃತ್ಯಗಳಲ್ಲಿ ಭಾಗಿಯಾಗಬಾರದು ಎಂಬ ಆಲೋಚನೆ ಮನಸ್ಸಿನಲ್ಲಿ ಮೂಡಲು ಅಕ್ಕ ಮಹಾದೇವಿ ಸೇರಿದಂತೆ ಇತರೆ ಶರಣರ ತತ್ವಾದರ್ಶಗಳನ್ನು ಬಿಂಬಿಸುವ ಇಂತಹ ಕಾರ್ಯಕ್ರಮಗಳು ಅವಶ್ಯಕ. ಹಾಗಾಗಿ ದಾರ್ಶನಿಕರ ಮೌಲ್ಯಗಳನ್ನು ಜನರಲ್ಲಿ ಬಿತ್ತುವುದರಿಂದ ಪೊಲೀಸ್ ಇಲಾಖೆ



ಮೇಲಿನ ಹೊಣೆಗಾರಿಕೆ ಶೇ.60 ಕಡಿಮೆಯಾದಂತೆ ಎಂದು ಅಭಿಪ್ರಾಯಪಟ್ಟರು.

ಯುವಕರಲ್ಲಿ ಮೌಲ್ಯಯುತ ಹಾಗೂ ನೈತಿಕ ಶಿಕ್ಷಣ ಕುರಿತು ಜಾಗೃತಿಗೆ ಇಂತಹ ವೇದಿಕೆಗಳು ಸಹಕಾರಿಯಾಗುತ್ತದೆ. ಮೌಲ್ಯಯುತ ಶಿಕ್ಷಣ ಬಗ್ಗೆ ಜಾಗೃತಿ ಇರುವ ವ್ಯಕ್ತಿ ಅಥವಾ ಸಮೂಹ ಸಮಾಜಘಾತುಕ ಶಕ್ತಿಗಳ ಜೊತೆಗೆ ಕೈಜೋಡಿಸಲು ಹತ್ತಾರು ಬಾರಿ ಯೋಚಿಸುತ್ತಾರೆ. ಸಮಾಜದಲ್ಲಿ ಇಂತಹ ಆಲೋಚನೆಗಳು ಮೂಡುವುದರಿಂದ ಸಮಾಜದ ಸ್ವಾಸ್ಥ್ಯ, ದೇಶದ ಪ್ರಗತಿಗೆ ಪರೋಕ್ಷವಾಗಿ ಸಹಕಾರ ನೀಡಿದಂತೆ ಎಂದು ತಿಳಿಸಿದರು.

ತಂತ್ರಜ್ಞಾನ ಮುಂದುವರೆದಂತೆ ಸಮಾಜದ ಜೀವನ ಶೈಲಿ, ವೃತ್ತಿ ಜೀವನದ ಶೈಲಿಯೂ ಬದಲಾಗುತ್ತಿದೆ. ಬದಲಾವಣೆ ಜಗತ್ತಿನಲ್ಲಿ ಯುವ ಸಮೂಹ ಸ್ಪರ್ಧೆಗಳನ್ನು ಎದುರಿಸಬೇಕಾದ ಸನ್ನಿವೇಶವಿದೆ. ಹಾಗಾಗಿ ಯುವಕರಿಗೆ ಹೆಚ್ಚು ಐಎಎಸ್, ಐಪಿಎಸ್, ಐಎಫ್‌ಎಸ್ ಸೇರಿದಂತೆ ಇತರೆ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತರಬೇತಿ ನೀಡುವ ಕುರಿತು ಸಮಾಜದ ಪ್ರಮುಖರು ಚಿಂತಿಸಬೇಕು ಎಂದು ಸಲಹೆ ನೀಡಿದರು.

ಈ ವೇಳೆ ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕರ ಸಂಘದ ನಿರ್ದೇಶಕ ವೇದಾರಾಧ್ಯ, ಹಿರಿಯ ಛಾಯಾಗ್ರಾಹಕ ಅನುರಾಗ್ ಬಸವರಾಜ್ ಅವರನ್ನು ಸನ್ಮಾನಿಸಲಾಯಿತು. ನಂತರ ಎಸ್‌ಎಸ್‌ಎಲ್‌ಸಿ, ಪಿಯುಸಿಯಲ್ಲಿ ಹೆಚ್ಚು ಅಂಕಗಳಿಸಿದ ಪ್ರತಿಭಾವಂತ ವಿದ್ಯಾರ್ಥಿಗಳಾದ ಎನ್.ಕಿರಣ್, ಕೀರ್ತನ ಶೇಖರ್, ಎನ್,ಭರತ್, ಕೆ.ಬಿ.ವೇದಿಕ, ಎ.ಎಸ್. ಚಿನ್ಮಯಿ, ನಿಧಿ ಜಿ ಪ್ರಸಾದ್, ಜೆ.ಖುಷಿ ಸೇರಿದಂತೆ ಇತರೆ ವಿದ್ಯಾರ್ಥಿಗಳನ್ನು ಸನ್ಮಾನಿಸಲಾಯಿತು.

ವೇದಿಕೆಯಲ್ಲಿ ವಿಧಾನಪರಿಷತ್ ಮಾಜಿ ಸದಸ್ಯ ಪ್ರೊ.ಕೆ.ಆರ್.ಮಲ್ಲಿಕಾರ್ಜುನಪ್ಪ, ಶರಣ ವೇದಿಕೆಯ ಪ್ರಧಾನ ಕಾರ್ಯದರ್ಶಿ ಜೆ.ನಾಗೇಂದ್ರ ಕುಮಾರ್, ಸಂಚಾಲಕ ನಂದೀಶ್ ಎಸ್, ಸಹ ಕಾರ್ಯದರ್ಶಿ ಬಿ.ಮಹದೇವಸ್ವಾಮಿ, ಖಜಾಂಚಿ ಯು.ಎಸ್. ಸದಾಶಿವ ನಿರ್ದೇಶಕರಾದ ಎಸ್.ಪರಮೇಶ್ವರಪ್ಪ, ಸಿ.ನಾಗರಾಜು, ಎಚ್.ಎಸ್.ಚಂದ್ರಶೇಖರ್, ಸತ್ಯೇಂದ್ರ ಮೂರ್ತಿ ಹಾಗೂ ಇಂಡಾಲ್ ಮಹದೇವಸ್ವಾಮಿ ಇನ್ನಿತರರು ಹಾಜರಿದ್ದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಮೈಸೂರಿನ ಮಿನಿ ವಿಧಾನಸೌಧದ ಮುಂದಿನ ಉದ್ಯಾನದಲ್ಲಿದ್ದ ಮಹರ್ಷಿ ವಾಲ್ಮೀಕಿ ಪ್ರತಿಮೆ ರಾತ್ರೋರಾತ್ರಿ ಮಾಯ!

ಸಿಟ್ಟಿಗೆದ್ದ ಹಲವರಿಂದ ವಾಲ್ಮೀಕಿ ಜಯಂತಿ ಮೆರವಣಿಗೆಗೆ ತಡೆದು ಪ್ರತಿಭಟನೆ

- ಪ್ರತಿಮೆ ಮರು ಪ್ರತಿಷ್ಠಾಪನೆಗೆ ಬಿಗಿ ಪಟ್ಟು
- ಇತರೆಡೆ ಇಲ್ಲದ ಕಾನೂನು ಇಲ್ಲೇಕೆ ಎಂದು ಪ್ರಶ್ನೆ
- ಸ್ಥಳದಲ್ಲಿ ಕೆಲಕಾಲ ಬಿಗುವಿನ ವಾತಾವರಣ
- ಜಿಲ್ಲಾಧಿಕಾರಿ ಭರವಸೆ ಮೇರೆಗೆ ಪ್ರತಿಭಟನೆ ವಾಪಸು

ಮೈಸೂರು,ಅ.28(ಜಿಎಲ್‌ಆರ್)–ಮೈಸೂರಿನ ನಜರ್‌ಬಾದ್‌ನ ಮಿನಿ ವಿಧಾನಸೌಧದ ಮುಂದಿರುವ ಉದ್ಯಾನವನದಲ್ಲಿದ್ದ ಮಹರ್ಷಿ ವಾಲ್ಮೀಕಿ ಪ್ರತಿಮೆಯನ್ನು ರಾತ್ರೋರಾತ್ರಿ ತೆರವುಗೊಳಿಸಿರುವುದನ್ನು ವಿರೋಧಿಸಿ ಹಲವು ವಾಲ್ಮೀಕಿ ಜಯಂತ್ಯೋತ್ಸವದ ಮೆರವಣಿಗೆ ತಡೆದು ದಿಢೀರ್ ಪ್ರತಿಭಟನೆ ನಡೆಸಿದ ಘಟನೆ ಇಂದು ನಡೆಯಿತು.

ಮೈಸೂರಿನ ಅರಮನೆ ಬಲರಾಮ ದ್ವಾರದ ಆಂಜನೇಯಸ್ವಾಮಿ ದೇವಸ್ಥಾನದ ಮುಂಭಾಗ ಮಹರ್ಷಿ ವಾಲ್ಮೀಕಿ ಜಯಂತ್ಯೋತ್ಸವದ ಮೆರವಣಿಗೆ ಇನ್ನೇನು ಆರಂಭವಾಗಬೇಕಿತ್ತು ಅಷ್ಟರಲ್ಲಿ ದಿಢೀರ್ ಬಂದ ನಗರಪಾಲಿಕೆ ಸದಸ್ಯ ಲೋಕೇಶ್ ಪಿಯಾ ನೇತೃತ್ವದ ತಂಡ, ಮೆರವಣಿಗೆ ತಡೆಯಿತು.

ಮಿನಿ ವಿಧಾನಸೌಧದ ಎದುರಿನ ಉದ್ಯಾನವನದಲ್ಲಿ ಮಹರ್ಷಿ ವಾಲ್ಮೀಕಿ ಅವರ ಐದೂವರೆ ಅಡಿ ಎತ್ತರದ ಕಲ್ಲಿನ ಪ್ರತಿಮೆ ನಿರ್ಮಾಣ ಕಾರ್ಯ ಆರಂಭವಾಗಿತ್ತು. ಈಗ ಪಿಒಪಿಯಲ್ಲಿ ಮಾಡಿದ ವಾಲ್ಮೀಕಿ ಪ್ರತಿಮೆಯನ್ನು ಶುಕ್ರವಾರ ಪ್ರತಿಷ್ಠಾಪಿಸಿ ವಾಲ್ಮೀಕಿ ಜಯಂತಿ ದಿನವಾದ ಇಂದು ಅದನ್ನು ಅನಾವರಣಗೊಳಿಸಲು ಸಿದ್ಧತೆ ನಡೆಸಲಾಗಿತ್ತು.

ಆದರೆ ಸುಪ್ರೀಂಕೋರ್ಟ್ ಆದೇಶದ ಪ್ರಕಾರ ಉದ್ಯಾನವನದಲ್ಲಿ ಪ್ರತಿಮೆ ಸ್ಥಾಪನೆಗೆ ಅವಕಾಶ ಇಲ್ಲದ ಕಾರಣ ನಗರಪಾಲಿಕೆ ಅಧಿಕಾರಿಗಳು ರಾತ್ರೋರಾತ್ರಿ ವಾಲ್ಮೀಕಿ ಪ್ರತಿಮೆ ತೆರವುಗೊಳಿಸಿ, ನಗರಪಾಲಿಕೆ ಗೋಡೌನ್‌ನಲ್ಲಿಟ್ಟಿದ್ದರು.

ಪಾಲಿಕೆ ಅಧಿಕಾರಿಗಳ ಈ ಕ್ರಮದಿಂದ ಸಿಟ್ಟಿಗೆದ್ದ ಲೋಕೇಶ್ ಪಿಯಾ ಮತ್ತು ಇತರರು ಇಂದು ಆರಂಭವಾಗಬೇಕಿದ್ದ ಮೆರವಣಿಗೆಗೆ ತಡೆದರು. ವಾಲ್ಮೀಕಿ ಜಯಂತಿ ದಿನದಂದೇ ಅವರ ಪ್ರತಿಮೆ ಪ್ರತಿಷ್ಠಾಪಿಸಲು ಬಿಡದೆ ಅವಮಾನಿಸಲಾಗಿದೆ. ಮಿನಿ ವಿಧಾನಸೌಧದ ಮುಂಭಾಗದ ಉದ್ಯಾನವನದಲ್ಲಿ ವಾಲ್ಮೀಕಿ ಅವರ ಪ್ರತಿಮೆಯನ್ನು ಈ ಕೂಡಲೇ ಮತ್ತೆ ಪ್ರತಿಷ್ಠಾಪಿಸದಿದ್ದರೆ ಮೆರವಣಿಗೆ ಸಾಗಲು ಬಿಡುವುದಿಲ್ಲ. ಜೊತೆಗೆ ಮೆರವಣಿಗೆ ಬಹಿಷ್ಕಾರ ಹಾಕುತ್ತೇವೆ ಎಂದು ಎಚ್ಚರಿಕೆ ನೀಡಿದರು.

ಉದ್ಯಾನವನದಲ್ಲಿ ಪ್ರತಿಮೆ ಸ್ಥಾಪನೆಗೆ ಕಾನೂನು ಪ್ರಕಾರ ಅವಕಾಶವಿಲ್ಲವೆಂದು ಅಧಿಕಾರಿಗಳು ತೆರವುಗೊಳಿಸಿದ್ದಾರೆ. ಈ ಬಗ್ಗೆ ಚರ್ಚಿಸಿ ಪರಿಹಾರ ಮಾಡೋಣ. ಈಗ ಪ್ರತಿಭಟನೆ ವಾಪಸು ಪಡೆಯಿರಿ ಎಂದು ಮೇಯರ್ ಶಿವಕುಮಾರ್ ಮಾಡಿದ ಮನವಿಗೂ ಸ್ಪಂದಿಸದೆ, ಪ್ರತಿಭಟನೆ ಮುಂದುವರೆಸಿದರು. ಈ ವೇಳೆ ಸ್ಥಳಕ್ಕೆ ಬಂದ ಶಾಸಕ ಜಿ.ಟಿ.ದೇವೇಗೌಡರು, ಪ್ರತಿಮೆ ತೆರವು ಮಾಡಿದ ಅಧಿಕಾರಿಗಳ ವಿರುದ್ಧ ಅಸಮಾಧಾನ ವ್ಯಕ್ತಪಡಿಸಿದರು. ಪ್ರತಿಮೆ ವಾಪಸು ಕೊಟ್ಟು, ಮೆರವಣಿಗೆ ಆರಂಭವಾಗಲು ಅನುವು ಮಾಡಿಕೊಡಬೇಕೆಂದು ಸೂಚಿಸಿದರು.

ಜಿಲ್ಲಾಧಿಕಾರಿ ಮನವೊಲಿಕೆಗೂ ಬಗ್ಗದ ಪ್ರತಿಭಟನಾಕಾರರು: ನಗರಪಾಲಿಕೆ ಕೌನ್ಸಿಲ್ ಸಭೆಯಲ್ಲಿ ಈ ವಿಚಾರ ಮಂಡಿಸಿ ಒಪ್ಪಿಗೆ ಪಡೆದು ಕಳುಹಿಸಿಕೊಟ್ಟರೆ ಪರಿಶೀಲನೆ ಮಾಡಲಾಗುವುದು. ಈಗ ಅಲ್ಲಿ ಪ್ರತಿಮೆ ನಿರ್ಮಾಣಕ್ಕೆ ಕಾನೂನಿನಲ್ಲಿ ಅವಕಾಶವಿಲ್ಲ. ಆದ ಕಾರಣ ಪ್ರತಿಭಟನೆ ಹಿಂಪಡೆಯುವಂತೆ ಜಿಲ್ಲಾಧಿಕಾರಿ ಡಾ.ಕೆ.ವಿ. ರಾಜೇಂದ್ರ ಪ್ರತಿಭಟನಾಕಾರರಲ್ಲಿ ಮನವಿ ಮಾಡಿದರೂ ಪ್ರಯೋಜನವಾಗಲಿಲ್ಲ.

ಬಹಳಷ್ಟು ಉದ್ಯಾನವನದಲ್ಲಿ ಪ್ರತಿಮೆ ಹಾಗೂ ಪುತ್ಥಳಿ ನಿರ್ಮಾಣ ಮಾಡಲಾಗಿದೆ. ಅಲ್ಲಿ ಅಡ್ಡ ಬಾರದ ಕಾನೂನು ಕಟ್ಟಳೆ ಇಲ್ಲಿ ಬರುವುದೇ. ನಾಯಕ ಸಮುದಾಯದ ಬಗ್ಗೆ ಎಷ್ಟರ ಮಟ್ಟಿಗೆ ತಾತ್ಸಾರ ಇದೆ ಎಂಬುದನ್ನು ಇದು ತೋರಿಸುತ್ತದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ನಗರಪಾಲಿಕೆ ಕೌನ್ಸಿಲ್ ಒಪ್ಪಿಗೆ ಇಲ್ಲದೆ ಪ್ರತಿಮೆ ಪ್ರತಿಷ್ಠಾಪಿಸುವುದು ಸರಿಯಲ್ಲ. ಹಾಗೊಂದು ವೇಳೆ ಪ್ರತಿಷ್ಠಾಪಿಸಿದರೆ ಬೇರೊಂದು ರೀತಿಯ ಸಮಸ್ಯೆ ಎದುರಾಗಲಿದೆ. ಮುಂದಿನ ವರ್ಷದೊಳಗೆ ಪ್ರತಿಮೆ ಸ್ಥಾಪನೆಗೆ ಅವಕಾಶ ಮಾಡಿಕೊಡಲಾಗುವುದು ಎಂದು ಭರವಸೆ ನೀಡಿದರು.

ಆದರೆ ಜಿಲ್ಲಾಧಿಕಾರಿಗಳ ಭರವಸೆಗೂ ಸ್ಪಂದಿಸದ ಪ್ರತಿಭಟನಾಕಾರರು ಮೆರವಣಿಗೆಗೆ ಅಡ್ಡಲಾಗಿ ಕುಳಿತು ಧಿಕ್ಕಾರದ ಘೋಷಣೆಗಳನ್ನು ಕೂಗಿದರು. ಮಹಾನಾಯಕರ ಜಯಂತಿಯನ್ನು ಸಂಭ್ರಮದಿಂದ ಆಚರಿಸಬೇಕು ಹೊರತು, ಹೀಗೆ ಬಹಿಷ್ಕಾರ ಮಾಡುವುದು ಸರಿಯಲ್ಲ ಎಂದು ಜಿಲ್ಲಾಧಿಕಾರಿ ಅಸಮಾಧಾನ ವ್ಯಕ್ತಪಡಿಸಿದರು. ಆದರೆ ಜಿಲ್ಲಾಧಿಕಾರಿಗಳ ಮಾತಿಗೆ ಪ್ರತಿಭಟನಾಕಾರರು ಸಮ್ಮತಿಸದೆ ಧಿಕ್ಕಾರದ ಘೋಷಣೆ ಮೊಳಗಿಸಿದರು. ನಗರಪಾಲಿಕೆಯವರು ತೆರವು ಮಾಡಿರುವ ಪ್ರತಿಮೆಯನ್ನು ನಿಮಗೆ ಕೊಡಲಿದ್ದಾರೆ. ಅದನ್ನು ಕಲಾ ಮಂದಿರದಲ್ಲಿ ಇಟ್ಟು ಪೂಜೆ ಮಾಡೋಣ. ತರುವಾಯ ಅದೇ ಉದ್ಯಾನವನದಲ್ಲಿ ಪೂಜೆ ಮಾಡಿ, ಮುಗಿಸೋಣ. ಮುಂದಿನ ವರ್ಷದೊಳಗೆ ಪ್ರತಿಮೆ ಸ್ಥಾಪನೆ ಬಗ್ಗೆ ನಿರ್ಧಾರ ಮಾಡೋಣ ಎಂದು ಡಾ.ರಾಜೇಂದ್ರ ನೀಡಿದ ಭರವಸೆ ಮೇರೆಗೆ ಅಂತೂ ಪ್ರತಿಭಟನೆ ವಾಪಸು ಪಡೆದರು.



ಒಂದು ಗಂಟೆ ತಡವಾಗಿ ಆರಂಭವಾದ ಮೆರವಣಿಗೆ

ಮಹರ್ಷಿ ವಾಲ್ಮೀಕಿ ಜಯಂತ್ಯೋತ್ಸವದ ಮೆರವಣಿಗೆ ಬೆಳಗ್ಗೆ 9.30 ಗಂಟೆಗೆ ಆರಂಭವಾಗಬೇಕಿತ್ತು. ಆದರೆ ಪ್ರತಿಭಟನೆ ಹಿನ್ನಲೆಯಲ್ಲಿ ಒಂದೂವರೆ ಗಂಟೆ ವಿಳಂಬವಾಗಿ ಆರಂಭವಾಯಿತು. ಇದರಿಂದ ಸ್ಥಳದಲ್ಲಿ ಗೊಂದಲದ ವಾತಾವರಣ ನಿರ್ಮಾಣವಾಗಿತ್ತು. ಮುಂಜಾಗ್ರತಾ ಕ್ರಮವಾಗಿ ಹೆಚ್ಚಿನ ಪೊಲೀಸ್ ಬಂದೋಬಸ್ತ್ ನಿಯೋಜಿಸಲಾಗಿತ್ತು. ಈ ಬೆಳವಣಿಗೆಯಿಂದ ಕೆಲಕಾಲ ಬಿಗುವಿನ ವಾತಾವರಣ ನಿರ್ಮಾಣವಾಗಿತ್ತು.

ಒಂದು ಕಡೆ ಪ್ರತಿಭಟನೆ ನಡೆಯುತ್ತಿದ್ದರೆ, ಮತ್ತೊಂದು ಕಡೆ ಶಾಸಕ ಜಿ.ಟಿ.ದೇವೇಗೌಡ, ಮರಿತಿಬ್ಬೇಗೌಡ, ಶ್ರೀವತ್ಸ ಸೇರಿದಂತೆ ಇತರರು ಮೆರವಣಿಗೆ ಆರಂಭವಾಗುವ ಸಮಯಕ್ಕಾಗಿ ಕಾಯುತ್ತಾ ಶಾಮಿಯಾನದಲ್ಲಿ ಕುಳಿತಿದ್ದರು. ಕೊನೆಗೆ ಜಿಲ್ಲಾಧಿಕಾರಿ ಡಾ.ರಾಜೇಂದ್ರ ನೀಡಿದ ಭರವಸೆ ಮೇರೆಗೆ ಪ್ರತಿಭಟನೆ ವಾಪಸು ಪಡೆದ ನಂತರ ವರ್ಣರಂಜಿತ ಮೆರವಣಿಗೆಯಲ್ಲಿ ಸಾವಿರಾರು ಜನರು ಪಾಲ್ಗೊಂಡಿದ್ದರು.

ಮೈಸೂರು ತಾಲೂಕು ಆಡಳಿತ ಭವನದ ಮುಂದಿನ ಉದ್ಯಾನದಲ್ಲಿ ಮಹರ್ಷಿ ವಾಲ್ಮೀಕಿ ಪ್ರತಿಮೆ ಅನಾವರಣ

ಮೈಸೂರು,ಅ.28(ಎಂಕೆ)– ಮೈಸೂರು ತಾಲೂಕು ಆಡಳಿತ ಭವನದ ಎದುರಿನ ಉದ್ಯಾನವನದಲ್ಲಿ ಮಹರ್ಷಿ ವಾಲ್ಮೀಕಿಯವರ ಪ್ರತಿಮೆ ಅನಾವರಣಗೊಳಿಸಿ, ಜಯಂತಿ ಆಚರಿಸಲಾಯಿತು.

ಶನಿವಾರ ಸಂಜೆ ಮೇಯರ್ ಶಿವಕುಮಾರ್, ಶಾಸಕರಾದ ಕೆ.ಹರೀಶ್‌ಗೌಡ, ಅನಿಲ್‌ಚಿಕ್ಕಮಾದು, ಮಾಜಿ ಶಾಸಕ ಎಂ.ಕೆ.ಸೋಮಶೇಖರ್ ಮತ್ತಿತರರ ಸಮ್ಮುಖದಲ್ಲಿ ಮಹರ್ಷಿ ವಾಲ್ಮೀಕಿ ಯವರ ಪ್ರತಿಮೆ ಅನಾವರಣಗೊಳಿಸಿ, ಜಯಂತಿ ಆಚರಿಸಲಾಯಿತು. ಈ ವೇಳೆ ಪರಸ್ಪರ ಸಿಹಿ ಹಂಚಿ ಸಂಭ್ರಮಿಸಲಾಯಿತು. ನಗರಪಾಲಿಕೆ ಸದಸ್ಯ ವಿ.ಲೋಕೇಶ್ ಪಿಯಾ, ಮುಖಂಡರಾದ ದೇವರಾಜ್ ಕಾಟೂರು, ಬಸವರಾಜು, ಉದ್ಬೂರು ಕೃಷ್ಣ, ವಸಂತ ನಾಯಕ್, ಕೃಷ್ಣರಾಜ ಬ್ಲಾಕ್ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಜಿ. ಸೋಮಶೇಖರ್ ಸೇರಿದಂತೆ ನಾಯಕ ಸಮಾಜದ ಮುಖಂಡರು ಪಾಲ್ಗೊಂಡಿದ್ದರು.



ಇತ್ತೀಚಿನ ದಿನಗಳಲ್ಲಿ ಬ್ಯಾಂಕಿಂಗ್ ಕ್ಷೇತ್ರದಲ್ಲಿ ವ್ಯಾಪಕ ವಂಚನೆ ವರದಿ

ಗ್ರಾಹಕರು, ಬ್ಯಾಂಕ್‌ಗಳು ಎಚ್ಚರ ವಹಿಸಲು ನ್ಯಾ. ಹುಲುವಾಡಿ ರಮೇಶ್ ಸಲಹೆ

ಮೈಸೂರು,ಅ.27(ಜಿಎ)–ಇತ್ತೀಚಿನ ದಿನಗಳಲ್ಲಿ ಬ್ಯಾಂಕಿಂಗ್ ಕ್ಷೇತ್ರದಲ್ಲಿ ಕೆವೈಸಿ ಅಪ್‌ಡೇಟ್ ಸೇರಿದಂತೆ ಮಾಹಿತಿ ಪಡೆದು ವಂಚಿಸುವ ಪ್ರಕರಣಗಳು ಹೆಚ್ಚಾಗುತ್ತಿದ್ದು, ತಮ್ಮ ತಮ್ಮ ಖಾತೆಯನ್ನು ಸುರಕ್ಷಿತವಾಗಿಡಲು ಗ್ರಾಹಕರು, ಜೊತೆಗೆ ಬ್ಯಾಂಕ್ ಜವಾಬ್ದಾರಿಯಿಂದಿರಬೇಕು ಎಂದು ನ್ಯಾಯಮೂರ್ತಿ ಹುಲುವಾಡಿ ಜಿ.ರಮೇಶ್ ಸಲಹೆ ನೀಡಿದರು.

ಮೈಸೂರಿನ ಗೋಕುಲಂನಲ್ಲಿರುವ ವಿದ್ಯಾವರ್ಧಕ ಇಂಜಿನಿಯರಿಂಗ್ ಕಾಲೇಜಿನ ವ್ಯವಹಾರ ಆಡಳಿತ ವಿಭಾಗದ ವತಿಯಿಂದ 'ಭಾರತದ ಬ್ಯಾಂಕಿಂಗ್ ಕ್ಷೇತ್ರ–ಭೂತಕಾಲ, ವರ್ತಮಾನ ಮತ್ತು ಭವಿಷ್ಯ' ಕುರಿತು ಆಯೋಜಿಸಿದ್ದ ಒಂದು ದಿನದ ರಾಷ್ಟ್ರೀಯ ಮಟ್ಟದ ಸಮ್ಮೇಳನ ಉದ್ಘಾಟಿಸಿ ಅವರು ಮಾತನಾಡಿದರು.

ಗ್ರಾಹಕರು ಬ್ಯಾಂಕ್‌ನಲ್ಲಿ ಖಾತೆ ತೆರೆದರೆ ನಿಮ್ಮ ಕರ್ತವ್ಯ ಮುಗಿಯಿತು ಎಂದಲ್ಲ. ಬ್ಯಾಂಕಿನಲ್ಲಿ ಹೂಡಿದ ಹಣವನ್ನು ರಕ್ಷಿಸಿಕೊಳ್ಳಲು ಸದಾ ಜಾಗರೂಕರಾಗಿರಬೇಕು. ಬ್ಯಾಂಕ್‌ಗಳು ಎಚ್ಚರಿಕೆ ವಹಿಸಿದರೆ ಗ್ರಾಹಕ ಮನೆಯಲ್ಲಿ ಸುರಕ್ಷಿತವಾಗಿರುತ್ತಾನೆ. ಬ್ಯಾಂಕ್‌ನವರು ಒಂದು ಕ್ಷಣ ಮೈಮರೆತರೆ, ಹಣ ಮೂರನೇ ವ್ಯಕ್ತಿಯ ಕೈಯ್ಯಲ್ಲಿರುತ್ತದೆ ಎಂದರು.

ದೇಶದಲ್ಲಿ ಮೊದಲು ವಸ್ತುಗಳ ವಿನಿಮಯಕ್ಕಾಗಿ ಬ್ಯಾಂಕಿಂಗ್ ವ್ಯವಸ್ಥೆ ಪ್ರಾರಂಭವಾಯಿತು. ಈಗ ಖಾಸಗಿ ಮತ್ತು ಸಾರ್ವಜನಿಕ ಬ್ಯಾಂಕಿಂಗ್ ವ್ಯವಸ್ಥೆಯನ್ನು ದೇಶಾದ್ಯಂತ ಸ್ಥಾಪಿಸಲಾಗಿದೆ. ಹಾಗೇ ಬ್ಯಾಂಕಿಂಗ್ ರಾಷ್ಟ್ರೀಕರಣಗೊಳ್ಳುವ ಜೊತೆಗೆ ವಿಲೀನಗೊಳ್ಳುತ್ತಿವೆ. ಇನ್ನು ಕೆಲವು ವ್ಯವಹಾರವನ್ನು ಸ್ಥಗಿತಗೊಳಿಸುತ್ತಿವೆ. ಈಗ ಭಾರತ ಸಾಮಾನ್ಯ ದೇಶವಲ್ಲ. ವಾಣಿಜ್ಯ ವ್ಯವಹಾರ ಮತ್ತು ಕೈಗಾರಿಕೆಗಳಲ್ಲಿ ನಮ್ಮ ವಹಿವಾಟು ಉತ್ತಮಗೊಳ್ಳುತ್ತಿವೆ. ಎಂಜಿನಿಯರಿಂಗ್ ಕಾಲೇಜು, ವೈದ್ಯಕೀಯ ಕಾಲೇಜು, ವ್ಯಾಪಾರ ಮತ್ತು ವಾಣಿಜ್ಯ ವ್ಯವಹಾರದಿಂದಾಗಿ ಈಗ ಹಣದ ಸಮಸ್ಯೆ ಇಲ್ಲ. ಆದರೆ, ನಿರ್ವಹಣೆ ಮಾತ್ರ ಸಮಸ್ಯೆಯಾಗಿದೆ ಎಂದು ಅಭಿಪ್ರಾಯಪಟ್ಟರು.

ಬ್ಯಾಂಕಿಂಗ್ ವ್ಯವಸ್ಥೆ ಎಂದರೆ, ಅದು ನಿಧಿಯಲ್ಲ. ಹಣವನ್ನು ಮೇಲ್ವಿಚಾರಣೆ ಮಾಡುವುದು ಮತ್ತು ಗ್ರಾಹಕರು ನೀಡಿದ ಮೊತ್ತದ ಪಾಲಕರಾಗಿ ಕಾರ್ಯನಿರ್ವಹಿಸುವುದು ಬ್ಯಾಂಕಿನ ಜವಾಬ್ದಾರಿಯಾಗಿದೆ. ಬ್ಯಾಂಕ್ ಕಸ್ಟೋಡಿಯನ್ ಆಗಿ ಸಾರ್ವಜನಿಕರ ಹಿತಾಸಕ್ತಿ ಕಾಪಾಡಬೇಕು ಮತ್ತು ಸಾರ್ವಜನಿಕರಿಗೆ ಉತ್ತರದಾಯಿತ್ವ ಹೊಂದಿರಬೇಕು ಎಂದರು.

ಇತ್ತೀಚಿನ ದಿನಗಳಲ್ಲಿ ಬ್ಯಾಂಕ್ ವಂಚನೆಗಳು ಹೆಚ್ಚಾಗುತ್ತಿರುವುದನ್ನು ನೋಡಿದ್ದೇವೆ. KYC ಸೇರಿದಂತೆ ಅನೇಕ ಮಾಹಿತಿ ಸಂಗ್ರಹಣೆ ಮೂಲಕ ವಂಚನೆಗಳು ನಡೆಯುತ್ತಿದ್ದು, ಗ್ರಾಹಕರು ಅದರ ಬಗ್ಗೆ ಎಚ್ಚರ ವಹಿಸುವುದು ಉತ್ತಮ. ವಾಸ್ತವವಾಗಿ ಬ್ಯಾಂಕಿಂಗ್ ಪ್ರಾಧಿಕಾರವು ಅದರ ಜವಾಬ್ದಾರಿಯನ್ನು ಅರಿವಿರಬೇಕು. ಹಣ ಸುರಕ್ಷಿತವಾಗಿರಲು ಗ್ರಾಹಕರು ಮತ್ತು ಬ್ಯಾಂಕ್ ಜವಾಬ್ದಾರಿಯಿಂದಿರಬೇಕು. ಗ್ರಾಹಕರ ಕರ್ತವ್ಯವೆಂದರೆ ಪ್ರತಿದಿನ ಖಾತೆಯನ್ನು ಒಮ್ಮೆ ಪರಿಶೀಲಿಸಿಕೊಳ್ಳುವುದು. ಈ ಸಂಸ್ಥೆಯ ವಿದ್ಯಾರ್ಥಿ ಮತ್ತು ಅಧ್ಯಾಪಕರೂ ಆಗಿದ್ದ ಹಾಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಸಂಸ್ಥೆಗೆ ವೈದ್ಯಕೀಯ ಕಾಲೇಜು ಮಂಜೂರು ಮಾಡುತ್ತಾರೆ ಎಂಬ ಆಶಾ ಭಾವನೆ ಇದೆ ಎಂದರು.

ಮೈಸೂರು ಶಿಕ್ಷಣದ ನಗರವಾಗಿದ್ದು, ವಿದ್ಯಾರ್ಥಿಗಳು ಉತ್ತಮ ವ್ಯಾಸಂಗ ಮಾಡಿ ಪ್ರತಿಷ್ಠಿತರು, ಉತ್ತಮ ರಾಜಕಾರಣಿಗಳಾಗುವ ಮೂಲಕ ದೇಶಕ್ಕೆ ಸೇವೆ ಸಲ್ಲಿಸಬೇಕು ಎಂದು ಶುಭ ಹಾರೈಸಿದರು.

ಕಾರ್ಯಕ್ರಮದಲ್ಲಿ ವಿದ್ಯಾವರ್ಧಕ ಸಂಘದ ಅಧ್ಯಕ್ಷ ಗುಂಡಪ್ಪಗೌಡ, ಕಾರ್ಯದರ್ಶಿ ಪಿ.ವಿಶ್ವನಾಥ್, ಖಜಾಂಚಿ ಶ್ರೀಶೈಲ ರಾಮಣ್ಣನವರ್, ಪ್ರಾಂಶುಪಾಲ ಡಾ. ಬಿ.ಸದಾಶಿವೇಗೌಡ, ಸಮ್ಮೇಳನದ ಅಧ್ಯಕ್ಷ ಡಾ. ಬಾಲಾಜಿರಾವ್, ಡೀನ್ ಡಾ.ಆರ್.ಜಗದೀಶ್, ಸಮ್ಮೇಳನದ ಕಾರ್ಯದರ್ಶಿ ಡಾ.ಜೆ.ಮಾದೇಗೌಡ ಸೇರಿದಂತೆ ವ್ಯಾಪಾರ ಆಡಳಿತ ವಿಭಾಗದ ಅಧ್ಯಾಪಕರು ಮತ್ತು ವಿದ್ಯಾರ್ಥಿಗಳು ಭಾಗವಹಿಸಿದ್ದರು.



ಸರ್ಕಾರಿ ಹುದ್ದೆ ಭರ್ತಿಗೆ ಸ್ಪರ್ಧಾತ್ಮಕ ಪರೀಕ್ಷೆ ಆರಂಭ

ಮೈಸೂರು ನಗರ, ಜಿಲ್ಲಾದ್ಯಂತ 9,580 ಅಭ್ಯರ್ಥಿಗಳು ಹಾಜರು



ಮೈಸೂರು,ಅ.28(ಆರ್‌ಕೆ)– ಸರ್ಕಾರದ ವಿವಿಧ ಇಲಾಖೆಗಳಲ್ಲಿ ಖಾಲಿ ಇರುವ ಹುದ್ದೆಗಳ ಭರ್ತಿಗಾಗಿ ಎರಡು ದಿನಗಳ ಸ್ಪರ್ಧಾತ್ಮಕ ಪರೀಕ್ಷೆಗಳು ಇಂದಿನಿಂದ ಆರಂಭವಾದವು.

3,646 ಮಂದಿ ಗೈರು

ಕರ್ನಾಟಕ ರಾಜ್ಯ ವಿದ್ಯುನ್ಮಾನ ಅಭಿವೃದ್ಧಿ ನಿಗಮ ನಿಯಮಿತ, ಆಹಾರ ಮತ್ತು ನಾಗರಿಕ ಸರಬರಾಜು ನಿಗಮ ನಿಯಮಿತ, ಕಾರ್ಮಿಕ ಇಲಾಖೆ ಹಾಗೂ ಎಂಎಸ್‌ಐಎಲ್‌ನಲ್ಲಿ ಖಾಲಿ ಇರುವ ಹುದ್ದೆಗಳ ನೇಮಕಾತಿಗಾಗಿ ಕರ್ನಾಟಕ ಪರೀಕ್ಷಾ ಪ್ರಾಧಿಕಾರ (ಕೆಇಎ)ವು ಇಂದು (ಅ.28) ಮತ್ತು ನಾಳೆ (ಅ.29) ರಾಜ್ಯಾದ್ಯಂತ ಸ್ಪರ್ಧಾತ್ಮಕ ಪರೀಕ್ಷೆ ನಡೆಸುತ್ತಿದೆ.

ಸೆಂಟ್ ಫಿಲೋಮಿನಾ, ವಿಭಜಿತ ಸರ್ಕಾರಿ ಪಿಯು, ಸರ್ಕಾರಿ ಪಿಯು, ಡಿ.ಬನುಮಯ್ಯ, ನಟರಾಜ, ಗೋಪಾಲಸ್ವಾಮಿ, ಶಾರದಾ ವಿಲಾಸ, ವಿಜಯ ವಿಠಲ, ಆದಿಚುಂಚನಗಿರಿ, ಮಹಾರಾಣಿ, ಸದ್ವಿದ್ಯಾ, ಮರಿಮಲ್ಲಪ್ಪ, ಮಹಾರಾಣಿ, ಮಾತೃಮಂಡಳಿ, ಮಹಾಜನ ಸೇರಿದಂತೆ ಮೈಸೂರು ನಗರದ 24 ಕೇಂದ್ರಗಳು, ನಂಜನಗೂಡಿನಲ್ಲಿ 3 ಹಾಗೂ ಹುಣಸೂರಿನಲ್ಲಿ 2 ಸೇರಿ ಜಿಲ್ಲೆಯಾದ್ಯಂತ 29 ಕೇಂದ್ರಗಳಲ್ಲಿ ಪರೀಕ್ಷೆಗಳು ನಡೆಯುತ್ತಿವೆ. ಒಟ್ಟು 13,226 ಅಭ್ಯರ್ಥಿಗಳು ನೋಂದಾಯಿಸಿಕೊಂಡಿದ್ದರಾದರೂ, ಇಂದಿನ ಸ್ಪರ್ಧಾತ್ಮಕ ಪರೀಕ್ಷೆಗೆ 8,580 ಮಂದಿ ಮಾತ್ರ ಹಾಜರಾಗಿದ್ದು, ಜಿಲ್ಲೆಯಲ್ಲಿ 3,646 ಅಭ್ಯರ್ಥಿಗಳು ಗೈರಾಗಿದ್ದರು ಎಂದು ಪರೀಕ್ಷಾ ಸಮನ್ವಯಾಧಿಕಾರಿ ಪದವಿಪೂರ್ವ ಮತ್ತು ವೃತ್ತಿ ತರಬೇತಿ ಇಲಾಖೆ ಉಪ ನಿರ್ದೇಶಕ ಮರಿಸ್ವಾಮಿ 'ಮೈಸೂರು ಮಿತ್ರ'ನಿಗೆ ತಿಳಿಸಿದ್ದಾರೆ.

ಮೊದಲ ದಿನವಾದ ಇಂದು ಬೆಳಗ್ಗೆ 10.30ರಿಂದ ಮಧ್ಯಾಹ್ನ 12.30 ಗಂಟೆವರೆಗೆ ಕಮ್ಯುನಿಕೇಷನ್, ಮಧ್ಯಾಹ್ನ 2.30 ರಿಂದ ಸಂಜೆ 4.30 ಗಂಟೆವರೆಗೆ ಜನರಲ್ ನಾಲೆಡ್ಜ್ ವಿಷಯಗಳ ಪರೀಕ್ಷೆ ನಡೆದವು. ಎಲ್ಲಾ ಪರೀಕ್ಷಾ ಕೇಂದ್ರಗಳ 200 ಮೀ. ವ್ಯಾಪ್ತಿ ಪ್ರದೇಶದಲ್ಲಿ ದಂಡ ಪ್ರಕ್ರಿಯಾ ಸಂಹಿತೆ 1973ರ ಕಲಂ 144 ರೀತ್ಯಾ ನಿಷೇಧಾಜ್ಞೆ ಜಾರಿಗೊಳಿಸಲಾಗಿದ್ದು, ಆಯಾ ಠಾಣಾ ಪೊಲೀಸರು ಬಂದೋಬಸ್ತ್ ವ್ಯವಸ್ಥೆ ಮಾಡಿದ್ದರು.

ಪರೀಕ್ಷಾ ಪಾವಿತ್ರ್ಯತೆ ಕಾಪಾಡಿಕೊಳ್ಳುವ ದೃಷ್ಟಿಯಿಂದ ಕೇಂದ್ರಗಳ ಸುತ್ತಲಿನ ಜೆರಾಕ್ಸ್ ಅಂಗಡಿ, ಬ್ರೌಸಿಂಗ್ ಸೆಂಟರ್ ಅನ್ನು ಮುಚ್ಚಿಸಲಾಗಿದೆ. ನಾಳೆ (ಅ. 29)ಯೂ ನಿಗದಿತ ವೇಳಾಪಟ್ಟಿಯಂತೆ ಸ್ಪರ್ಧಾತ್ಮಕ ಪರೀಕ್ಷೆಗಳು ನಡೆಯಲಿವೆ ಎಂದು ಡಿಡಿಪಿಯು ಮರಿಸ್ವಾಮಿ ತಿಳಿಸಿದ್ದಾರೆ.


ವೀಣಾಗೆ ಪಿಎಚ್.ಡಿ



ಮೈಸೂರು: ಡಾ.ದಯಾನಂದ ಮಾನೆ ಅವರ ಮಾರ್ಗದರ್ಶನದಲ್ಲಿ ಆರ್.ವೀಣಾ ಸಾರ್ವಜನಿಕ ಆಡಳಿತ ವಿಷಯದಲ್ಲಿ ಸಂಶೋಧನೆ ನಡೆಸಿ ಸಾದರಪಡಿಸಿದ ಮಹಾ ಪ್ರಬಂಧವನ್ನು ಮೈಸೂರು ವಿಶ್ವವಿದ್ಯಾನಿಲಯ ಪಿಎಚ್.ಡಿ ಪದವಿಗೆ ಅಂಗೀಕರಿಸಿದೆ.

ಪತಂಜಲಿ ಯೋಗ ಮಂದಿರದ ಪ್ರವೇಶೋತ್ಸವ

ಮೈಸೂರು,ಅ.28(ಎಂಟಿವೈ)– ಮೈಸೂರಿನ ಲಲಿತಾದ್ರಿಪುರ ಸಮೀಪದ ಐಪಿಎಸ್ ನಗರದಲ್ಲಿ ನೂತನವಾಗಿ ನಿರ್ಮಿಸಿರುವ ಪತಂಜಲಿ ಯೋಗ ಮಂದಿರದ ಪ್ರವೇಶೋತ್ಸವ ಹಾಗೂ ಲೋಕಾರ್ಪಣೆ ಕಾರ್ಯಕ್ರಮ ನ.1 ಮತ್ತು 2ರಂದು ನಡೆಯಲಿದೆ ಎಂದು ಪತಂಜಲಿ ಯೋಗ ಪ್ರತಿಷ್ಠಾನದ ಕಾರ್ಯದರ್ಶಿ ಕಿರಣ್ ತಿಳಿಸಿದ್ದಾರೆ.



ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ನೂತನವಾಗಿ ನಿರ್ಮಿಸಿರುವ ಮಂದಿರಕ್ಕೆ ಕರ್ನಾಟಕ ಸಂಸ್ಕೃತಿ ವಿವಿಯ ಮಾನ್ಯತೆ ದೊರೆತಿದೆ. ಕಾರ್ಯಕ್ರಮದ ಅಂಗವಾಗಿ ನ.2ರಂದು ಯೋಗ ಮಂದಿರದ ವಿವಿಧ ಶಾಖೆಗಳಲ್ಲಿನ ಯೋಗ ವಿದ್ಯಾರ್ಥಿಗಳಿಂದ ಸಾಂಸ್ಕೃತಿಕ ಕಾರ್ಯಕ್ರಮ ನಡೆಯಲಿದೆ. ಈ ವೇಳೆ ವಿವಿಧ ಕ್ಷೇತ್ರದ ಗಣ್ಯರು ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲಿದ್ದಾರೆ ಎಂದರು.

ಗೋಷ್ಠಿಯಲ್ಲಿ ಅಧ್ಯಕ್ಷ ಗೋಪಾಲಕೃಷ್ಣ, ನಾಗೇಂದ್ರ ಅರಸ್, ನಂಜುಂಡಸ್ವಾಮಿ ಇದ್ದರು.


ಜಂಬೂ ಸವಾರಿಯಲ್ಲಿ ಸಾಗಿದ ಸ್ತಬ್ಧಚಿತ್ರಗಳಿಗೆ ಬಹುಮಾನ ಘೋಷಣೆ

ಧಾರವಾಡ, ಚಿಕ್ಕಮಗಳೂರು, ಚಾ.ನಗರ ಜಿಲ್ಲೆಗಳಿಗೆ ಕ್ರಮವಾಗಿ ಮೊದಲ ಮೂರು ಬಹುಮಾನ

ವಿವಿಧ ಜಿಲ್ಲೆ, ಇಲಾಖಾ ಸ್ತಬ್ಧಚಿತ್ರಗಳಿಗೆ ಪ್ರೋತ್ಸಾಹಕ, ಉತ್ತಮ ಸ್ತಬ್ಧಚಿತ್ರ ಪುರಸ್ಕಾರ







ಮೈಸೂರು,ಅ.28(ಎಂಟಿವೈ)– ನಾಡಹಬ್ಬ ದಸರಾ ಮಹೋತ್ಸವದ ಜಂಬೂಸವಾರಿ ಮೆರವಣಿಗೆಯಲ್ಲಿ ಸಾಗಿದ 49 ಸ್ತಬ್ಧಚಿತ್ರಗಳಲ್ಲಿ ಧಾರವಾಡ, ಚಿಕ್ಕಮಗಳೂರು ಹಾಗೂ ಚಾಮರಾಜನಗರ ಜಿಲ್ಲೆಗಳ ಸ್ತಬ್ಧಚಿತ್ರಗಳು ಮೊದಲ ಮೂರು ಬಹುಮಾನ ಪಡೆದಿದ್ದರೆ, ಇತರೆ 7 ಸ್ತಬ್ಧಚಿತ್ರಗಳಿಗೆ ಪ್ರೋತ್ಸಾಹದಾಯಕ ಹಾಗೂ ಉತ್ತಮ ಸ್ತಬ್ಧಚಿತ್ರ ಬಹುಮಾನ ಪಡೆದಿವೆ.

ಪ್ರತಿವರ್ಷದಂತೆ ಈ ಬಾರಿಯೂ ಜಂಬೂ ಸವಾರಿ ಮೆರವಣಿಗೆಗೆ ಸ್ತಬ್ಧಚಿತ್ರಗಳು ಕಳೆಕಟ್ಟಿದ್ದವು. ಈ ಬಾರಿ ಸಾಗಿದ 49 ಸ್ತಬ್ಧಚಿತ್ರಗಳಲ್ಲಿ, 31 ಜಿಲ್ಲೆಗಳ 31, ಸ್ತಬ್ಧಚಿತ್ರ ಉಪ ಸಮಿತಿಯಿಂದ 2 ಹಾಗೂ ವಿವಿಧ ಇಲಾಖೆ ಹಾಗೂ ನಿಗಮ ಮಂಡಳಿಗಳಿಂದ 14 ಸ್ತಬ್ಧಚಿತ್ರಗಳು ಸಾಗಿದವು. ಅದರಲ್ಲೂ 13 ಸ್ತಬ್ಧಚಿತ್ರಗಳು ವಿವಿಧ ದೇವಾಲಯಗಳಿಗೆ ಸಂಬಂಧಿಸಿದರೆ, ಮೂರು ಸ್ತಬ್ಧಚಿತ್ರಗಳು ರಾಜ್ಯ ಸರ್ಕಾರದ ಗ್ಯಾರಂಟಿ ಸಂದೇಶ ಸಾರುತ್ತಿದ್ದವು.

ಪ್ರಥಮ ಮೂರು ಬಹುಮಾನ ಪಡೆದ ಸ್ತಬ್ಧಚಿತ್ರ: ಧಾರವಾಡ ಜಿಲ್ಲೆಯ ಸ್ತಬ್ಧಚಿತ್ರಕ್ಕೆ ಪ್ರಥಮ ಬಹುಮಾನ ನೀಡಲಾಗಿದೆ. ಧಾರವಾಡ ಪೇಡ, ಎಮ್ಮೆ ತಳಿಯ ಬಗ್ಗೆ ಮಾಹಿತಿ ಒದಗಿಸುವ ಈ ಸ್ತಬ್ಧಚಿತ್ರವನ್ನು ಆಕರ್ಷಕವಾಗಿ ವಿನ್ಯಾಸಗೊಳಿಸಲಾಗಿತ್ತು.

ಎರಡನೇ ಬಹುಮಾನ ಚಿಕ್ಕಮಗಳೂರು ಜಿಲ್ಲೆಯ ಸ್ತಬ್ಧಚಿತ್ರಕ್ಕೆ ಲಭಿಸಿದೆ. ಚಿಕ್ಕಮಗಳೂರು ಜಿಲ್ಲೆಯ ಬೆಟ್ಟದಿಂದ ಬಟ್ಟಲಿಗೆ ಶೀರ್ಷಿಕೆಯಡಿ ನಿರ್ಮಿಸಿದ್ದ ಈ ಸ್ತಬ್ಧಚಿತ್ರದಲ್ಲಿ ಮಲೆನಾಡಿನ ಸೊಬಗಿನೊಂದಿಗೆ ಅರಣ್ಯ ನಾಶದಿಂದ ಎದುರಾಗುವ ದುಷ್ಪರಿಣಾಮ ಕುರಿತ ಸಂದೇಶ ಸಾರುತ್ತಿದ್ದ ಈ ಸ್ತಬ್ಧಚಿತ್ರ ನೋಡುಗರ ಕಣ್ಮನ ಸೆಳೆಯುತ್ತಿತ್ತು.

ನೆರೆಯ ಚಾಮರಾಜನಗರ ಜಿಲ್ಲೆಯ ಸ್ತಬ್ಧಚಿತ್ರಕ್ಕೆ ಮೂರನೇ ಬಹುಮಾನ ದೊರೆತಿದೆ. ಗೊರವರ ಕುಣಿತದೊಂದಿಗೆ ಮಲೆ ಮಹಾದೇಶ್ವರ ಬೆಟ್ಟ, ಹುಲಿ ಹಾಗೂ ಆನೆಗಳ ನೆಲೆವೀಡು ಸಂದೇಶ ಸಾರುತ್ತಿತ್ತು. ಹಸಿರು ಪರ್ವತ ಹಾಗೂ ವನ್ಯಜೀವಿಗಳ ಸಂಕುಲವನ್ನು ಬಿಂಬಿಸುತ್ತಿದ್ದ ಸ್ತಬ್ಧಚಿತ್ರಕ್ಕೆ ಮೂರನೇ ಬಹುಮಾನ ಲಭಿಸಿದೆ.

ಪ್ರೋತ್ಸಾಹದಾಯಕ ಸ್ತಬ್ಧಚಿತ್ರಗಳು: ಹಾಸನ ಜಿಲ್ಲೆಯ ಹಾಸನಾಂಬೆ ದೇವಾಲಯ, ಅರಸೀಕೆರೆ ಈಶ್ವರ ದೇವಾಲಯ, ಜೇನುಕಲ್ಲು ಸಿದ್ದೇಶ್ವರ ದೇವಾಲಯದ ಸ್ತಬ್ಧಚಿತ್ರಕ್ಕೆ ಮೊದಲ ಪ್ರೋತ್ಸಾಹದಾಯಕ ಬಹುಮಾನ ದೊರೆತಿದೆ. ಮಂಡ್ಯ ಜಿಲ್ಲೆಯ ಸಾಂಪ್ರದಾಯಕ ಉದ್ಯಮ ಆಲೆಮನೆ ಸ್ತಬ್ಧಚಿತ್ರ ಎರಡನೇ ಬಹುಮಾನ ಲಭಿಸಿದೆ. ಸಕ್ಕರೆ ಕಾರ್ಖಾನೆಗೆ ಎತ್ತಿನ ಬಂಡಿಯಲ್ಲಿ ಕಬ್ಬನ್ನು ತುಂಬಿಕೊಂಡು ಹೋಗುವ ಸ್ತಬ್ಧಚಿತ್ರದಲ್ಲಿ ಆಲೆಮನೆಯಲ್ಲಿ ಕಬ್ಬನ್ನು ಗಾಣದಿಂದ ಅರೆಯುವುದು, ಪಾಕ ಉಕ್ಕಿಸುವ ಹಾಗೂ ಬೆಲ್ಲದ ಚಿತ್ರಣ ಮೂಡಿಸಿದ್ದು ವಿಶೇಷವಾಗಿತ್ತು.

ಕೊಡಗು ಜಿಲ್ಲೆಯ ಪ್ರೇಕ್ಷಣೀಯ ತಾಣಗಳ ಬಗ್ಗೆ ಮಾಹಿತಿ ನೀಡುವ ಸ್ತಬ್ಧಚಿತ್ರಕ್ಕೆ ಪ್ರೋತ್ಸಾಹದಾಯಕ ಮೂರನೇ ಬಹುಮಾನ ಲಭಿಸಿದೆ. ಇದರಲ್ಲಿ ರಾಜಾಸೀಟ್, ದುಬಾರೆ ಆನೆ ಶಿಬಿರ, ಶಾಂತಿನಾಥರ ತ್ರಿವಳಿ ಬಸದಿ ಹಾಗೂ ಇನ್ನಿತರ ತಾಣಗಳ ಬಗ್ಗೆ ಮಾಹಿತಿ ನೀಡುವ ಮೂಲಕ ಎಲ್ಲರ ಗಮನ ಸೆಳೆದಿತ್ತು.

ವಿವಿಧ ಇಲಾಖೆಗಳ ಸ್ತಬ್ಧಚಿತ್ರ: ಜಂಬೂಸವಾರಿ ಮೆರವಣಿಗೆಯಲ್ಲಿ ಸಾಗಿದ ವಿವಿಧ ಇಲಾಖೆ ಹಾಗೂ ನಿಗಮ ಮಂಡಳಿಗಳ 14 ಸ್ತಬ್ಧಚಿತ್ರಗಳಲ್ಲಿ ವಿವಿಧ ಇಲಾಖೆ 3 ಹಾಗೂ ನಿಗಮ ಮಂಡಳಿಯ ಒಂದು ಸ್ತಬ್ಧಚಿತ್ರಕ್ಕೆ ಉತ್ತಮ ಸ್ತಬ್ಧಚಿತ್ರ ಬಹುಮಾನ ನೀಡಲಾಗಿದೆ.

ಪ್ರವಾಸೋದ್ಯಮ ಇಲಾಖೆಯ ಬ್ರಹ್ಮಜಿನಾಲಯ ಲಕ್ಕುಂಡಿ ಸ್ತಬ್ಧಚಿತ್ರಕ್ಕೆ ಮೊದಲ ಉತ್ತಮ ಸ್ತಬ್ಧಚಿತ್ರ ಪ್ರಶಸ್ತಿ,ಕಾವೇರಿ ನೀರಾವರಿ ನಿಗಮದ ಸ್ತಬ್ಧಚಿತ್ರಕ್ಕೆ 2ನೇ ಪ್ರಶಸ್ತಿ, ಸರ್ಕಾರದ ಐದು ಗ್ಯಾರಂಟಿ ಬಿಂಬಿಸುತ್ತಿದ್ದ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಸ್ತಬ್ಧಚಿತ್ರಕ್ಕೆ 3ನೇ ಪ್ರಶಸ್ತಿ ಲಭಿಸಿದೆ. ಕರ್ನಾಟಕ ಸಹಕಾರಿ ಹಾಗೂ ಹಾಲು ಉತ್ಪಾದಕರ ಮಹಾಮಂಡಲದ ಸ್ತಬ್ಧಚಿತ್ರಕ್ಕೆ ಪ್ರೋತ್ಸಾಹದಾಯಕ ಸ್ತಬ್ಧಚಿತ್ರ ಬಹುಮಾನ ನೀಡಲಾಗಿದೆ.

ಎಲ್ಲಾ ಸ್ತಬ್ಧಚಿತ್ರಗಳು ಉತ್ತಮ ಸಂದೇಶ ಸಾರುತ್ತಿದ್ದವು

"ಜಂಬೂಸವಾರಿ ಮೆರವಣಿಗೆಯಲ್ಲಿ ಸಾಗಿದ 49 ಸ್ತಬ್ಧಚಿತ್ರಗಳಲ್ಲಿ ಅತ್ಯುತ್ತಮವಾಗಿ ರೂಪಿಸಲಾಗಿತ್ತು. ಜಂಬೂಸವಾರಿಗೂ ಎರಡು ದಿನ ಮೊದಲೇ ಎಲ್ಲಾ ಸ್ತಬ್ಧಚಿತ್ರಗಳು ಸಿದ್ಧಗೊಂಡಿದ್ದು. ನಾಡಿನ ಸಂಸ್ಕೃತಿ, ಕಲೆಯೊಂದಿಗೆ ಆಯಾ ಜಿಲ್ಲೆಗಳ ವಿಶೇಷತೆಯನ್ನು ಬಿಂಬಿಸುವ ಸ್ತಬ್ಧಚಿತ್ರಗಳನ್ನು ನಿರ್ಮಿಸಲಾಗಿತ್ತು. ಮೆರವಣಿಗೆಯುದ್ದಕ್ಕೂ ಸೇರಿದ್ದ ಅಪಾರ ಸಂಖ್ಯೆಯ ಜನ ಸ್ತಬ್ಧಚಿತ್ರಗಳ ಕಲಾತ್ಮಕತೆಗೆ ಮಾರು ಹೋಗಿದ್ದರು. ಎಲ್ಲಾ ಸದಸ್ಯರ ಸಹಕಾರದಿಂದ ಉತ್ತಮ ಸ್ತಬ್ಧಚಿತ್ರವನ್ನು ನಿರ್ಮಿಸಲಾಗಿತ್ತು.

– ಅಹಿಂದ ಜವರಪ್ಪ, ಸ್ತಬ್ಧಚಿತ್ರ ಉಪ ಸಮಿತಿ ಅಧ್ಯಕ್ಷ







ಮೈಸೂರು ಮಿತ್ರ ಭಾನುವಾರ 29 ಅಕ್ಟೋಬರ್ 2023

ಸರ್ಕಾರ ಉರುಳಿಸಲು ಶಾಸಕರಿಗೆ ಬಿಜೆಪಿ ಆಫರ್ ವಿಚಾರ

ಹೆಚ್‌ಡಿಕೆ, ಸಿಪಿವೈ, ಜಾರಕಿಹೊಳಿ, ಸಂತೋಷ್ ವಿರುದ್ಧ ಕೈ ಶಾಸಕರ ಆರೋಪ

ಮಂಡ್ಯ, ಅ.28– ರಾಜ್ಯ ಕಾಂಗ್ರೆಸ್ ಸರ್ಕಾರ ಉರುಳಿಸಲು ಆಡಳಿತರೂಢ ಪಕ್ಷದ ಶಾಸಕರಿಗೆ ಜೆಡಿಎಸ್, ಬಿಜೆಪಿ ಆಫರ್‌ಗಳನ್ನು ನೀಡುತ್ತಿದೆ ಎಂಬ ಆರೋಪಕ್ಕೆ ಸಂಬಂಧಿಸಿದಂತೆ ಶಾಸಕರಾದ ಗಣಿಗ ರವಿಕುಮಾರ್, ಕೆ.ಎಂ.ಉದಯ್‌ಗೌಡ ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ವಿರುದ್ಧ ಹಲವು ಆರೋಪ ಮಾಡಿದ್ದು, ಅಲ್ಲದೇ ಹಳೇ ಮೈಸೂರು ಭಾಗದ ಓರ್ವ ವಿಧಾನಪರಿಷತ್ ಸದಸ್ಯ, ಬೆಳಗಾವಿ ಭಾಗದ ಮಾಜಿ ಸಚಿವ ಹಾಗೂ ಮಾಜಿ ಸಿಎಂ ಬಿಎಸ್‌ವೈ ಸಂಬಂಧಿ ಸಂತೋಷ್ ಆಮಿಷವೊಡ್ಡುತ್ತಿದ್ದಾರೆ ಎಂದು ಗಣಿಗ ರವಿಕುಮಾರ್, ಎಂಎಲ್‌ಸಿ ಸಿ.ಪಿ.ಯೋಗೇಶ್ವರ್ ಹಾಗೂ ಮಾಜಿ ಸಚಿವ ರಮೇಶ್ ಜಾರಕಿಹೊಳಿ ವಿರುದ್ಧ ಸರ್ಕಾರ ಕೆಡವಲು ಹುನ್ನಾರ ಮಾಡುತ್ತಿದ್ದಾರೆ ಎಂದು ಪರೋಕ್ಷವಾಗಿ ಆರೋಪ ಮಾಡಿದ್ದಾರೆ.

ಸರ್ಕಾರ ಉರುಳಿಸುವ ತಾಕತ್ತು ಕುಮಾರಸ್ವಾಮಿಗೆ ಇಲ್ಲ

ಮಂಡ್ಯ ಅ.28– ರಾಜ್ಯ ಕಾಂಗ್ರೆಸ್ ಸರ್ಕಾರ ಉರುಳಿಸುವ ತಾಕತ್ತು ಮಾಜಿ ಸಿಎಂ ಕುಮಾರಸ್ವಾಮಿ ಅವರಿಗಿಲ್ಲ ಎಂದು ಶಾಸಕ ಕೆ.ಎಂ.ಉದಯ್‌ಗೌಡ ಕಿಡಿಕಾರಿದರು.



ಶನಿವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕುಮಾರಸ್ವಾಮಿ ಅವರ ಸರ್ಕಾರವನ್ನೇ ಉಳಿಸಿಕೊಳ್ಳಲು ಆಗಲಿಲ್ಲ. ಮತ್ತೊಂದು ಸರ್ಕಾರ ಕೆಡವಲು ಸಾಧ್ಯನಾ? ಯಾರಿಗೂ ಕೆಟ್ಟದು ಬಯಸಬಾರದು. ಕುಮಾರಸ್ವಾಮಿ ಕುಟುಂಬದ ಸಾಧನೆ ರಾಜ್ಯಕ್ಕೆ ಏನೂ ಇಲ್ಲ. ರೈತರ ಮಕ್ಕಳೆಂದು ಹೇಳಿಕೊಂಡು ಮಂಕುಬೂದಿ ಎರಚಿ ಎಲ್ಲರನ್ನು ಬೀದಿಪಾಲು ಮಾಡಿದ್ದಾರೆ. ಅವರ ತಂದೆ ಪ್ರಧಾನಿಯಾಗಿದ್ದರು. ಕುಮಾರಸ್ವಾಮಿ ಮುಖ್ಯಮಂತ್ರಿಯಾಗಿದ್ದರು. ಆದರೂ ಏಕೆ ಕಾವೇರಿ ಸಮಸ್ಯೆ ಬಗೆಹರಿಸಲು ಆಗಲಿಲ್ಲ ಎಂದು ಪ್ರಶ್ನಿಸಿದರು.

ಜನರೇನು ದಡ್ಡರಲ್ಲ. ಈಗ ಪಾಠ ಕಲಿಸಿದ್ದಾರೆ. ಮುಂದೆಯೂ ಅವರಿಗೆ ತಕ್ಕ ಪಾಠ ಕಲಿಸುತ್ತಾರೆ. ನನ್ನ ಬಗ್ಗೆ ಸದನದಲ್ಲಿ ಮಾತನಾಡಿದ್ದಕ್ಕೆ ನಾನು ಇಂದು ಶಾಸಕನಾಗಿದ್ದೇನೆ. ಅವರು ಸರ್ಕಾರ ಕಳೆದುಕೊಂಡಿದ್ದಾರೆ. ಮುಂದಿನ ಜನ್ಮ ಇದ್ದರೇ ಹೆಚ್ಡಿಕೆ ಮತ್ತೆ ಸಿಎಂ ಆಗುತ್ತಾರಾ ನೋಡೋಣ ಎಂದು ವ್ಯಂಗ್ಯವಾಡಿದರು.

ಸರ್ಕಾರ ಬೀಳಿಸಲು ಕಾಂಗ್ರೆಸ್ ಶಾಸಕರಿಗೆ 50 ಕೋಟಿ ಆಫರ್ ವಿಚಾರದ ಬಗ್ಗೆ ಪ್ರತಿಕ್ರಿಯಿಸಿ, ಸರ್ಕಾರ ತೆಗೆತೀವಿ ಅನ್ನುವುದು ತಿರುಕನ ಕನಸು. 136 ಜನ ಕಾಂಗ್ರೆಸ್ ಶಾಸಕರಿದ್ದಾರೆ. ಸ್ವತಂತ್ರ ಸರ್ಕಾರ ಇದೆ. ಹೀಗಿರುವಾಗ ಸರ್ಕಾರ ಬೀಳಿಸುವುದು ಅಸಾಧ್ಯದ ಮಾತು ಎಂದರು.

ಈ ಹಿಂದೆ ಮೈತ್ರಿ ಸರ್ಕಾರ ಬೀಳಿಸಲು ನಿಮ್ಮ ಶ್ರಮವಿತ್ತು ಎಂಬ ಪ್ರಶ್ನೆಗೆ ಉತ್ತರಿಸಿ, ಅದೆಲ್ಲಾ ಮುಗಿದ ಅಧ್ಯಾಯ. ಹಿಂದೆ ಇದ್ದ ಸರ್ಕಾರಕ್ಕೆ ಬಹುಮತ ಇರಲಿಲ್ಲ. ಇಂದಿನ ಸರ್ಕಾರಕ್ಕೆ ಜನರೇ ಬಹುಮತ ಕೊಟ್ಟಿದ್ದಾರೆ. ಹೆಚ್ಡಿಕೆಗೆ ಮಾಡಿದ ತಪ್ಪು. ಅವರು ನಡೆದುಕೊಂಡ ರೀತಿಯಿಂದ ಸರ್ಕಾರ ಕಳೆದುಕೊಂಡರು. ಇವತ್ತು ಈ ಸರ್ಕಾರ ಬಲಿಷ್ಠವಾಗಿದ್ದು, ಯಾರೂ ಅಲ್ಲಾಡಿಸಲು ಆಗಲ್ಲ. ಕೆಲ ನಿರುದ್ಯೋಗಿಗಳು ಟೈಂಪಾಸ್‌ಗೆ ಸರ್ಕಾರ ತೆಗಿತೀವಿ ಅಂತ ಹೇಳಿದ್ದಾರೆ ಎಂದು ತಿಳಿಸಿದರು.

ಆಪರೇಷನ್ ಕಮಲಕ್ಕೆ ಸಹಕಾರ ಕೋರಲು ನನ್ನನ್ನು ಯಾರೂ ಸಂಪರ್ಕ ಮಾಡಿಲ್ಲ. 50 ಕೋಟಿ ಕೊಟ್ಟರೆ ಹೊತ್ತುಕೊಂಡು ಹೋಗಲು ಆಗುತ್ತಾ. 50 ಕೋಟಿ ಕೊಡುತ್ತೇನೆ ಎನ್ನುವುದು ಗಾಳಿ ಸುದ್ದಿ. ಯಾರೋ ಕೆಲಸ ಇಲ್ಲದವರು ಕ್ರಿಯೇಟ್ ಮಾಡಿದ್ದಾರೆ. ಅದನ್ನು ನಿಜ ಎಂದು ರವಿಕುಮಾರ್ ನಿಮ್ಮ ಮುಂದೆ ಹೇಳಿದ್ದಾರೆ ಎಂದರು.

ಡಿಕೆಶಿ ಸಿಎಂ ಆಗುತ್ತಾರೆ: ಡಿ.ಕೆ.ಶಿವಕುಮಾರ್ ಸಿಎಂ ಆಗುವುದರಲ್ಲಿ ಯಾವುದೇ ಅನುಮಾನ ಇಲ್ಲ. ನೂರಕ್ಕೆ ನೂರರಷ್ಟು ಡಿಕೆಶಿ ಸಿಎಂ ಆಗುತ್ತಾರೆ. ಡಿಕೆಶಿ ಕಷ್ಟಪಟ್ಟು ಪಕ್ಷ ಕಟ್ಟಿದ್ದಾರೆ. ಅವರಿಗೂ ಅವಕಾಶ ಇದೆ. ಸಿಎಂ ಆಗುತ್ತಾರೆ. ಯಾವಾಗ ಸಿಎಂ ಮಾಡಬೇಕೆಂಬುದನ್ನು ವರಿಷ್ಠರು ತೀರ್ಮಾನಿಸುತ್ತಾರೆ. ಹೈಕಮಾಂಡ್ ಬಗ್ಗೆ ಮಾತನಾಡುವಷ್ಟು ದೊಡ್ಡವನಲ್ಲ ಎಂದರು.

ಮೈತ್ರಿ ಅಸಮಾಧಾನ ಮರೆಮಾಚಲು ಆಪರೇಷನ್ ಕಮಲ

ಮಂಡ್ಯ, ಅ.28– ಬಿಜೆಪಿ, ಜೆಡಿಎಸ್ ಮೈತ್ರಿಯಿಂದ ಎರಡೂ ಪಕ್ಷದ ಶಾಸಕರಿಗೆ ಸಮಾಧಾನ ತಂದಿಲ್ಲ. ಈ ನಿಟ್ಟಿನಲ್ಲಿ ಈ ಗೊಂದಲ ಸೃಷ್ಟಿಸಲು ಬಿಜೆಪಿಯವರು ಆಪರೇಷನ್ ಕಮಲದ ಸುದ್ದಿ ಹರಡುತ್ತಿದ್ದಾರೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ ಆರೋಪಿಸಿದರು.



ಶನಿವಾರ ನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಬಿಜೆಪಿ ಮುಖಂಡರೇ ಆಪರೇಷನ್ ಕಮಲ ಮಾಡುತ್ತೇವೆ ಎಂದು ಪುಕಾರು ಹಬ್ಬಿಸುತ್ತಿದ್ದು, ಈ ಬಗ್ಗೆ ನಮ್ಮ ಪಕ್ಷದ ಕೆಲ ಶಾಸಕರು ತವಗಿರುವ ಮಾಹಿತಿ ಹಂಚಿಕೊಂಡಿದ್ದಾರೆ. ಈ ಬಗ್ಗೆ ನನಗೆ ಮಾಹಿತಿ ಇಲ್ಲ. ಗಣಿಗ ರವಿಕುಮಾರ್ ಬಳಿ ಮಾಹಿತಿ ಇದೆ. ಅವರನ್ನೇ ಕೇಳಿ ಎಂದರು.

ಐಟಿ ದಾಳಿ ಮರೆಮಾಚಲು ಸರ್ಕಾರ ಹುಲಿ ಉಗುರು ಮುನ್ನೆಲೆಗೆ ತಂದಿದೆ ಎಂಬ ಬಿಜೆಪಿ ಆರೋಪಕ್ಕೆ ಪ್ರತಿಕ್ರಿಯಿಸಿ, ನಮಗೆ ಮಾಡಲು ಸಾಕಷ್ಟು ಕೆಲಸ ಇದೆ. ಜನರ ಸಮಸ್ಯೆಗೆ ಸ್ಪಂದಿಸಬೇಕು. ಚುನಾವಣೆ ಗೋಸ್ಕರ ಬಿಜೆಪಿ ಅವರು ಚರ್ಚೆ ಮಾಡುತ್ತಾರೆ. ಅಭಿವೃದ್ಧಿ ಮಾಡುತ್ತಿದ್ದೇವೆ. ಬರಗಾಲ, ಕಾವೇರಿ ಸಮಸ್ಯೆಯನ್ನು ಸೂಕ್ಷ್ಮವಾಗಿ ಎದುರಿಸುತ್ತಿದ್ದೇವೆ. ಇದನ್ನು ನೋಡಿ ಬಿಜೆಪಿ ಅವರಿಗೆ ಸುಮ್ಮನೆ ಇರಲು ಆಗುತ್ತಿಲ್ಲ ಎಂದರು.

ಕಾಂಗ್ರೆಸ್‌ನಲ್ಲಿ ಡಿನ್ನರ್ ಪಾಲಿಟಿಕ್ಸ್ ವಿಚಾರದ ಬಗ್ಗೆ ಮಾತನಾಡಿ, ಈ ವಿಚಾರದ ಬಗ್ಗೆ ನನಗೆ ಗೊತ್ತಿಲ್ಲ. ರಾಜಕೀಯ ಚರ್ಚೆ ನಾನು ಮಾಡಲ್ಲ. ಅಭಿವೃದ್ಧಿ ಬಗ್ಗೆ ಮಾತನಾಡುತ್ತೇನೆ. ಹೈಕಮಾಂಡ್ ಇದೆ. ಶಾಸಕಾಂಗ ಸಭೆ ಇದೆ ಅಲ್ಲಿ ತೀರ್ಮಾನ ಮಾಡುತ್ತಾರೆ. ವಿರೋಧ ಪಕ್ಷದ ಜೊತೆ ಸೇರಿ ಮಾಧ್ಯಮದವರು ಕಾಂಗ್ರೆಸ್ ವಿರುದ್ಧ ಅಪ್ರಚಾರ ಮಾಡುತ್ತಿದ್ದಾರೆ ಎಂದು ದೂರಿದರು.

ಸಿದ್ದು 5 ವರ್ಷ ಸಿಎಂ ಆಗಿರುತ್ತಾರೆ ಎಂಬ ಮಹದೇವಪ್ಪ ಹೇಳಿಕೆ ವಿಚಾರದ ಬಗ್ಗೆ ಮಾತನಾಡಿ, ನಮ್ಮಲ್ಲಿ ಮುಖ್ಯಮಂತ್ರಿ ಆಗಲು ಅರ್ಹತೆ ಇರುವವರು 50 ಜನ ಇದ್ದಾರೆ. ಸಮಯ ಬಂದಾಗ ಹೈಕಮಾಂಡ್ ತೀರ್ಮಾನ ಮಾಡಲಿದೆ. ಈಗ ಸಿಎಂ ಸೀಟ್ ಖಾಲಿ ಇಲ್ಲ. ಮಹದೇವಪ್ಪ ಅವರ ಹೇಳಿಕೆ ಬಗ್ಗೆ ಅವರನ್ನೇ ಕೇಳಬೇಕು. ಸಿದ್ದರಾಮಯ್ಯ, ಡಿಕೆಶಿ ನಡುವೆ ಯಾವುದೇ ಭಿನ್ನಾಭಿಪ್ರಾಯ ಇಲ್ಲ. ಅವರು ಗಂಭೀರವಾಗಿ ಕೆಲಸ ಮಾಡುತ್ತಿದ್ದಾರೆ. ನಾವುಗಳು ಮಾತನಾಡಿ ಪ್ರಯೋಜನ ಇಲ್ಲ ಎಂದರು.

ಚಲುವರಾಯಸ್ವಾಮಿ ವಿರುದ್ಧ ಇಡಿ ದಾಳಿಗೆ ಷಡ್ಯಂತ್ರ ವಿಚಾರದ ಬಗ್ಗೆ ಪ್ರತಿಕ್ರಿಯಿಸಿ, 2 ತಿಂಗಳ ಹಿಂದೆಯೇ ಇಡಿಗೆ ನನ್ನ ವಿರುದ್ಧ ಮೂಗರ್ಜಿಗಳು ಹೋಗಿರುವ ಮಾಹಿತಿ ಇದೆ. ಮೈತ್ರಿ ಆದವರ ಹೊಂದಾಣಿಕೆ ಚೆನ್ನಾಗಿರಲೇಬೇಕು. ಅವರು ಏನು ಬೇಕಾದರೂ ಮಾಡಲಿ ಎಂದರು.

ಶಾಸಕರನ್ನು ಸೆಳೆಯುತ್ತಿರುವ ಬಗ್ಗೆ ನನ್ನ ಬಳಿ ಸಾಕ್ಷಿ ಇದೆ

ಮಂಡ್ಯ: ರಾಜ್ಯದಲ್ಲಿ ಆಪರೇಷನ್ ಕಮಲ ಮಾಡಲು ಒಂದು ತಂಡ ಈಗಾಗಲೇ ಸಕ್ರಿಯವಾಗಿದ್ದು, ಕಾಂಗ್ರೆಸ್ ಶಾಸಕರನ್ನು ಸೆಳೆಯಲು ಪ್ರಯತ್ನಿಸುತ್ತಿರುವುದಕ್ಕೆ ನನ್ನ ಬಳಿ ಸಾಕ್ಷಿ ಇದೆ. ಈ ತಂಡದಲ್ಲಿ ಕೇವಲ ಮೂವರು ಅಲ್ಲ. ಇನ್ನೂ ದೊಡ್ಡ ದೊಡ್ಡ ನಾಯಕರು ಇದ್ದಾರೆ ಎಂದು ಡಿಸಿಎಂ ಡಿಕೆಶಿ ಅವರೇ ಹೇಳಿದ್ದು, ನನ್ನ ಬಳಿ ಇರುವ ಮಾಹಿತಿಯನ್ನು ಸಿಎಂ, ಡಿಸಿಎಂಗೆ ನೀಡುತ್ತೇನೆ. ಅವರ ಬಳಿ ಇರುವ ಮಾಹಿತಿ ತೆಗೆದುಕೊಂಡು ಮಾಧ್ಯಮದ ಮುಂದೆ ಶೀಘ್ರ ಬರುವೆ ಎಂದು ಶಾಸಕ ಗಣಿಗ ರವಿಕುಮಾರ್ ಹೇಳಿದರು.



ನಗರದಲ್ಲಿ ಶನಿವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ನನಗೆ ಆಫರ್ ನೀಡಲು ಬಂದಿದ್ದರೆ ಲೈವ್ ಮಾಡಿ ತೋರಿಸುತ್ತಿದ್ದೆ. ಸಂತೋಷ್ ಪಕ್ಷಕ್ಕೆ ಕರೆದಿರುವುದು ಬೇರೆ ವಿಚಾರ ಎಂದು ಹೇಳಿದ್ದಾರೆ. ಪಕ್ಷಕ್ಕೆ ಕರೆದಿರುವುದು ನಿಜ ಎಂದು ಅವರೇ ಒಪ್ಪಿಕೊಂಡಿದ್ದಾರೆ. ನಮ್ಮ ಪಕ್ಷದ ಶಾಸಕರ ಬಳಿ ಮಾತನಾಡಿ 50 ಕೋಟಿ ಆಫರ್ ಕೊಟ್ಟಿದ್ದಾರೆ. ಬಿಜೆಪಿಗೆ ಬಂದರೆ ಮಂತ್ರಿಗಿರಿ ಕೊಡುತ್ತೇವೆ ಎಂದು ಹೇಳಿದ್ದಾರೆ. ಹಳೆ ಮೈಸೂರು ಭಾಗದ ಎಂಎಲ್‌ಸಿ ಸಿ.ಪಿ.ಯೋಗೇಶ್ವರ್, ಬೆಳಗಾವಿಯ ಮಾಜಿ ಸಚಿವ ರಮೇಶ್ ಜಾರಕಿಹೊಳಿ ಹಾಗೂ ಸಂತೋಷ್ ಗೋಲ್ಡ್ ಫಿಂಚ್ ಹೋಟೆಲ್‌ನಲ್ಲಿ ನಮ್ಮ ಶಾಸಕರನ್ನು ಭೇಟಿ ಮಾಡಿದ್ದಾರೆ ಎಂದು ಸ್ಪಷ್ಟಪಡಿಸಿದರು.

2 ದಿನದ ಬಳಿಕ ನಾನು ಈ ವಿಚಾರದ ಬಗ್ಗೆ ಸಿಎಂ, ಡಿಸಿಎಂ ಜೊತೆ ಮಾತನಾಡಿ, ಮಾಧ್ಯಮಗಳ ಮುಂದೆ ಬರುವೆ. ಎಲ್ಲಿ ಏನು ಮಾತನಾಡಿದ್ದಾರೆ ಎಂಬ ಸಾಕ್ಷಿಯನ್ನು ಅತೀ ಶೀಘ್ರ ಬಿಡುತ್ತೇವೆ. ಕರ್ನಾಟಕದ ಎಲ್ಲಾ ಕಡೆ ಬಲೆ ಹಾಕಲು ಹೊರಟಿದ್ದಾರೆ. ಸದ್ಯಕ್ಕೆ ಐವರು ಶಾಸಕರಿಗೆ ಆಫರ್ ಬಂದಿದೆ. ಒಬ್ಬರ ಮುಂದೆ ಕೂತು ಇನ್ನೊಬ್ಬರಿಗೆ ಸ್ಪೀಕರ್ ಹಾಕಿ ಮಾತಾಡಿದ್ದಾರೆ. ಯಾರಿಗೆ ಆಫರ್ ಕೊಟ್ಟಿದ್ದಾರೆ. ಆ ಶಾಸಕರ ಜೊತೆ ಮಾಧ್ಯಮದ ಮುಂದೆ ಬರುತ್ತೇವೆ. ಬಿಜೆಪಿ ಗಾಳಕ್ಕೆ 50 ಅಲ್ಲ 100 ಕೋಟಿ ಕೊಟ್ಟರೂ ಕಾಂಗ್ರೆಸ್ ಶಾಸಕರು ಬೀಳಲ್ಲ ಎಂದು ತಿಳಿಸಿದರು.

ಉತ್ತಮ ಸಮಾಜ ನಿರ್ಮಾಣಕ್ಕೆ ಸಾಧಕರ ಜಯಂತಿ ಅವಶ್ಯಕ

ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ

ಮಂಡ್ಯ: ಸಾರ್ವಜನಿಕರು ಉತ್ತಮ ಚಿಂತನೆಗಳೊಂದಿಗೆ ಸಮಾಜ ರೂಪಿಸಲು ಸಾಧಕರ ಜಯಂತಿ ಆಚರಣೆ ಸಹಕರಿಸುತ್ತದೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ ತಿಳಿಸಿದರು.



ಶನಿವಾರ ಜಿಲ್ಲಾಡಳಿತ, ಜಿಪಂ, ಸಮಾಜ ಕಲ್ಯಾಣ ಇಲಾಖೆ, ನಗರಸಭೆ ಹಾಗೂ ಕನ್ನಡ ಮತು ಸಂಸ್ಕೃತಿ ಇಲಾಖೆ ಸಂಯುಕ್ತಾಶ್ರಯದಲ್ಲಿ ಜಿಪಂ ಕಾವೇರಿ ಸಭಾಂಗಣದಲ್ಲಿ ಶ್ರೀಮಹರ್ಷಿ ವಾಲ್ಮೀಕಿ ಜಯಂತಿ ಉದ್ಘಾಟಿಸಿ, ವಾಲ್ಮೀಕಿ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ ಅವರು ಮಾತನಾಡಿದರು.

ಮಹರ್ಷಿ ವಾಲ್ಮೀಕಿ ರಚಿಸಿದ ರಾಮಾಯಣ ಸಾರ್ವಕಾಲಿಕವಾದುದು. ಅದನ್ನು ನಮ್ಮ ದೇಶ ಮಾತ್ರವಲ್ಲ ಜಗತ್ತಿನ ಅನೇಕ ರಾಷ್ಟ್ರಗಳು ಒಪ್ಪಿವೆ. ಈ ಮಹಾಕಾವ್ಯ ಜಗತ್ತಿನಲ್ಲಿ ಮಾನವೀಯತೆ, ಧರ್ಮ, ಸಂಸ್ಕಾರ ನೆಲೆಸಲು ಕಾರಣವಾಗಿದೆ. ಇಂದು ಬಹುತೇಕರಿಗೆ ಹಿರಿಯರು, ಗುರುಗಳು ಎನ್ನುವ ಭಾವನೆ ಕಡಿಮೆ ಆಗುತ್ತಿದೆ. ಮಾನವೀಯ ಮೌಲ್ಯಗಳು ಕುಸಿಯುತ್ತಿವೆ. ನಾನು ನನ್ನದು ಎನ್ನುವ ಸಂಕುಚಿತ ಭಾವ ಹೆಚ್ಚುತ್ತಿದೆ ಎಂದು ಆತಂಕ ವ್ಯಕ್ತಪಡಿಸಿದರು.

ಕರ್ನಾಟಕ ರಾಜ್ಯ ಗಂಗಾಮತ ನೌಕರರ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ಟಿ.ಕೃಷ್ಣಯ್ಯ ಮಾತನಾಡಿ, ಮಹರ್ಷಿ ವಾಲ್ಮೀಕಿ ರಚಿಸಿದ ರಾಮಾಯಣ ವಿಶ್ವ ವಿಖ್ಯಾತವಾಗಿ ಅವರನ್ನು ಋಷಿ ಕವಿ, ಕವಿ ಕೋಗಿಲೆ, ಆದಿ ಕವಿ ಹಾಗೂ ಮುಂತಾದ ಹೆಸರಿನಲ್ಲಿ ಕರೆಯಲಾಗುತ್ತದೆ ಎಂದರು.

ಮಹರ್ಷಿ ವಾಲ್ಮೀಕಿ ಅವರನ್ನು ಮೊದಲು ರತ್ನಾಕರ ಎಂಬ ಹೆಸರಿನಲ್ಲಿ ಕರೆಯಲಾಗುತ್ತಿತ್ತು. ಬಳಿಕ ನಾರದ ಮುನಿಗಳ ಮಾರ್ಗದರ್ಶನದಲ್ಲಿ ಧ್ಯಾನದಲ್ಲಿ ತೊಡಗಿ ರಾಮಾಯಣ ರಚಿಸಿದರು. ಪರಿವರ್ತನೆಯಿಂದ ಜನರು ಎಂಥ ದೊಡ್ಡ ಸಾಧನೆ ಮಾಡಬಹುದು ಎಂಬುದನ್ನು ತೋರಿಸಿದರು ಎಂದರು.

ಇದೇ ವೇಳೆ ಎಸ್‌ಎಸ್‌ಎಲ್‌ಸಿ ಹಾಗೂ ಪಿಯುಸಿಯಲ್ಲಿ ಅತೀ ಹೆಚ್ಚು ಅಂಕ ಪಡೆದ ಸಮುದಾಯದ 12 ಪ್ರತಿಭಾವಂತ ವಿದ್ಯಾರ್ಥಿಗಳನ್ನು ಸನ್ಮಾನಿಸಲಾಯಿತು. ಸಮಾಜ ಸೇವಕರಾದ ಆರ್.ಜಗದೀಶ್, ಅರ್ಕೇಶ, ಸೋಮಶೇಖರ್ ಅವರನ್ನು ಸನ್ಮಾನಿಸಲಾಯಿತು.

ಈ ವೇಳೆ ಶಾಸಕ ಪಿ.ರವಿಕುಮಾರ್ ಮಾತನಾಡಿದರು. ಜಿಲ್ಲಾಧಿಕಾರಿ ಡಾ.ಕುಮಾರ್, ಎಸ್ಪಿ ಎನ್.ಯತೀಶ್, ಅಪರ ಜಿಲ್ಲಾಧಿಕಾರಿ ಡಾ.ಹೆಚ್.ಎಲ್.ನಾಗರಾಜು, ಎಸಿ ಶಿವಮೂರ್ತಿ, ಜಿಪಂ ಉಪ ಕಾರ್ಯದರ್ಶಿ ಎಂ.ಬಾಬು, ಜಿಲ್ಲಾ ಸಮಾಜ ಕಲ್ಯಾಣಾಧಿಕಾರಿ ಡಾ.ಸಿದ್ದಲಿಂಗೇಶ್, ಜಿಲ್ಲಾ ವಾಲ್ಮೀಕಿ ನಾಯಕ ಸಂಘದ ಅಧ್ಯಕ್ಷ ಚಂದ್ರನಾಯಕ, ಉಪಾಧ್ಯಕ್ಷ ಪುಟ್ಟಸ್ವಾಮಿ ನಾಯಕ, ಮುಖಂಡರಾದ ವೆಂಕಟೇಶ್, ಕುಮಾರ್ ಇತರರಿದ್ದರು.

ಕೆ.ಆರ್.ಪೇಟೆಯಲ್ಲಿ ಮಹರ್ಷಿ ವಾಲ್ಮೀಕಿ ಜಯಂತಿ

ಕೆ.ಆರ್.ಪೇಟೆ: ತಾಲೂಕು ಆಡಳಿತ, ಸಮಾಜ ಕಲ್ಯಾಣ ಇಲಾಖೆ, ಪುರಸಭೆ, ತಾಪಂ ಹಾಗೂ ತಾಲೂಕು ನಾಯಕರ ಸಂಘದಿಂದ ಪಟ್ಟಣದ ಶತಮಾನದ ಶಾಲೆ ಆವರಣದಲ್ಲಿ ವಾಲ್ಮೀಕಿ ಜಯಂತಿ ಆಚರಿಸಲಾಯಿತು.



ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಶಾಸಕ ಹೆಚ್.ಟಿ.ಮಂಜು, ಮಹರ್ಷಿ ವಾಲ್ಮೀಕಿ ಅವರನ್ನು ಒಂದು ಜಾತಿಗೆ ಸೀಮಿತಗೊಳಿಸಬಾರದು. ಇಂತಹ ಮಹನೀಯರು ಎಲ್ಲಾ ವರ್ಗದ ಆಸ್ತಿ ವಾಲ್ಮೀಕಿ ಬರೆದ ರಾಮಾಯಣ 24 ಸಾವಿರ ಶ್ಲೋಕಗಳನ್ನು ಒಳಗೊಂಡಿದೆ. ವಾಲ್ಮೀಕಿ ರಾಮಾಯಣದ ಆಧಾರದ ಮೇಲೆ ವಿವಿಧ ಭಾಷೆಗಳಲ್ಲಿ ಕಾವ್ಯ, ನಾಟಕ, ಕಾದಂಬರಿ ಮತ್ತು ಕತೆಗಳನ್ನು ಅನೇಕರು ರಚಿಸಿದ್ದಾರೆ. ಆದರೂ ಇಂದಿಗೂ ಸಹ ವಾಲ್ಮೀಕಿ ರಾಮಾಯಣ ಮಹಾಕಾವ್ಯ ಜಗತ್ತಿನಲ್ಲಿ ಸತ್ವಯುತ ಹಾಗೂ ಮೌಲ್ಯಯುತ ಸಾಹಿತ್ಯ ಸೃಷ್ಟಿಗೆ ಪ್ರೇರಣೆಯಾಗಿದೆ ಎಂದರು.

ಮೈಸೂರು ಮಾನಸ ಗಂಗೋತ್ರಿ ಪ್ರಾಧ್ಯಾಪಕರಾದ ಡಾ.ಎಂ.ಪುಷ್ಪ ವಾಲ್ಮೀಕಿ ಅವರ ಬಗ್ಗೆ ಸವಿವರವಾಗಿ ತಿಳಿಸಿಕೊಟ್ಟರು. ತಾಲೂಕು ನಾಯಕರ ಸಂಘದ ಅಧ್ಯಕ್ಷ ನರಸನಾಯಕ್ ಪ್ರಾಸ್ತಾವಿಕ ನುಡಿಗಳನ್ನಾಡಿದರು. ಇದೇ ಸಂದರ್ಭ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಹಾಗೂ ಸಮಾಜದ ಮುಖಂಡರನ್ನು ಸನ್ಮಾನಿಸಲಾಯಿತು.

ಈ ವೇಳೆ ತಹಸೀಲ್ದಾರ್ ನಿಸರ್ಗಪ್ರಿಯ, ಪುರಸಭೆ ಅಧ್ಯಕ್ಷ ಎನ್.ನಟರಾಜ್, ತಾಲೂಕು ಸಮಾಜ ಕಲ್ಯಾಣಾಧಿಕಾರಿ ಎಸ್.ದಿವಾಕರ್, ತಾಲೂಕು ಕಬ್ಬು ಬೆಳೆಗಾರರ ಸಂಘದ ಅಧ್ಯಕ್ಷ ಕುಮಾರ್, ತಾಪಂ ಮಾಜಿ ಅಧ್ಯಕ್ಷ ಎ.ಎನ್.ಜಾನಕೀರಾಂ, ತಾಪಂ ಇಓ ಸತೀಶ್, ಬಿಇಓ ಆರ್.ಎಸ್.ಸೀತಾರಾಂ, ಪುರಸಭೆ ಮುಖ್ಯಾಧಿಕಾರಿ ಜಗನ್‌ರೆಡ್ಡಿ, ಪಶು ಇಲಾಖೆ ಸಹಾಯಕ ನಿರ್ದೇಶಕ ಡಾ.ದೇವರಾಜ್, ತಾಲೂಕು ಬಿಸಿಎಂ ಅಧಿಕಾರಿ ವೆಂಕಟೇಶ್, ವಾಲ್ಮೀಕಿ ನಾಯಕರ ಸಂಘದ ಗೌರವಾಧ್ಯಕ್ಷ ನಟರಾಜು, ಲೋಕೇಶ್, ಮುಖಂಡರಾದ ರೇವಣ್ಣ, ಶ್ರೀನಿವಾಸ್, ಕುಮಾರ್, ರಾಜಾನಾಯಕ್, ರಮೇಶ್, ಜ್ಞಾನಪ್ರಕಾಶ್, ಗ್ರಾಪಂ ಸದಸ್ಯೆ ಲತಾ, ಟಿಎಪಿಸಿಎಂಎಸ್ ನಿರ್ದೇಶಕ ಮಂಜುನಾಥ್ ಸೇರಿದಂತೆ ಇತರರಿದ್ದರು.

ಉದಯಗಿರಿಯಲ್ಲಿ ವ್ಯಕ್ತಿ ಕೊಲೆ

ಕೆಲ ಗಂಟೆಗಳಲ್ಲೇ ಆರೋಪಿಗಳ ಸೆರೆ

ಮೈಸೂರು, ಅ.28(ಆರ್‌ಕೆ)–ಹಣಕಾಸಿನ ವೈಷಮ್ಯಕ್ಕೆ ವ್ಯಕ್ತಿಯೋರ್ವನನ್ನು ನೀಲಗಿರಿ ಮರದ ಪೋಲ್‌ನಿಂದ ಹೊಡೆದು ಹತ್ಯೆಗೈದಿರುವ ಘಟನೆ ಮೈಸೂರಿನ ಉದಯಗಿರಿಯಲ್ಲಿ ಬುಧವಾರ ರಾತ್ರಿ ಸಂಭವಿಸಿದೆ. ಉದಯಗಿರಿಯ ಕೆಹೆಚ್‌ಬಿ ಕಾಲೋನಿ ನಿವಾಸಿ ಆಸಿಫ್ ಪಾಷಾ(35) ಹತ್ಯೆಯಾದವರು. ಆರೋಪಿಗಳಾದ ಸಲೀಂ ಪಾಷಾ ಹಾಗೂ ಸೈಯ್ಯದ್ ಅನ್ವರ್‌ನನ್ನು ಕೊಲೆಯಾದ ಕೆಲವೇ ತಾಸುಗಳಲ್ಲಿ ಬಂಧಿಸಿದ ಪೊಲೀಸರು, ಗುರುವಾರ ನ್ಯಾಯಾಧೀಶರ ಮುಂದೆ ಹಾಜರುಪಡಿಸಲಾಗಿ, ಅವರನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ. ಸಲೀಂ ಪಾಷನಿಗೆ ಕೊಡಬೇಕಾದ ಹಣ ವಸೂಲಿ ಸಂಬಂಧ ಆರಂಭವಾದ ಜಗಳದಲ್ಲಿ, ಬೀಡಿ ಕಾಲೋನಿಯ ಅಂಗಡಿ ಬಳಿ ಗಾಜಿನ ಚೂರು ಮತ್ತು ನೀಲಗಿರಿ ಮರದ ದೊಣ್ಣೆಯಿಂದ ತಲೆಗೆ ಹೊಡೆದು ಕೊಲೆ ಮಾಡಿ ಪರಾರಿಯಾಗಿದ್ದರು. ವಿಷಯ ತಿಳಿಯುತ್ತಿದ್ದಂತೆಯೇ ಘಟನಾ ಸ್ಥಳಕ್ಕೆ ಧಾವಿಸಿದ ದೇವರಾಜ ಉಪ ವಿಭಾಗದ ಎಸಿಪಿ ಶಾಂತಮಲ್ಲಪ್ಪ, ಉದಯಗಿರಿ ಠಾಣೆ ಇನ್ಸ್‌ಪೆಕ್ಟರ್ ಸುಧಾಕರ್, ಮಹಜರು ನಡೆಸಿ ಪ್ರಕರಣ ದಾಖಲಿಸಿಕೊಂಡರು. ತಮಗೆ ಸಿಕ್ಕಿದ ಸುಳಿವಿನ ಮೇರೆಗೆ ಕಾರ್ಯಾಚರಣೆ ನಡೆಸಿದ ಪೊಲೀಸರು, ಬೆನ್ನತ್ತಿ ಕೆಲವೇ ಗಂಟೆಗಳಲ್ಲಿ ಆರೋಪಿಗಳಾದ ಸಲೀಂ ಪಾಷಾ ಮತ್ತು ಸೈಯ್ಯದ್ ಅನ್ವರ್ ಅವರನ್ನು ಬಂಧಿಸುವಲ್ಲಿ ಯಶಸ್ವಿಯಾದರು.

ಚಿತ್ರನಟ, ಬಿಜೆಪಿ ಮುಖಂಡ ಜಯಪ್ರಕಾಶ್ ಹುಟ್ಟುಹಬ್ಬ ಸಂಭ್ರಮದ ಆಚರಣೆ

ಮೈಸೂರು, ಅ.28– ಕಾವೇರಿ ಕ್ರಿಯಾ ಸಮಿತಿ ಅಧ್ಯಕ್ಷರು, ಚಲನಚಿತ್ರ ನಾಯಕ ನಟರು ಬಿಜೆಪಿ ಮುಖಂಡರು, ಸೆನೆಟ್ ಮಾಜಿ ಸದಸ್ಯ ಎಸ್.ಜಯಪ್ರಕಾಶ್ ಅವರು ತಮ್ಮ ಹುಟ್ಟುಹಬ್ಬವನ್ನು ಶನಿವಾರ ವಿವಿಧ ಸೇವಾ ಕಾರ್ಯಗಳೊಂದಿಗೆ ಅರ್ಥಪೂರ್ಣವಾಗಿ ಆಚರಿಸಿಕೊಂಡರು.

ಬೆಳಗ್ಗೆ ನಂಜನಗೂಡು ನಂಜುಂಡೇಶ್ವರ ಹಾಗೂ ಚಾಮುಂಡೇಶ್ವರಿ ತಾಯಿಗೆ ಪೂಜೆ ಸಲ್ಲಿಸಿದ ಬಳಿಕ ಹೂಟಗಳ್ಳಿ ಅನಾಥಾಲಯದ ಮಕ್ಕಳಿಗೆ ಉಪಾಹಾರದ ವ್ಯವಸ್ಥೆ ಮಾಡಿದರು. ಬಳಿಕ ಅಕ್ಕಿಚೌಕ (ಕೆ.ಟಿ.ಸ್ಟ್ರೀಟ್)ದ ಶ್ರೀ ವರಸಿದ್ಧಿ ವಿನಾಯಕ ದೇವಸ್ಥಾನದಲ್ಲಿ ವಿಶೇಷ ಪೂಜೆ ಸಲ್ಲಿಸಿ, ಪ್ರಸಾದ ವಿತರಿಸಿದರು. ನಂತರ ಕೆ.ಆರ್. ಆಸ್ಪತ್ರೆ ರೋಗಿಗಳಿಗೆ ಹಣ್ಣು–ಹಂಪಲು ಹಾಗೂ ಹೆಬ್ಬಾಳು ಶ್ರೀ ಚಾಮುಂಡೇಶ್ವರಿ ದೇವಸ್ಥಾನದ ಬಳಿ ಬಡ ಮಹಿಳೆಯರಿಗೆ ಸೀರೆ ವಿತರಿಸುವ ಕಾರ್ಯಕ್ರಮದಲ್ಲಿ ಪಾಲ್ಗೊಂಡರು. ಅಕ್ಕಿಚೌಕದ ವರಸಿದ್ಧಿ ವಿನಾಯಕ ದೇಗುಲದ ಬಳಿ ಜಯಪ್ರಕಾಶ್ ಅಭಿಮಾನಿಗಳು ಅವರಿಗೆ ಬೃಹತ್ ಹಾರ ಹಾಕಿ, ಕೇಕ್ ಕತ್ತರಿಸಿ ಸಿಹಿ ಹಂಚುವ ಮೂಲಕ ಸಂಭ್ರಮಿಸಿದರು.

ಈ ವೇಳೆ ಜಯಪ್ರಕಾಶ್ ಮಾತನಾಡಿ, ನಿಮ್ಮೆಲ್ಲರ ಪ್ರೀತಿಗೆ ನಾನು ಆಭಾರಿಯಾಗಿದ್ದೇನೆ. ಹೊರ ಜಿಲ್ಲೆಗಳ ಸ್ನೇಹಿತರೂ ಶುಭಕೋರಲು ಬಂದಿರುವುದು ಸಂತಸ ತಂದಿದೆ. ಚಿತ್ರರಂಗದ ಬಹಳಷ್ಟು ಮಂದಿ ಶುಭಕೋರಿದ್ದಾರೆ. ಎಲ್ಲರ ಹಾರೈಕೆ ಹೀಗೆ ಇರಲಿ ಎಂದು ದೇವರಲ್ಲಿ ಪ್ರಾರ್ಥಿಸುತ್ತೇನೆ. ನಾನು ಅಭಿನಯಿಸಿರುವ 'ಭಗೀರಥ' ಸಿನಿಮಾ ಮುಂದಿನ ತಿಂಗಳು ಬಿಡುಗಡೆಯಾಗಲಿದ್ದು, ಚಿತ್ರದ ಯಶಸ್ಸಿಗೆ ನಿಮ್ಮೆಲ್ಲರ ಆಶೀರ್ವಾದ ಬೇಕು ಎಂದು ಕೋರಿದರು.



ಒಂದನೇ ಪುಟದಿಂದ

ಮಹರ್ಷಿ ವಾಲ್ಮೀಕಿ ಜಯಂತ್ಯೋತ್ಸವ

ಮನು ಕುಲಕ್ಕೆ ಅವಶ್ಯವಿರುವ ಎಲ್ಲಾ ಗುಣಗಳನ್ನು ಬಿಂಬಿಸಿದರು ಎಂದು ಡಾ.ಮಹದೇವಪ್ಪ ಹೇಳಿದರು.

ಮಹರ್ಷಿ ವಾಲ್ಮೀಕಿ ಅವರ ಇತಿಹಾಸ ತಿಳಿಯದೆ ಮತ್ತೊಂದು ಇತಿಹಾಸ ತಿಳಿಯಲು ಸಾಧ್ಯವೇ ಇಲ್ಲ. ಅದು ಅಪೂರ್ಣ ಕೂಡ ಎಂದು ಅಭಿಪ್ರಾಯಪಟ್ಟ ಡಾ.ಮಹದೇವಪ್ಪ, ಮನುಷ್ಯನ ಜೀವನ ಹೇಗಿರಬೇಕು ಎಂದು ಪಾತ್ರಗಳ ಮೂಲಕ ತಮ್ಮ ಮಹಾ ಕಾವ್ಯದಲ್ಲಿ ಮಹರ್ಷಿ ವಾಲ್ಮೀಕಿ ಅವರು ವಿಶ್ಲೇಷಣೆ ಮಾಡಿದ್ದಾರೆ. ಜೀವನಕ್ಕೆ, ನೈಜತೆಗೆ ಸಮೀಪವಾದ ಪ್ರೀತಿ, ಸಂಸ್ಕಾರ ಯಾವ ರೀತಿ ಇರಬೇಕು ಎಂದು ಸಾರಿ ಹೇಳಿದ್ದಾರೆ. ಈ ಮೂಲಕ ಮಹರ್ಷಿ ವಾಲ್ಮೀಕಿ ಅವರು ಆದರ್ಶ ಹಾಗೂ ಪ್ರೇರಣಾ ವ್ಯಕ್ತಿಯಾಗಿದ್ದಾರೆ ಎಂದು ತಿಳಿಸಿದರು.

ಪ್ರತಿಯೊಬ್ಬ ವ್ಯಕ್ತಿ ಸಾಧನೆ ಮಾಡಬೇಕು. ಜ್ಞಾನ ಎಂಬುದು ಯಾವುದೇ ಒಬ್ಬ ವ್ಯಕ್ತಿಯ ಸ್ವತ್ತಲ್ಲ. ನಮ್ಮಲ್ಲಿ ಪರಿಶ್ರಮ, ಅರ್ಪಣಾ ಮನೋಭಾವ ಇದ್ದರೆ ಸಾಧನೆ ಮಾಡಬಹುದು. ಇದಕ್ಕೆ ಮಹರ್ಷಿ ವಾಲ್ಮೀಕಿ ಅವರೇ ಸ್ಪಷ್ಟ ನಿದರ್ಶನ ಎಂದು ಡಾ.ಮಹದೇವಪ್ಪ ಅಭಿಪ್ರಾಯಪಟ್ಟರು.

ಶಾಸಕರಾದ ಜಿ.ಟಿ.ದೇವೇಗೌಡ, ಟಿ.ಎಸ್.ಶ್ರೀವತ್ಸ, ಕೆ.ಹರೀಶ್‌ಗೌಡ, ಸಿ.ಎನ್.ಮಂಜೇಗೌಡ, ಡಾ.ತಿಮ್ಮಯ್ಯ, ಮೇಯರ್ ಶಿವಕುಮಾರ್, ಉಪ ಮೇಯರ್ ಡಾ.ರೂಪ, ಪ್ರಾಧ್ಯಾಪಕ ಪ್ರೊ.ಪ್ರಶಾಂತ್ ನಾಯಕ್ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ರಾಮನ ವೇಷಧಾರಿ ಪುಟಾಣಿಗಳೊಂದಿಗೆ ಮುಸ್ಲಿಂ ಮಹಿಳೆಯರ ಪೋಸು

ಮಹರ್ಷಿ ವಾಲ್ಮೀಕಿ ಜಯಂತಿ ಮೆರವಣಿಗೆಯಲ್ಲಿ ರಾಮ, ಲಕ್ಷ್ಮಣ ವೇಷಧಾರಿ ಮಕ್ಕಳು ಗಮನ ಸೆಳೆದರು. ಈ ವೇಳೆ ಮುಸ್ಲಿಂ ಮಹಿಳೆಯರು ರಾಮ, ಲಕ್ಷ್ಮಣ ವೇಷಧಾರಿ ಮಕ್ಕಳ ಜೊತೆ ಫೋಟೋ ತೆಗೆಸಿಕೊಂಡರು. ಈ ಮೂಲಕ ಭಾವೈಕ್ಯತೆಯ ಸಂದೇಶ ಸಾರಿದರು.

ದೇವರೊಬ್ಬ ನಾಮ ಹಲವು, ರಾಮ, ರಹೀಮ ಎಲ್ಲಾ ಒಬ್ಬನೆ, ಧರ್ಮ ನೂರಾರು ಮನುಷ್ಯ ಒಂದೇ ಎಂಬ ಅರ್ಥಪೂರ್ಣ ಸಂದೇಶ ಸಾರಿದಂದಿತ್ತು ಧರ್ಮಾತೀತವಾದ ಈ ಮನೋಭಾವ ಪ್ರತಿಯೊಬ್ಬರಲ್ಲಿ ಬರಲಿ ಎಂದು ಹಲವರು ಆಶಯ ವ್ಯಕ್ತಪಡಿಸಿದರು.



ಬಿಜೆಪಿ ಟಿಕೆಟ್ ಕೊಡಿಸೋದಾಗಿ ಚೈತ್ರಾ ಮಾದರಿಯಲ್ಲೇ ಕೋಟಿ ಕೋಟಿ ವಂಚನೆ

ಆರೋಪಿ ಅರೆಸ್ಟ್

ಬಳ್ಳಾರಿ, ಅ.28– ಬಿಜೆಪಿ ಟಿಕೆಟ್ ಕೊಡಿಸುವುದಾಗಿ ನಿವೃತ್ತ ಎಂಜಿನಿಯರ್ ಒಬ್ಬರಿಗೆ ಕೋಟಿ ಕೋಟಿ ಹಣ ವಂಚಿಸಿದ ಆರೋಪದ ಮೇಲೆ ಬಿಜೆಪಿಯ ಮಾಜಿ ಮುಖಂಡ ಹಾಗೂ ಹಾಲಿ ಕೆಆರ್‌ಪಿಪಿ ಪಕ್ಷದ ನಾಯಕ ರೇವಣ ಸಿದ್ದಪ್ಪನನ್ನು ಕೊಟ್ಟೂರು ಪೊಲೀಸರು ಬಂಧಿಸಿದ್ದಾರೆ.

ಹಗರಿಬೊಮ್ಮನಹಳ್ಳಿ ಕ್ಷೇತ್ರದ ಬಿಜೆಪಿ ಟಿಕೆಟ್ ಕೊಡಿಸುವುದಾಗಿ ಆರೋಪಿ ರೇವಣ ಸಿದ್ದಪ್ಪ, ಪುತ್ತೂರು ಮೂಲದ ಶೇಖರ್ ಜೊತೆ ಸೇರಿ ಕೊಟ್ಟೂರಿನ ನಿವೃತ್ತ ಎಂಜಿನಿಯರ್ ಶಿವಮೂರ್ತಿ ಅವರಿಗೆ 1.95 ಕೋಟಿ ರೂ. ಪಡೆದು ವಂಚಿಸಿದ್ದಾನೆ. ಬೇರೆಯವರಿಗೆ ಟಿಕೆಟ್ ಘೋಷಣೆಯಾದ ಬಳಿಕ ವಿಚಾರ ತಿಳಿದ ಶಿವಮೂರ್ತಿ ಪ್ರಶ್ನಿಸಿದಾಗ ಬೆದರಿಕೆಯನ್ನು ಹಾಕಿದ್ದಾನೆ ಎಂದು ಆರೋಪಿಸಲಾಗಿದೆ. ಇದಾದ ಬಳಿಕ ಊರಿನ ಮುಖಂಡರು ರಾಜಿ ಕೂಡ ಮಾಡಿಸಿದ್ದರು. ಈ ವೇಳೆ ಆರೋಪಿ ಹಣ ವಾಪಸ್ ನೀಡುವುದಾಗಿ ಎರಡು ಚೆಕ್‌ಗಳನ್ನು ನೀಡಿದ್ದ. ಈ ಚೆಕ್‌ಗಳು ಬೌನ್ಸ್ ಆಗಿದ್ದವು. ಬಳಿಕ ಈ ಬಗ್ಗೆ ಶಿವಮೂರ್ತಿ ಕೊಟ್ಟೂರು ಠಾಣೆಯಲ್ಲಿ ಪ್ರಕರಣ ದಾಖಲಿಸಿದ್ದರು.

ಪ್ರಕರಣ ದಾಖಲಾದ ದಿನದಿಂದ ಪ್ರಕರಣದ ಪ್ರಮುಖ ಆರೋಪಿ ರೇವಣ ಸಿದ್ದಪ್ಪ ತಲೆ ಮರೆಸಿಕೊಂಡಿದ್ದ. ಪ್ರಕರಣವನ್ನೂ ಗಂಭೀರವಾಗಿ ಪರಿಗಣಿಸಿದ್ದ ಪೊಲೀಸರು ಆರೋಪಿಯನ್ನು ಬಂಧಿಸಿದ್ದಾರೆ. ಆರೋಪಿಯ ಬಂಧನವನ್ನು ವಿಜಯನಗರ ಎಸ್‌ಪಿ ಶ್ರೀಹರಿಬಾಬು ಅವರು ಖಚಿತಪಡಿಸಿದ್ದಾರೆ.

ಮನೆ ಮನೆ ದಸರಾ ಗೊಂಬೆ ಸ್ಪರ್ಧೆ ವಿಜೇತರಿಗೆ ಬಹುಮಾನ ವಿತರಣೆ

ಮೈಸೂರು, ಅ.28(ಎಸ್‌ಪಿಎನ್)– ಮನೆ ಮನೆ ದಸರಾ ಗೊಂಬೆ ಕೂರಿಸುವ ಸ್ಪರ್ಧೆಯ ವಿಜೇತರಿಗೆ ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್ ರವರ ಹೆಸರಿನ ಪಾರಿತೋಷಕ ಹಾಗೂ ನಗದು ಬಹುಮಾನವನ್ನು ಶನಿವಾರ ವಿತರಿಸಲಾಯಿತು.



ನಗರದ ಚಾಮುಂಡಿಪುರನಲ್ಲಿರುವ ಖಾಸಗಿ ಹೋಟೆಲ್‌ನಲಿ ಕೆಎಂಪಿಕೆ ಚಾರಿಟೇಬಲ್ ಟ್ರಸ್ಟ್ ಹಾಗೂ ಸ್ಟ್ರೀಟ್ ಇವೆಂಟ್ ಆಯೋಜಿಸಿದ ಮನೆಮನೆ ಗೊಂಬೆ ಜೋಡಣೆ ಸ್ಪರ್ಧೆಯಲ್ಲಿ ವಿಜೇತರಾದವರಿಗೆ ಬಹುಮಾನವನ್ನು ಕರ್ನಾಟಕ ಬ್ರಾಹ್ಮಣ ಸಂಘ ಮೈಸೂರು ನಗರ ಮತ್ತು ಜಿಲ್ಲಾ ಘಟಕದ ಅಧ್ಯಕ್ಷ ಡಿ.ಟಿ.ಪ್ರಕಾಶ್ ವಿತರಿಸಿದರು.

ಗಿರಿದರ್ಶಿನಿ ಬಡಾವಣೆ ನಿವಾಸಿ ಗೀತಾ ಶ್ರೀಹರಿ ಅವರಿಗೆ ಮೊದಲನೇ ಬಹುಮಾನ, 2 ಸಾವಿರ ನಗದು ಹಾಗೂ ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್ ಪಾರಿತೋಷಕ ನೀಡಿ ಗೌರವಿಸಲಾಯಿತು. ರಾಮಚಂದ್ರ ಅಗ್ರಹಾರದ ಸುರಭಿ ಅವರಿಗೆ ದ್ವಿತೀಯ ಬಹುಮಾನ, ಸಾವಿರ ರೂ. ನಗದು, ಜೆ.ಪಿ.ನಗರದ ನಿವಾಸಿ ರಾಧಾಕಾಂತ್ ಅವರಿಗೆ ತೃತೀಯ ಬಹುಮಾನ, 500 ನಗದು ನೀಡಿ, ಗೌರವಿಸಲಾಯಿತು. ಸ್ಪರ್ಧೆಯಲ್ಲಿ ಭಾಗವಹಿಸಿದ್ದ ಎಲ್ಲರಿಗೂ ಪ್ರಮಾಣ ಪತ್ರ ನೀಡಲಾಯಿತು.

ನಂತರ ಮಾತನಾಡಿದ ಪ್ರಕಾರ, ಮೈಸೂರು ದಸರಾ ಮಹತ್ವ, ಗುರು ಪರಂಪರೆ, ಅಷ್ಟ ಲಕ್ಷ್ಮಿಯರು ಆಚರಣೆ, ಕೃಷಿ, ಗ್ರಾಮೀಣ ಬದುಕು, ಪಾರಂಪರಿಕ ವೃತ್ತಿಗಳು ಸೇರಿದಂತೆ ಪೌರಾಣಿಕ, ಸಾಮಾಜಿಕ ಹಿನ್ನೆಲೆಯ ಗೊಂಬೆಗಳನ್ನು ಜೋಡಣೆ ಮಾಡಿ ಇತರರಿಗೆ ಮಾದರಿಯಾಗಿದ್ದಾರೆ. ಅಲ್ಲದೆ. ಭಾರತೀಯ ಸಂಸ್ಕೃತಿ, ಪರಂಪರೆಯ ಬಗ್ಗೆ ಅರಿವು ಮೂಡಿಸಲು ದಸರಾ ಗೊಂಬೆ ಪ್ರದರ್ಶನ ಅವಶ್ಯಕ. ಮನೆಯಲ್ಲಿ ಮಹಿಳೆಯರು, ಪುರುಷರು ಹಾಗೂ ಮಕ್ಕಳು ಜೊತೆಗೂಡಿ ವಿವಿಧ ಬಗೆಯ ಗೊಂಬೆಗಳನ್ನು ಸಂಗ್ರಹಿಸಿ ಅಚ್ಚುಕಟ್ಟಾಗಿ ಜೋಡಿಸಿ ಪ್ರದರ್ಶನ ಮಾಡಿರುವುದು ಸ್ವಾಗತಾರ್ಹ ಎಂದರು. ಈ ವೇಳೆ ಹಿರಿಯ ಸಮಾಜ ಸೇವಕ ಕೆ.ರಘುರಾಮ್ ವಾಜಪೇಯಿ, ಜೀವದಾರ ರಕ್ತ ನಿಧಿ ಕೇಂದ್ರದ ನಿರ್ದೇಶಕ ಗಿರೀಶ್, ಕೆಎಂಪಿಕೆ ಟ್ರಸ್ಟ್ ಅಧ್ಯಕ್ಷ ವಿಕ್ರಮ ಅಯ್ಯಂಗಾರ್, ಸವಿತಾ ಘಾಟ್ಕೆ, ಅಪೂರ್ವ ಸ್ನೇಹ ಬಳಗದ ಅಧ್ಯಕ್ಷ ಅಪೂರ್ವ ಸುರೇಶ್, ಅಜಯ್ ಶಾಸ್ತ್ರಿ, ಚಕ್ರಪಾಣಿ, ಎಸ್.ಎನ್. ರಾಜೇಶ್, ನಾಗಶ್ರೀ ಸುಚೇಂದ್ರ, ಕಾವೇರಮ್ಮ ಹಾಗೂ ಇನ್ನಿತರರು ಭಾಗಿಯಾಗಿದ್ದರು.



ಬಿಜೆಪಿ ಹಿರಿಯ ಮುಖಂಡರು ಹಾಗೂ ಚಲನಚಿತ್ರ ನಾಯಕ ನಟರಾದ ಎಸ್.ಜಯಪ್ರಕಾಶ್ (ಜೆಪಿ) ಅವರ ಹುಟ್ಟುಹಬ್ಬದ ಹಿನ್ನೆಲೆಯಲ್ಲಿ ಅಕ್ಕಿಚೆಕ್ಕದೇರಿರುವ ಶ್ರೀ ಮಹಾಗಣಪತಿಯ ದೇವಾಲಯದಲ್ಲಿ ವಿಶೇಷ ಪೂಜೆ ಸಲ್ಲಿಸಲಾಯಿತು. ಮೈಸೂರು ಜಿಲ್ಲಾ ಗ್ರಾಮಾಂತರ ಎಸ್‌ಟಿ ಮೋರ್ಚಾ ಉಪಾಧ್ಯಕ್ಷ ಡಿ.ಮಹೇಶ್ ನಾಯಕ ಹಾಗೂ ವೆಂಕಟೇಶ್ ಶುಭಾಶಯ ಕೋರಿದರು.



ಮೈಸೂರು ನಗರ ಮತ್ತು ಗ್ರಾಮಾಂತರ ಜಿಲ್ಲಾ ಕಾಂಗ್ರೆಸ್ ಸಮಿತಿ, ಪರಿಶಿಷ್ಟ ಪಂಗಡಗಳ ಸಮಿತಿ ಆಶ್ರಯದಲ್ಲಿ ಮೈಸೂರಿನ ಇಂದಿರಾಗಾಂಧಿ ಕಾಂಗ್ರೆಸ್ ಭವನದಲ್ಲಿ ಶ್ರೀ ಮಹರ್ಷಿ ವಾಲ್ಮೀಕಿ ಜಯಂತಿಯನ್ನು ಮಹರ್ಷಿಗಳ ಚಿತ್ರಪಟಕ್ಕೆ ಪುಷ್ಪಾರ್ಚನೆ ಮಾಡುವ ಮೂಲಕ ಅರ್ಥಪೂರ್ಣವಾಗಿ ಆಚರಿಸಲಾಯಿತು. ನಗರ ಕಾಂಗ್ರೆಸ್ ಅಧ್ಯಕ್ಷ ಆರ್. ಮೂರ್ತಿ, ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಡಾ. ಬಿ.ಜೆ.ವಿಜಯ್ ಕುಮಾರ್, ಶಾಸಕ ಕೆ. ಹರೀಶ್‌ಗೌಡ, ಮಾಜಿ ಶಾಸಕ ಎಂ.ಕೆ.ಸೋಮಶೇಖರ್, ಕೆಪಿಸಿಸಿ ವಕ್ತಾರ ಲಕ್ಷ್ಮಣ್, ಪ್ರಧಾನ ಕಾರ್ಯದರ್ಶಿ ಎಂ.ಶಿವಣ್ಣ, ಪರಿಶಿಷ್ಟ ಪಂಗಡ ಸಮಿತಿಯ ಅಧ್ಯಕ್ಷ ರೋಹಿತ್, ಜಿಲ್ಲಾಧ್ಯಕ್ಷ ನಾರಾಯಣ ನಾಯಕ, ಕಾಂಗ್ರೆಸ್ ಮುಖಂಡರಾದ ವಿಜಯಕುಮಾರ್, ಕೆಂಪನಾಯಕ ಈಶ್ವರ್ ಚಕ್ಕಡಿ, ಹಿಂದುಳಿದ ವರ್ಗಗಳ ಅಧ್ಯಕ್ಷ ನಾಗೇಶ್, ಕೆ ಆರ್ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಚಂದು, ಹುಲ್ಲಿನಬೀದಿ ಶಿವಕುಮಾರ್, ಗುಣಶೇಖರ್, ಮಂಜುಳಾ ಪ್ರಕಾಶ್, ಭವ್ಯ ಇಂದ್ರಮ್ಮ ,ನಾಗರತ್ನ ಮಂಜುನಾಥ್ ಉಪಸ್ಥಿತರಿದ್ದರು.



ಮೈಸೂರಿನ ಅನಂತಗೀತ ವಿದ್ಯಾಲಯದಲ್ಲಿ ವಾಲ್ಮೀಕಿ ಜಯಂತಿ ಆಚರಿಸಲಾಯಿತು. ಈ ಸಂದರ್ಭದಲ್ಲಿ ಶಾಲೆಯ ಪ್ರಾಂಶುಪಾಲರಾದ ಶ್ರೀಕಾಂತ್ ಅಮರನಾಥ್, ಉಪ ಪ್ರಾಂಶುಪಾಲರಾದ ಹರದೂರು ಲೋಕೇಶ್ ಹಾಗೂ ಶಿಕ್ಷಕರಾದ ಜಮುನಾ, ಕಾವೇರಮ್ಮ, ಉಷಾ, ಶಿಲ್ಪಾ, ಸ್ಮಿತ , ಸುಲೋಚನಾ, ಗೀತಾ, ಶಿಲ್ಪಶ್ರೀ ಹಾಜರಿದ್ದರು.



ಮೈಸೂರಿನ ಮೇಟಗಳ್ಳಿಯ ಜೆಎಸ್‌ಎಸ್ ಶಾಲೆಯಲ್ಲಿ ಮಹರ್ಷಿ ವಾಲ್ಮೀಕಿ ಜಯಂತಿ ಆಚರಿಸಲಾಯಿತು. ಶಾಲಾ ಮುಖ್ಯೋಪಾಧ್ಯಾಯ ಎನ್.ಪಿ.ಸತೀಶ್ ಅಧ್ಯಕ್ಷತೆ ವಹಿಸಿದ್ದರು. ಸಹಾಯಕ ಶಿಕ್ಷಕ ಡಿ.ಚೇತನ್, ಸಹ ಶಿಕ್ಷಕಿ ಎನ್.ದೀಪಾ, ಶಾಲೆಯ ಸಿಬ್ಬಂದಿ ಮತ್ತು ವಿದ್ಯಾರ್ಥಿಗಳು ಉಪಸ್ಥಿತರಿದ್ದರು.



ಮೈಸೂರಿನ ನಾರಾಯಣ ಶಾಸ್ತ್ರಿ ರಸ್ತೆಯ ಸುಣ್ಣದಕೇರಿ ಮಲೆ ಮಹದೇಶ್ವರ ದೇವಸ್ಥಾನದ ಆವರಣದಲ್ಲಿ ಶ್ರೀ ಮಹರ್ಷಿ ವಾಲ್ಮೀಕಿ ಜಯಂತಿಯನ್ನು ಅರ್ಥಪೂರ್ಣವಾಗಿ ಆಚರಿಸಲಾಯಿತು. ಮಾಜಿ ಶಾಸಕ ಎಂ.ಕೆ.ಸೋಮಶೇಖರ್ ಪುಷ್ಪಾರ್ಚನೆ ಮಾಡುವ ಮೂಲಕ ಗೌರವ ನಮನ ಸಲ್ಲಿಸಿದರು. ಈ ವೇಳೆ ದೇವಸ್ಥಾನ ಸಮಿತಿ ಅಧ್ಯಕ್ಷ ಸತೀಶ್, ಕಾರ್ಯದರ್ಶಿ ಬಿ.ಸಿದ್ದಪ್ಪ, ನಿರ್ದೇಶಕರಾದ ಬಲರಾಮ್, ಬಸಪ್ಪ, ವೆಂಕಟ, ಗುಣಶೇಖರ್ ಉಪಸ್ಥಿತರಿದ್ದರು.



ಮೈಸೂರಿನ ಚಾಮರಾಜಪುರಂನ ಅಹಿಂದ ಸಂಘಟನೆ ವತಿಯಿಂದ ಮಹರ್ಷಿ ವಾಲ್ಮೀಕಿ ಜಯಂತಿಯನ್ನು ಆಚರಿಸಲಾಯಿತು. ಈ ವೇಳೆ ಕೆಪಿಸಿಸಿ ಸದಸ್ಯ ನಜರ್‌ಬಾದ್ ನಟರಾಜ್, ನಾಯಕ ಸಮುದಾಯದ ಯುವ ಮುಖಂಡ ನಂದೀಶ್ ನಾಯಕ್, ಕೆಆರ್ ಬ್ಯಾಂಕ್ ಉಪಾಧ್ಯಕ್ಷ ಬಸವರಾಜ್ ಬಸಪ್ಪ ವರುಣ ಮಹದೇವ್, ಮಹದೇವ್ ಪಾಂಡೆ, ಲೋಕೇಶ್, ನಾಗರಾಜ್, ನಿತೀಶ್ ಕುಮಾರ್, ಕನಕಮೂರ್ತಿ ಇನ್ನಿತರರು ಉಪಸ್ಥಿತರಿದ್ದರು.



ತೋಟಗಾರಿಕೆ ಇಲಾಖೆ ಆಯೋಜಿಸಿದ್ದ ದಸರಾ ಫಲಪುಷ್ಪ ಪ್ರದರ್ಶನ ಸ್ಪರ್ಧೆಯಲ್ಲಿ ಭಾರತ್ ಆಸ್ಪತ್ರೆ ಮತ್ತು ಆಂಕೊಲಜಿ ಸಂಸ್ಥೆ ಉದ್ಯಾನ (ಗುಲಾಬಿ ಉದ್ಯಾನ) ವಿಭಾಗದಲ್ಲಿ ಪ್ರಥಮ ಬಹುಮಾನವನ್ನು ಗಳಿಸಿದೆ. ಈ ಗುಲಾಬಿ ಉದ್ಯಾನದಲ್ಲಿ 15ಕ್ಕೂ ಹೆಚ್ಚು ಬಗೆಯ ಗುಲಾಬಿ ಹೂವುಗಳೊಂದಿಗೆ 1500 ಕ್ಕೂ ಹೆಚ್ಚು ಗಿಡಗಳಿವೆ. ಸಂಸ್ಥೆಯ ಜನರಲ್ ಮ್ಯಾನೇಜರ್ ಕೆ.ಪಿ.ಶಿವಪ್ರಸಾದ್ ಅವರು ಪ್ರಶಸ್ತಿ ಸ್ವೀಕರಿಸಿದರು. ರೋಸ್ ಗಾರ್ಡನ್ ತಂಡದ ಸದಸ್ಯರು ಉಪಸ್ಥಿತರಿದ್ದರು.

ಮೇಕೆದಾಟು ಯೋಜನೆಗೆ ಅನುಮತಿ ನೀಡದ ಕೇಂದ್ರದ ವಿರುದ್ಧ ಮುಖ್ಯಮಂತ್ರಿ ಸಿದ್ದರಾಮಯ್ಯ ಟೀಕಾಪ್ರಹಾರ


- ಹೆಚ್ಚುವರಿ ನೀರು ಸಮುದ್ರಕ್ಕೆ ಹರಿದು ಹೋಗಲು ಕೇಂದ್ರದ ಧೋರಣೆ ಕಾರಣ
- ಕೇಂದ್ರ ಸರ್ಕಾರದಿಂದ ರಾಜ್ಯದ ವಿಚಾರದಲ್ಲಿ ಸೇಡಿನ ಮನೋಭಾವನೆ ಪ್ರದರ್ಶನ

ಬೆಂಗಳೂರು, ಅ.28(ಕೆಎಂಶಿ) – ಮೇಕೆದಾಟು ಯೋಜನೆಗೆ ಅನುಮತಿ ನೀಡದೇ ಹೆಚ್ಚುವರಿ ನೀರು ಸಮುದ್ರಕ್ಕೆ ಹರಿದು ಹೋಗುವಂತೆ ಕೇಂದ್ರ ಸರ್ಕಾರ ಮಾಡಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಪ್ರಧಾನಿ ನರೇಂದ್ರ ಮೋದಿ ಹಾಗೂ ಬಿಜೆಪಿ ಸರ್ಕಾರದ ವಿರುದ್ಧ ಎರಡನೇ ದಿನವಾದ ಇಂದು ಟೀಕಾಪ್ರಹಾರ ಮಾಡಿದ್ದಾರೆ.

ಕೆಆರ್‌ಎಸ್‌ಗೆ ಸಮಾನಾಂತರವಾಗಿ ಮೇಕೆದಾಟು ಯೋಜನೆ ಅನುಷ್ಠಾನಗೊಂಡರೆ, ಬೆಂಗಳೂರು ನಗರ ಮತ್ತು ಸುತ್ತಮುತ್ತಲ ಪ್ರದೇಶಕ್ಕೆ 4.75 ಟಿಎಂಸಿ ಅಡಿ ಕುಡಿಯುವ ನೀರು ಹಾಗೂ 400 ಮೆ.ವ್ಯಾ. ವಿದ್ಯುತ್ ಉತ್ಪಾದನೆ ಸಾಧ್ಯವಾಗುತ್ತದೆ.

ಮುಂಗಾರು ಮಳೆ ಕೈಕೊಟ್ಟಿದ್ದರಿಂದ ಕಾವೇರಿ ಜಲಾನಯನ ಪ್ರದೇಶದಲ್ಲಿ





ಮಳೆಯಾಗದೆ, ಜಲಾಶಯಗಳಿಗೆ ಪೂರ್ಣ ಪ್ರಮಾಣದ ನೀರು ಹರಿದು ಬಂದಿಲ್ಲ. ಜತೆಗೆ ತಮಿಳುನಾಡಿನೊಂದಿಗೆ ನೀರಿನ ಕಾನೂನು ಹೋರಾಟ ಮುಂದುವರೆದಿದೆ.

ಮಳೆ ಹೆಚ್ಚಾಗಿ ಬಿದ್ದ ವರ್ಷಗಳಲ್ಲಿ ತಮಿಳುನಾಡಿಗೆ ಕೊಡಬೇಕಾದ ನೀರಿನ ಪಾಲನ್ನು ನೀಡಿ ಸಮಾನಾಂತರ ಅಣೆಕಟ್ಟಿನಲ್ಲಿ ಸಮುದ್ರಕ್ಕೆ ಹರಿದು ಹೋಗುವ ನೀರು ಹಿಡಿದಿಟ್ಟರೆ ಎರಡು ರಾಜ್ಯಗಳಿಗೂ ಅನುಕೂಲ. ದೇಶದ ಅಭಿವೃದ್ಧಿಗೂ ಸಹ ಕಾರಿಯಾಗಲಿದೆ. ಆದರೆ, ಕೇಂದ್ರ ಬಿಜೆಪಿ ಸರ್ಕಾರ ಕರ್ನಾಟಕದ ಮೇಲೆ ಸೇಡು ತೀರಿಸಿಕೊಳ್ಳಲು ಕಾವೇರಿ ಮತ್ತು ಕೃಷ್ಣಾ ಜಲ ವಿಚಾರದಲ್ಲಿ ಅಸಹಕಾರದ ಧೋರಣೆ ತೋರುತ್ತಿದೆ ಎಂದು ಮುಖ್ಯಮಂತ್ರಿ ಅವರು ಕಿಡಿಕಾರಿದ್ದಾರೆ. ಈ ಸಂಬಂಧ ಹೇಳಿಕೆ ಬಿಡುಗಡೆ ಮಾಡಿರುವ ಅವರು, ಕಾವೇರಿ ನೀರು ಹಂಚಿಕೆಯಲ್ಲಿ ಉಂಟಾಗಿರುವ ಸಮಸ್ಯೆಯ ಬಗ್ಗೆ ಪ್ರಧಾನಿ ಮೋದಿ ಅವರ ಮೌನ, ಮೇಕೆದಾಟು ಯೋಜನೆಗೆ ಸಿಗದ ಅನುಮತಿ, ಭದ್ರಾ ಮೇಲ್ದಂಡೆ ಯೋಜನೆಗೆ ಕೇಂದ್ರದಿಂದ ಘೋಷಿಸಲಾದ ಅನುದಾನ ಬಜೆಟ್ ಪುಸ್ತಕಕ್ಕಷ್ಟೇ ಸೀಮಿತವಾಗಿರುವುದು ಹೀಗೆ ಕೇಂದ್ರದ ಅಸಹಕಾರದಿಂದಾಗಿ ಕರುನಾಡು ಬಡವಾಗುತ್ತಿರುವ ಬಗ್ಗೆ ನ್ಯಾಯಕ್ಕಾಗಿ ಆಗ್ರಹಿಸಲಾಗುವುದು ಎಂದಿದ್ದಾರೆ. ಸಾಮಾಜಿಕ ಜಾಲತಾಣ ಅಭಿಯಾನದ ಮುಂದಿನ ಭಾಗವಾಗಿ ಇಂದು ಅಂತರರಾಜ್ಯ ನೀರು ಹಂಚಿಕೆಗೆ ಸಂಬಂಧಿಸಿದ ಕುಡಿಯುವ ನೀರು, ಕೃಷಿ ಮತ್ತು ವಿದ್ಯುತ್ ಉತ್ಪಾದನೆಯ ಉದ್ದೇಶದ ನೀರಾವರಿ ಯೋಜನೆಗಳಿಗೆ ಕೇಂದ್ರ ಸರ್ಕಾರ ಅನುಮತಿ, ಅನುದಾನ ಮತ್ತು ಪ್ರಾಶಸ್ತ್ಯ ನೀಡದೆ, ಬರದ ನಡುವೆ ಕನ್ನಡಿಗರನ್ನು ಮತ್ತಷ್ಟು ಸಂಕಷ್ಟಕ್ಕೆ ದೂಡಿರುವ ಬಗ್ಗೆ ಧ್ವನಿಯೆತ್ತಲಾಗುವುದು ಎಂದು ಹೇಳಿದ್ದಾರೆ.

ಪ್ರಧಾನಮಂತ್ರಿ ಸುರಕ್ಷಾ ಭೀಮ ಯೋಜನೆ ಅಡಿ 2 ಲಕ್ಷ ಅಪಘಾತ ಪರಿಹಾರ

ಮೈಸೂರು, ಅ.28–ಕಾರ್ಮಿಕ ಇಲಾಖೆ ವತಿಯಿಂದ ಅಸಂಘಟಿತ ಕಾರ್ಮಿಕರ ಸಮಗ್ರ ರಾಷ್ಟ್ರೀಯ ದತ್ತಾಂಶ ಕ್ರೋಢೀಕರಿಸುವ ಉದ್ದೇಶದಿಂದ 379 ವರ್ಗಗಳ ಸಂಘಟಿತ ಕಾರ್ಮಿಕರನ್ನು ಇ-ಶ್ರಮ್ ಪೋರ್ಟಲ್ ಮೂಲಕ ಆಗಸ್ಟ್ 26, 2021 ರಿಂದ ಮಾರ್ಚ್ 31,2022 ರವರೆಗೆ ನೋಂದಣಿ ಮಾಡಿಕೊಂಡಿದ್ದ ಕಾರ್ಮಿಕರಲ್ಲಿ ಅಪಘಾತಕ್ಕೆ ಒಳಗಾಗಿರುವ ಕಾರ್ಮಿಕರಿಗೆ ಪ್ರಧಾನಮಂತ್ರಿ ಸುರಕ್ಷಾ ಭೀಮ ಯೋಜನೆ ಅಡಿಯಲ್ಲಿ 2 ಲಕ್ಷ ರೂ. ಅಪಘಾತ ಪರಿಹಾರವನ್ನು ನೀಡಲಾಗುತ್ತದೆ. ಅಪಘಾತದಿಂದ ಮರಣ ಹೊಂದಿರುವ ಕಾರ್ಮಿಕ ಫಲಾನುಭವಿಗಳ ಆಧಾರ್ ಕಾರ್ಡ್ ಸಂಖ್ಯೆ, ಇ-ಶ್ರಮ್ ಕಾರ್ಡ್ ಸಂಖ್ಯೆ, ಮರಣ ಪ್ರಮಾಣ ಪತ್ರ, ಮರಣಕ್ಕೆ ಕಾರಣದ ವೈದ್ಯಕೀಯ ಪ್ರಮಾಣ ಪತ್ರ, ದಾಖಲೆಗಳನ್ನು ಸಲ್ಲಿಸಿ ಯೋಜನೆಯ ಪರಿಹಾರವನ್ನು ಪಡೆದುಕೊಳ್ಳಬಹುದಾಗಿದೆ. ಅಪಘಾತದಿಂದ ಅಂಗವೈಕಲ್ಯ ಹೊಂದಿರುವ ಫಲಾನುಭವಿಗಳು ಆಧಾರ್ ಕಾರ್ಡ್ ಸಂಖ್ಯೆ , ಇ-ಶ್ರಮ್ ಕಾರ್ಡ್ ಸಂಖ್ಯೆ, ಅಪಘಾತದಿಂದ ಉಂಟಾದ ಅಂಗವಿಕಲತೆವನ್ನು ಸೂಚಿಸುವ ಡಿಸ್ಚಾರ್ಜ್ ಸಾರಾಂಶವನ್ನು ಒಳಗೊಂಡಿರುವ ಆಸ್ಪತ್ರೆಯ ದಾಖಲೆಯೊಂದಿಗೆ ಅರ್ಜಿ ಸಲ್ಲಿಸಬಹುದಾಗಿದೆ. ಅರ್ಹ ಫಲಾನುಭವಿಗಳು ಸೂಕ್ತ ದಾಖಲೆಗಳೊಂದಿಗೆ ಮೈಸೂರಿನ ಕುವೆಂಪು ನಗರದ ನ್ಯೂ ಕಾಂತರಾಜ್ ಅರಸ್ ರಸ್ತೆಯಲ್ಲಿರುವ ಕಾರ್ಮಿಕ ಅಧಿಕಾರಿಗಳ ಕಚೇರಿಗೆ ಅರ್ಜಿ ಸಲ್ಲಿಸಬಹುದಾಗಿದೆ.

ಹೆಚ್ಚಿನ ಮಾಹಿತಿಗಾಗಿ ಸಂಬಂಧಿತ ತಾಲೂಕು ಕಾರ್ಮಿಕ ಅಧಿಕಾರಿಗಳ ಕಚೇರಿ ಅಥವಾ ದೂರವಾಣಿ ಸಂಖ್ಯೆ 0821–2343990 ಸಂಪರ್ಕಿಸಬಹುದು

ಬದುಕಿನ ಧರ್ಮ ಗ್ರಂಥ 'ರಾಮಾಯಣ' ಮಹಾಕಾವ್ಯದ ಕರ್ತೃ ವಾಲ್ಮೀಕಿ

ಮೈಸೂರು, ಅ. 28– ಮೈಸೂರಿನ ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನಲ್ಲಿ ವಾಲ್ಮೀಕಿ ಜಯಂತಿ ಆಚರಿಸಲಾಯಿತು.

ವಾಲ್ಮೀಕಿ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಸಲ್ಲಿಸಿ, ಕಾಲೇಜು ಪ್ರಾಂಶುಪಾಲರಾದ ಡಾ. ಬಿ.ಆರ್. ಜಯಕುಮಾರಿ ಮಾತನಾಡಿ, ಹಿರಿಯ ಚೈತನ್ಯ, ನಮ್ಮ ಮಹಾಕಾವ್ಯವಾದ ರಾಮಾಯಣ, ಜೊತೆಗೆ ಇಡೀ ಭರತ ಖಂಡದ ಎಲ್ಲಾ ಮಹಾಕಾವ್ಯಗಳ ಮೂಲ ಕರ್ತೃ ವಾಲ್ಮೀಕಿ. ಮಗುವಿನಲ್ಲಿ ಅಪಹರಣಕ್ಕೊಳಗಾಗಿ, ಬೇಟೆಗಾರರ ಜೊತೆ ಬೆಳೆದು, ಬೇಟೆಗಾರ ವೃತ್ತಿಯನ್ನು ಆರಂಭಿಸಿದ ವಾಲ್ಮೀಕಿ ಅವರು, ನಾರದ ಮಹರ್ಷಿಯನ್ನು ಭೇಟಿಯಾದಾಗ, ರಾಮ ನಾಮವನ್ನು ಜಪಿಸುವಂತೆ ತಿಳಿಸಿದರು. ಆಗ ಅದು ಅವರಿಂದ ಸಾಧ್ಯವಾಗುವುದಿಲ್ಲ. ನಂತರ ಮರ ಮರ ಎಂದು ರಾಮ ನಾಮವನ್ನು ಜಪಿಸುವಾಗ ಹುತ್ತ ಬೆಳೆದುಕೊಳ್ಳುತ್ತದೆ. ಸಂಸ್ಕೃತದಲ್ಲಿ ವಲ್ಮೀಕ ಎಂದರೆ ಹುತ್ತ. ಹಾಗಾಗಿ ರತ್ನಾಕರರಾಗಿದ್ದ ಅವರು ವಾಲ್ಮೀಕಿ ಆಗುತ್ತಾರೆ. ಆ ನಂತರ ಅವರು ರಾಮಾಯಣವನ್ನು ಬರೆಯುವುದಕ್ಕೆ ಆರಂಭಿಸುತ್ತಾರೆ. ಆ ಮೂಲಕ ನಮ್ಮ ಬದುಕನ್ನು ಕಟ್ಟಿಕೊಳ್ಳುವುದಕ್ಕೆ ಬೇಕಾಗಿರುವ ಎಲ್ಲ ರೀತಿಯ ಮೌಲ್ಯಗಳನ್ನು, ಸೂಕ್ಷ್ಮ ಸಂವೇದನೆಗಳಿರುವ ರಾಮಾಯಣದಲ್ಲಿ ನಮಗೆ ಕೊಟ್ಟಿದ್ದಾರೆ ಎಂದರು.



ಕಾರ್ಯಕ್ರಮದಲ್ಲಿ ಕಾಲೇಜಿನ ಕನ್ನಡ ವಿಭಾಗದ ಮುಖ್ಯಸ್ಥರಾದ ಡಾ. ಎಚ್.ಆರ್. ತಿಮ್ಮೇಗೌಡ, ಇತಿಹಾಸ ವಿಭಾಗದ ಮುಖ್ಯಸ್ಥರು ಮತ್ತು ಶೈಕ್ಷಣಿಕ ಡೀನ್ ಡಾ. ಶ್ರೀಧರ ಎಚ್, ಸಿಬ್ಬಂದಿ ವರ್ಗ ಕಾಲೇಜಿನ ಅಧ್ಯಾಪಕರು ಉಪಸ್ಥಿತರಿದ್ದರು.

ಮೈಸೂರಲ್ಲಿ ದಕ್ಷಿಣ ವಲಯದ ಆಕಾಶವಾಣಿ ಅರೆಕಾಲಿಕ ವರದಿಗಾರರಿಗೆ ಪುನಶ್ಚೇತನ ಕಾರ್ಯಾಗಾರ

ಮೈಸೂರು, ಅ.28(ಆರ್‌ಕೆ)– ಮೈಸೂರಿನ ಮಾನಸ ಗಂಗೋತ್ರಿಯ ವಿಜ್ಞಾನ ಭವನದಲ್ಲಿ ಆಕಾಶವಾಣಿ ಕೇಂದ್ರಗಳ ಅರೆಕಾಲಿಕ ವರದಿಗಾರರಿಗೆ ಇಂದು ಒಂದು ದಿನದ ಪುನಶ್ಚೇತನ ಕಾರ್ಯಾಗಾರವನ್ನು ಏರ್ಪಡಿಸಲಾಗಿತ್ತು.

ಆಲ್ ಇಂಡಿಯಾ ರೇಡಿಯೋ (AIR) ಮತ್ತು ಮೈಸೂರು ವಿಶ್ವವಿದ್ಯಾನಿಲಯದ ಪತ್ರಿಕೋದ್ಯಮ ಸಂವಹನ ವಿಭಾಗದ ಸಂಯುಕ್ತಾಶ್ರಯದಲ್ಲಿ ಆಯೋಜಿಸಿದ್ದ ದಕ್ಷಿಣ ವಲಯ ಪುನಶ್ಚೇತನ ಕಾರ್ಯಾಗಾರವನ್ನು ಆಕಾಶವಾಣಿಯ ಪ್ರಧಾನ ಮಹಾ ನಿರ್ದೇಶಕಿ ಡಾ. ವಸುಧಾ ಗುಪ್ತ ಉದ್ಘಾಟಿಸಿದರು. ನಂತರ ಆಕಾಶವಾಣಿ ಕೇಂದ್ರಗಳ ಅರೆಕಾಲಿಕ ಪ್ರತಿನಿಧಿಗಳನ್ನುದ್ದೇಶಿಸಿ ಮಾತನಾಡಿದ ಅವರು, ಲೋಕಸಭಾ ಚುನಾವಣೆ ಸಮೀಪಿಸುತ್ತಿರುವ ಹಿನ್ನೆಲೆಯಲ್ಲಿ ಸುದ್ದಿ, ಮಾಹಿತಿ ನೀಡುವಾಗ ನಿಖರತೆ ಮತ್ತು ವಿಶ್ವಾಸಾರ್ಹತೆಯನ್ನು ಗಮನದಲ್ಲಿರಿಸಿಕೊಂಡು ಕಾರ್ಯ ನಿರ್ವಹಿಸಬೇಕು ಎಂದರು.

ತಮ್ಮ ಸಮೀಪದ ಆಕಾಶವಾಣಿ ಕೇಂದ್ರಗಳಲ್ಲಿ ಇಂಟರ್ನೆಟ್, ವೆಬ್‌ಸೈಟ್ ಸೌಲಭ್ಯಗಳನ್ನು ಸಮರ್ಪಕವಾಗಿ ಬಳಸಿಕೊಂಡು ಸ್ಥಳೀಯ ಸರ್ಕಾರಿ ಸಂಸ್ಥೆ ಪ್ರಾಧಿಕಾರದ ಮುಖ್ಯಸ್ಥರುಗಳಿಂದ ಪಡೆದ ಖಚಿತ ಹಾಗೂ ಅಧಿಕೃತ ಸುದ್ದಿಗಳನ್ನು



ಪೂರೈಸಬೇಕು. ರಾಜಕೀಯ ಪಕ್ಷಗಳು, ರಾಜಕೀಯ ವ್ಯಕ್ತಿಗಳು ನೀಡಿದ ಹೇಳಿಕೆಗಳನ್ನು ರೆಕಾರ್ಡ್ ಮಾಡಿಕೊಂಡು ಜವಾಬ್ದಾರಿಯುತವಾಗಿ ಕಾರ್ಯ ನಿರ್ವಹಿಸುವಂತೆಯೂ ಸಲಹೆ ನೀಡಿದರು.

ಸೃಜನಾತ್ಮಕ ಚಿಂತನೆ ಜೊತೆಗೆ ಸುದ್ದಿಯ ಅಂಶಗಳನ್ನು ತಲುಪಿಸುವಾಗಲೂ ಎಚ್ಚರಿಕೆ ವಹಿಸುವುದು ಮುಖ್ಯ. ಪ್ರಸಕ್ತ ಸನ್ನಿವೇಶದಲ್ಲಿ ಮುದ್ರಣ, ವಿದ್ಯುನ್ಮಾನ ಮಾಧ್ಯಮ ಹಾಗೂ ಸಾಮಾಜಿಕ ಜಾಲತಾಣಗಳೂ ಪರಿಣಾಮಕಾರಿಯಾಗಿ ಸಕ್ರಿಯವಾಗಿರುವುದರಿಂದ ಸ್ಪರ್ಧೆ ಮತ್ತು ಸವಾಲುಗಳನ್ನು ಎದುರಿಸಲು ಸಜ್ಜಾಗಬೇಕೆಂದು ಡಾ.ವಸುಧಾ ಗುಪ್ತ ತಿಳಿಸಿದರು.

ಆಕಾಶವಾಣಿ ಉಪ ಮಹಾ ನಿರ್ದೇಶಕ ಅನಿಲ್ ಕುಮಾರ್ ಮಂಗಲ್ಲಿ, ನೇಹಾಸ್ವಾಮಿ, ಬೆಂಗಳೂರಿನ ಪ್ರೆಸ್ ಇನ್‌ಫರ್ಮೇಷನ್ ಬ್ಯೂರೋ ಹೆಚ್ಚುವರಿ ಮಹಾ ನಿರ್ದೇಶಕ ಎಸ್.ಜಿ.ರವೀಂದ್ರ ಹಾಗೂ ಮೈಸೂರು ವಿಶ್ವವಿದ್ಯಾನಿಲಯ ಪತ್ರಿಕೋದ್ಯಮ ವಿಭಾಗದ ಮುಖ್ಯಸ್ಥೆ ಪ್ರೊ. ಸಪ್ನ ಕಾರ್ಯಾಗಾರದಲ್ಲಿ ಪಾಲ್ಗೊಂಡು ಮಾತನಾಡಿದರು.

ನಂತರ ನಡೆದ ಗೋಷ್ಠಿಗಳಲ್ಲಿ ಮಾದರಿ ನೀತಿ ಸಂಹಿತೆ ಮತ್ತು ಸ್ವೀಪ್, ಪತ್ರಿಕೋದ್ಯಮ ಧರ್ಮ ಪಾಲನೆ ಕುರಿತಂತೆ ಸಂಪನ್ಮೂಲ ವ್ಯಕ್ತಿಗಳು ಉಪನ್ಯಾಸ ನೀಡಿದರು. ದಕ್ಷಿಣ ಭಾರತದ ಕರ್ನಾಟಕ, ತಮಿಳುನಾಡು, ಪುದುಚೇರಿ ಮತ್ತು ಕೇರಳ ರಾಜ್ಯಗಳ ಆಕಾಶವಾಣಿ ಕೇಂದ್ರಗಳಿಂದ ಅರೆಕಾಲಿಕ ಪ್ರತಿನಿಧಿಗಳು ಕಾರ್ಯಾಗಾರದಲ್ಲಿ ಪಾಲ್ಗೊಂಡಿದ್ದರು.

ನೀರಿನ ಸಮಸ್ಯೆ ಪರಿಹರಿಸಲು ಒತ್ತಾಯ

ಮೈಸೂರು: ಶ್ರೀರಾಂಪುರ 2ನೇ ಹಂತದ ವಾರ್ಡ್ ನಂ.65ರ ವ್ಯಾಪ್ತಿ ಹಾಗೂ ಅಶೋಕಪುರಂ ರೈಲ್ವೆ ನಿಲ್ದಾಣ ಎದುರಿನ ನಿವಾಸಿಗಳಿಗೆ ಅಸಮರ್ಪಕ ನೀರು ಪೂರೈಕೆಯಿಂದ ತೊಂದರೆಯಾಗುತ್ತಿದೆ. ಅಸಮರ್ಪಕ ನೀರು ಪೂರೈಕೆಯಿಂದ ಇಲ್ಲಿನ ನಿವಾಸಿಗಳಿಗೆ ಪ್ರತಿನಿತ್ಯ ಸಮಸ್ಯೆ ತಪ್ಪಿದಲ್ಲ. ಆದ್ದರಿಂದ ಸಂಬಂಧಪಟ್ಟ ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಹಾಗೂ ಶ್ರೀರಾಂಪುರ ಪಟ್ಟಣ ಪಂಚಾಯಿತಿ ಮುಖ್ಯಾಧಿಕಾರಿ ಇತ್ತಕಡೆ ಗಮನಹರಿಸಿ ಶಾಶ್ವತವಾಗಿ ನೀರಿನ ಸಮಸ್ಯೆ ಪರಿಹರಿಸಬೇಕು ಎಂದು ಶ್ರೀರಾಂಪುರ 2ನೇ ಹಂತದ ನಿವಾಸಿ ಸಜಿಮನ್ ಜೋಸೆಫ್ ಒತ್ತಾಯಿಸಿದ್ದಾರೆ.

ಇನ್‌ಸ್ಟಿಟ್ಯೂಟ್ ಆಫ್ ಇಂಜಿನಿಯರ್ಸ್ ಆವರಣದಲ್ಲೇ ಗಂಧದ ಮರ ಕಳವು

ಮೈಸೂರು:ನಗರದ ಜೆ.ಎಲ್.ಬಿ.ರಸ್ತೆಯಲ್ಲಿರುವ ಇನ್‌ಸ್ಟಿಟ್ಯೂಟ್ ಆಫ್ ಇಂಜಿನಿಯರ್ಸ್ ಸಂಸ್ಥೆ ಆವರಣದಲ್ಲಿ ಬೆಳೆದಿದ್ದ ಗಂಧದ ಮರವನ್ನು ರಾತ್ರೋರಾತ್ರಿ ಕದ್ದೊಯ್ದಿರುವ ಘಟನೆ ಬೆಳಕಿಗೆ ಬಂದಿದೆ. ಗಂಧದ ಮರವನ್ನು ಕಡಿದಿರುವ ದುಷ್ಕರ್ಮಿಗಳು ಬುಡ ಹಾಗೂ ಕೊಂಬೆಗಳನ್ನ ಬಿಟ್ಟು ಕಾಂಡದ ಭಾಗವನ್ನು ಕದ್ದೊಯ್ದಿದ್ದಾರೆ. ಘಟನೆ ತಿಳಿದು ಸ್ಥಳಕ್ಕೆ ಭೇಟಿ ನೀಡಿರುವ ಅರಣ್ಯ ಇಲಾಖೆ ಅಧಿಕಾರಿಗಳು ಪರಿಶೀಲನೆ ನಡೆಸಿದ್ದಾರೆ.

ಎಸ್‌ಡಿಎಂ– ಐಎಂಡಿ ಸಂಶೋಧನಾ ವಿದ್ಯಾರ್ಥಿಗಳಿಗೆ ಪಿಹೆಚ್‌ಡಿ ಪದವಿ



ರಾಜೀವ್ ಯು. ಕಳೇಬರ್



ಆರ್.ಟಿ.ನಟರಾಜ್



ಎಂ.ಆರ್.ವಿಶ್ವನಾಥ್

ಮೈಸೂರು, ಅ. 28–ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಇನ್‌ಸ್ಟಿಟ್ಯೂಟ್ ಫಾರ್ ಮ್ಯಾನೇಜ್ಮೆಂಟ್ ಡೆವಲಪ್ಮೆಂಟ್ ಸಂಸ್ಥೆಯು ಸಂಶೋಧನಾ ಕೇಂದ್ರವೆಂದು ಮೈಸೂರು ವಿಶ್ವವಿದ್ಯಾನಿಲಯದಿಂದ ಅಂಗೀಕರಿಸಲ್ಪಟ್ಟಿದೆ. ಈ ಕೇಂದ್ರದ ಮೂವರು ಸಂಶೋಧನಾ ವಿದ್ಯಾರ್ಥಿಗಳಿಗೆ, ಇತ್ತೀಚೆಗೆ ನಡೆದ ಮೈಸೂರು ವಿಶ್ವವಿದ್ಯಾನಿಲಯದ 103ನೇ ವಾರ್ಷಿಕ ಘಟಿಕೋತ್ಸವದಲ್ಲಿ ರಾಜೀವ್ ಯು. ಕಳೇಬರ್, ಆರ್.ಟಿ. ನಟರಾಜ್ ಮತ್ತು ಎಂ.ಆರ್.ವಿಶ್ವನಾಥ್ ಅವರಿಗೆ ಡಾಕ್ಟರೇಟ್ ಪದವಿಯನ್ನು ಪ್ರದಾನ ಮಾಡಲಾಯಿತು.

ಪ್ರಾಮಾಣಿಕತೆ, ಧೈರ್ಯ ಹೋರಾಟ ಮಾಡಿದರೆ ಇಡೀ ವ್ಯವಸ್ಥೆ ನಿಮ್ಮೊಂದಿಗೆ ನಿಲ್ಲುತ್ತದೆ

- ನಿವೃತ್ತ ಡಿಜಿಪಿ ಡಾ.ರವೀಂದ್ರನಾಥ್ ಅಭಿಮತ
- ಪೊಲೀಸ್ ಇಲಾಖೆಯಲ್ಲಿ ಸಾಧಕರು ನಿಜವಾಗಿಯೂ 'ಪೇದೆಗಳು'!

ಮೈಸೂರು, ಅ.28–ಸಮಸ್ಯೆ, ಸವಾಲು ಎದುರಿಸಿ ಕೆಲಸ ಮಾಡಲು ಮನೋಧೈರ್ಯ ಮುಖ್ಯ ಎಂದು ನಿವೃತ್ತ ಡಿಜಿಪಿ ಡಾ.ಪಿ. ರವೀಂದ್ರನಾಥ್ ಹೇಳಿದರು.

ವಿಶ್ವಮಾನವ ಮೈಸೂರು ವಿಶ್ವವಿದ್ಯಾನಿಲಯ ನೌಕರರ ವೇದಿಕೆಯು ಶುಕ್ರವಾರ ಯುವರಾಜ ಕಾಲೇಜು ಅಮೃತ ಮಹೋತ್ಸವ ಸಭಾಂಗಣದಲ್ಲಿ ಏರ್ಪಡಿಸಿದ್ದ ವಾಲ್ಮೀಕಿ ಜಯಂತಿ ಹಾಗೂ ಬೀಳ್ಕೊಡುಗೆ ಸಮಾರಂಭದಲ್ಲಿ ಸನ್ಮಾನ ಸ್ವೀಕರಿಸಿ ಮಾತನಾಡಿದರು.

ನಮ್ಮ ತಂದೆ ವಕೀಲರಾಗಿದ್ದರು. ಅವರು ತಮ್ಮ ಬಳಿ ಬರುವ ಬಡವರಿಗೆ ಸಹಾಯ ಮಾಡುತ್ತಿದ್ದರು. ನಾನು ಎಂಬಿಬಿಎಸ್ ಓದಿ, ರೈಲ್ವೆ ಆಸ್ಪತ್ರೆಯಲ್ಲಿ ವೈದ್ಯನಾಗಿದ್ದೆ. ಅಲ್ಲಿಗಿಂತ ಇನ್ನೂ ಹೆಚ್ಚಿನ ಬಡವರಿಗೆ ನೆರವಾಗಬಹುದು ಎಂದು ಯುಪಿಎಸ್ಸಿ ಪರೀಕ್ಷೆ ಬರೆದೆ, ಒಂದೇ ವರ್ಷದಲ್ಲಿ ಐಪಿಎಸ್ ಕರ್ನಾಟಕ ಕೇಡರ್‌ಗೆ ಆಯ್ಕೆಯಾದೆ. ರಾಜ್ಯದಲ್ಲಿ 34 ವರ್ಷ ಸೇವೆ ಸಲ್ಲಿಸಿ, ಇತ್ತೀಚೆಗೆ ನಿವೃತ್ತನಾದೆ. ನಾನು ಕೆಲಸ ಮಾಡುವಾಗ ಹಲವಾರು ಸಮಸ್ಯೆಗಳು ಹಾಗೂ ಸವಾಲುಗಳು ಬಂದವು. ಎಲ್ಲವನ್ನು ಮನೋಧೈರ್ಯದಿಂದ ಎದುರಿಸಿದೆ ಎಂದರು.

ಪ್ರಾಮಾಣಿಕತೆ ಮತ್ತು ಧೈರ್ಯದಿಂದ ಹೋರಾಟ ಮಾಡಿದರೆ ವ್ಯವಸ್ಥೆ ನಿಮ್ಮೊಂದಿಗೆ ಬರುತ್ತದೆ. ಪರಿಸ್ಥಿತಿ ಬದಲಾಗುತ್ತದೆ. ಗುರಿ ಇಟ್ಟುಕೊಂಡು ಪ್ರಾಮಾಣಿಕತೆಯಿಂದ ಕೆಲಸ ಮಾಡಬೇಕು. ಅದರ ಹಿಂದೆ ಹೋಗಬಾರದು. ಗುರಿ, ಶ್ರಮ, ಸರಳತೆ, ಪ್ರಾಮಾಣಿಕತೆ ಇದ್ದರೆ



ಎಲ್ಲವೂ ಸಾಧ್ಯ ಎಂದು ಅವರು ಹೇಳಿದರು.

ಒಬ್ಬ ವ್ಯಕ್ತಿಯಾಗಿ ಕೆಲಸ ಕಡಿಮೆ. ಆದರೆ ಸಂಘಟಿತವಾಗಿ ಮಾಡಿದರೆ ಶಕ್ತಿ ಬರುತ್ತದೆ. ಸಮಾನಮನಸ್ಕರೊಂದಿಗೆ ಸೇರಿ ಒಗ್ಗಟ್ಟಿನಿಂದ ಕೆಲಸ ಮಾಡಿ. ನನ್ನ ಪ್ರಕಾರ ಪೊಲೀಸ್ ಇಲಾಖೆಯಲ್ಲಿ ಪೇದೆಗಳೇ ಸಾಧಕರು. ಕೆಳಸ್ತರದಲ್ಲಿ ಕೆಲಸ ಮಾಡುವ ಅವರಿಗೆ ಧೈರ್ಯ ತುಂಬಿ, ಶಕ್ತಿ ತುಂಬಿ ಎಂದು ಅವರು ಕರೆ ನೀಡಿದರು.

ಡಾ.ಬಿ.ಆರ್. ಅಂಬೇಡ್ಕರ್ ಅವರು ರೂಪಿಸಿರುವ ನಮ್ಮ ಸಂವಿಧಾನ ಶ್ರೇಷ್ಠವಾದುದು. ಅದನ್ನು ಜಾರಿ ಮಾಡುವ ರೀತಿಯಲ್ಲಿ ಕೆಲಸ ಮಾಡಬೇಕು. ಕಾನೂನಿನ ಬಗ್ಗೆ ಅರಿವು ಮೂಡಿಸಬೇಕು. ನೀವು ಒಂಟಿಯಾದರೆ ವರ್ಗಾವಣೆ ಮಾಡಬಹುದು. ಆದ್ದರಿಂದ ಸಂಘಟಿತರಾಗಿ ಕೆಲಸ ಮಾಡುವುದೇ ಸರಿಯಾದ ಮಾರ್ಗ ಎಂದು ಅವರು ಅಭಿಪ್ರಾಯಪಟ್ಟರು.

ಇದೇ ತಿಂಗಳು 31 ರಂದು ನಿವೃತ್ತರಾಗಲಿರುವ ಮಹಾರಾಜ ಕಾಲೇಜಿನ ಪ್ರಾಂಶುಪಾಲ ಪ್ರೊ.ಸಿ.ಎ. ಶ್ರೀಧರ ಸನ್ಮಾನ ಸ್ವೀಕರಿಸಿ ಮಾತನಾಡಿ, ಜೀವನ ಸಮತಟ್ಟುವಾದುದಲ್ಲ. ಕಲ್ಲು, ಮುಳ್ಳಿನ ಹಾದಿ. ಶ್ರದ್ಧೆಯಿಂದ ಜೀವನ ಸಾಗಿಸಬೇಕು. ಪ್ರತಿಯೊಬ್ಬರು ಗುರಿ ಇಟ್ಟುಕೊಂಡು ಆತ್ಮಸಾಕ್ಷಿಯಾಗಿ ಕಾಯಾ–ವಾಚಾ–ಮನಸಾ ಕೆಲಸ ಮಾಡಬೇಕು ಎಂದು ಸಲಹೆ ಮಾಡಿದರು.

ಯುವರಾಜ ಕಾಲೇಜಿನಲ್ಲಿ ಓದಿ, ನಂತರ ಬೇರೆ ಬೇರೆ ಪದವಿ ಪಡೆದು ಮೈಸೂರು ವಿವಿಯಲ್ಲಿಯೇ ಅಧ್ಯಾಪಕನಾಗಿ ಲಲಿತಕಲಾ ಕಾಲೇಜು, ಮಹಾರಾಜ ಕಾಲೇಜಿನಲ್ಲಿ ಪ್ರಾಂಶುಪಾಲನಾಗಿ ಕೆಲಸ ಮಾಡುವ ಸುಯೋಗ ಶಾರದಾ ಮಾತೆಯ ದಯೆಯಿಂದ ದೊರೆತಿದೆ ಎಂದು ಅವರು ಹೇಳಿದರು.

ಡಾ.ಪಿ. ರವೀಂದ್ರನಾಥ್ ಅವರನ್ನು ಸನ್ಮಾನಿಸಿದ ನಗರ ಪೊಲೀಸ್ ಆಯುಕ್ತ ರಮೇಶ್ ಬಾನೋತ್ ಮಾತನಾಡಿ, ನನ್ನ ಈವರೆಗಿನ ಸೇವೆಯಲ್ಲಿ ಕಂಡ ಅತ್ಯಂತ ಪ್ರಾಮಾಣಿಕ ಅಧಿಕಾರಿ ರವೀಂದ್ರನಾಥ್ ಅವರಾಗಿದ್ದು, ಇತರರಿಗೆ ಮಾದರಿಯಾಗಿದ್ದಾರೆ ಎಂದರು. ಪ್ರಾಚ್ಯ ವಿದ್ಯಾ ಸಂಶೋಧನಾಲಯದ ನಿವೃತ್ತ ನಿರ್ದೇಶಕ ಪ್ರೊ.ಎಸ್. ಶಿವರಾಜಪ್ಪ ಮಾತನಾಡಿ, ವಾಲ್ಮೀಕಿಯವರು ರಚಿಸಿದ ರಾಮಾಯಣ ಚಿರಸ್ಥಾಯಿಯಾಗಿದೆ ಎಂದರು

ದಕ್ಷತೆ, ಧೀಮಂತಿಕೆ ಕಡಿಮೆಯಾಗುತ್ತಿರುವ ದಿನಗಳಲ್ಲಿ ಡಾ.ಪಿ. ರವೀಂದ್ರನಾಥ್ ಅವರಂಥ ಅಧಿಕಾರಿಗಳು ಯುವಕರಿಗೆ ಪ್ರೇರಣೆಯಾಗಿದ್ದಾರೆ. ಪ್ರೊ.ಸಿ.ಎ. ಶ್ರೀಧರ ಅವರು ಸಂಗೀತ, ಸಾಹಿತ್ಯಕ್ಕೆ ತಮ್ಮದೇ ಆದ ಕೊಡುಗೆ ನೀಡಿ, ಅರಮನೆ– ಗುರುಮನೆಗೆ ಬೇಕಾದವರಾಗಿದ್ದಾರೆ. ಶ್ರಮದಿಂದ ಸಾಧನೆ ಮಾಡಬಹುದು. ಯಶಸ್ಸು ಸಿಗುತ್ತದೆ ಎಂಬುದಕ್ಕೆ ಈ ಇಬ್ಬರು ನಿದರ್ಶನ ಎಂದರು.

ಮುಖ್ಯ ಅತಿಥಿಗಳಾಗಿದ್ದ ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್, ಮೈಸೂರು ವಕೀಲರ ಸಂಘದ ಕಾರ್ಯದರ್ಶಿ ಎಸ್. ಉಮೇಶ್, ಮಾನಸ ಗಂಗೋತ್ರಿ ಸಮಾಜ ಕಾರ್ಯ ವಿಭಾಗದ ಮುಖ್ಯಸ್ಥೆ ಡಾ.ಎಚ್.ಪಿ. ಜ್ಯೋತಿ, ನಿವೃತ್ತ ಡಿಸಿಪಿ ಶಿವರಾಜ್ ಮಾತನಾಡಿದರು. ಮೈಸೂರು ವಿವಿ ಸಂಜೆ ಕಾಲೇಜಿನ ಪ್ರಾಂಶುಪಾಲ ಪ್ರೊ.ಎಚ್. ಸೋಮಶೇಖರಪ್ಪ ಅಧ್ಯಕ್ಷತೆ ವಹಿಸಿದ್ದರು. ಶೈಲಜಾ ಶ್ರೀಧರ್ ಉಪಸ್ಥಿತರಿದ್ದರು.

ಮಹಾರಾಣಿ ವಿಜ್ಞಾನ ಕಾಲೇಜಿನ ಇಂಗ್ಲೀಷ್ ಸಹಾಯಕ ಪ್ರಾಧ್ಯಾಪಕ ವಿ.ಆರ್.ರಮೇಶ್ ಬಾಬು ನಿರೂಪಿಸಿದರು. ಸಂಜೆ ಕಾಲೇಜಿನ ಸಮಾಜಶಾಸ್ತ್ರ ಉಪನ್ಯಾಸಕಿ ಡಾ.ಬಿ.ಎಸ್. ದಿನಮಣಿ ಸ್ವಾಗತಿಸಿದರು. ವೇದಿಕೆಯ ಅಧ್ಯಕ್ಷ ಬಿ. ವಾಸುದೇವ ನೇತೃತ್ವ ವಹಿಸಿದ್ದರು. ಡಾ.ಆರ್. ನಿಂಗರಾಜು, ಡಾ.ಮಧುಸೂದನ್ ಪೂರೀಗಾಲಿ ಪ್ರಾರ್ಥಿಸಿದರು.

ವೇದಿಕೆಯ ಉಪಾಧ್ಯಕ್ಷ ಭಾಸ್ಕರ್, ಕಾರ್ಯದರ್ಶಿ ವಿನೋದ್, ಸಹ ಕಾರ್ಯದರ್ಶಿ ಯೋಗೇಶ್, ಸಂಚಾಲಕ ವಿವೇಕ್, ಖಜಾಂಚಿ ಶಿವಕುಮಾರ್, ನಿರ್ದೇಶಕರಾದ ನವೀನ್‌ಕುಮಾರ್, ಗಣೇಶ್, ಮಧುಸೂದನ್, ಲೋಕೇಶ್, ಚಿದಾನಂದ, ವಿಜಯಕುಮಾರ್, ಅಭಿಷೇಕ್, ರಿಷಿರಾಜ್, ಮಂಜು ಆರ್.ಗೌಡ, ಅಖಿಲೇಷ್ ಗೌಡ, ಬಿ.ಎಸ್. ಚೇತನ್ ಇದ್ದರು.

ವಿಶ್ವಗುರು ಮಹರ್ಷಿ ವಾಲ್ಮೀಕಿ ಸ್ಮರಣೆ

ವಾಲ್ಮೀಕಿ ಆದರ್ಶ ಗುಣಗಳನ್ನು ಮೈಗೂಡಿಸಿಕೊಳ್ಳಲು ಎಸ್‌ಪಿ ಕೆ.ರಾಮರಾಜನ್ ಕರೆ



ಮಡಿಕೇರಿ, ಅ.28– ವಿಶ್ವದ ಗುರುವಾದ ಮಹರ್ಷಿ ವಾಲ್ಮೀಕಿ ಅವರ ಆದರ್ಶ ಗುಣಗಳನ್ನು ಪ್ರತಿಯೊಬ್ಬರೂ ಮೈಗೂಡಿಸಿಕೊಳ್ಳಬೇಕು ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೆ.ರಾಮರಾಜನ್ ಕರೆ ನೀಡಿದ್ದಾರೆ.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಹಾಗೂ ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆಗಳ ಸಂಯುಕ್ತ ಆಶ್ರಯದಲ್ಲಿ ನಗರದ ಕಾವೇರಿ ಕಲಾಕ್ಷೇತ್ರದಲ್ಲಿ ಶನಿವಾರ ನಡೆದ ಮಹರ್ಷಿ ವಾಲ್ಮೀಕಿ ಜಯಂತಿ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಅವರು ಮಾತನಾಡಿದರು.

ಮಹರ್ಷಿ ವಾಲ್ಮೀಕಿ ಅವರು ಸಾವಿರಾರು ವರ್ಷಗಳ ಹಿಂದೆಯೇ ರಾಮಾಯಣ ಬರೆಯುವ ಮೂಲಕ ಬುದ್ಧಿವಂತಿಕೆ ಪ್ರದರ್ಶನ ಮಾಡಿದ್ದಾರೆ. ಮಹರ್ಷಿ ವಾಲ್ಮೀಕಿ ಅವರು ತೋರಿರುವ ದಾರಿಯಲ್ಲಿ ನಡೆಯಬೇಕು. ಇಡೀ ದಕ್ಷಿಣ ಏಷ್ಯಾದಲ್ಲಿಯೇ ವಾಲ್ಮೀಕಿ ರಾಮಾಯಣ ಕಥೆಗಳನ್ನು ಅಧ್ಯಯನ ಮಾಡಬಹುದಾಗಿದೆ ಎಂದು ಕೆ.ರಾಮರಾಜನ್ ನುಡಿದರು.

ಬುದ್ಧಿವಂತಿಕೆ ಯಾರ ಸೊತ್ತಲ್ಲ. ಅವಕಾಶಗಳು ಒಂದೊಂದು ರೀತಿ ಸಿಕ್ಕಿರುತ್ತವೆ. ಅದರಂತೆ ಅವರು ಮೇಲೆ ಬಂದಿರುತ್ತಾರೆ. ಅವಕಾಶ ವಂಚಿತರಿಗೆ ಅವಕಾಶಗಳೇ ಲಭ್ಯವಾಗುವುದಿಲ್ಲ. ಸಮಾಜದಲ್ಲಿ ಎಲ್ಲರಿಗೂ ಅವಕಾಶಗಳು ಸಿಗುವಂತಾಗಬೇಕು ಎಂದು ಅವರು ಪ್ರತಿಪಾದಿಸಿದರು.

ಜಿ.ಪಂ.ಸಿಇಒ ವರ್ಣಿತ್ ನೇಗಿ ಅವರು ಮಾತನಾಡಿ, ಮಹರ್ಷಿ ವಾಲ್ಮೀಕಿ ಅವರ ಜೀವನ ಚರಿತ್ರೆಯನ್ನು ರಾಮಾಯಣದ ಮೂಲಕ ಎಲ್ಲೆಡೆ ಕಾಣಬಹುದಾಗಿದೆ. ಅವರ ಆದರ್ಶ ಗುಣಗಳು ಇಂದಿಗೂ ಸಹ ಮಾದರಿಯಾಗಿದೆ ಎಂದರು.

ಹೆಚ್ಚುವರಿ ಜಿಲ್ಲಾಧಿಕಾರಿ ಬಿ.ಎನ್.ವೀಣಾ ಮಾತನಾಡಿ, ವಾಲ್ಮೀಕಿ ಅವರ ಮೂಲ ರಾಮಾಯಣ ಮಹತ್ವದ್ದಾಗಿದೆ. ಭಾರತೀಯರೆಲ್ಲರೂ ಸಹ ರಾಮಾಯಣ ಮತ್ತು ಮಹಾಭಾರತವನ್ನು ಅಧ್ಯಯನ ಮಾಡುವಂತಾಗಬೇಕು. ಶ್ರೀರಾಮನನ್ನು ವ್ಯಕ್ತಿಯಾಗಿ ನೋಡುವುದಲ್ಲ. ವ್ಯಕ್ತಿತ್ವವಾಗಿ ನೋಡುತ್ತೇವೆ. ಸಮಾಜದಲ್ಲಿ ಇತರರೊಂದಿಗೆ ಹೇಗೆ ನಡೆದುಕೊಳ್ಳಬೇಕು ಎಂಬ ಬಗ್ಗೆ ವಾಲ್ಮೀಕಿ ರಾಮಾಯಣದಲ್ಲಿ ಕಾಣಬಹುದಾಗಿದೆ. ವಾಲ್ಮೀಕಿ ರಾಮಾಯಣ ಓದುವುದರಿಂದ ಹೆಚ್ಚಿನ ಜ್ಞಾನ ದೊರೆಯುತ್ತದೆ ಎಂದು ತಿಳಿಸಿದರು.

ಫೀಲ್ಡ್ ಮಾರ್ಷಲ್ ಕೆ.ಎಂ.ಕಾರ್ಯಪ್ಪ ಕಾಲೇಜಿನ ಪ್ರಾಧ್ಯಾಪಕರಾದ ಡಾ.ಶ್ರೀಧರ ಆರ್.ಹೆಗಡೆ ಅವರು ಮಾತನಾಡಿ, ರಾಮಾಯಣ ಮಹಾಗ್ರಂಥದಲ್ಲಿ ಭಾರತೀಯ ಸಂಸ್ಕೃತಿಯನ್ನು ಪ್ರತಿಬಿಂಬಿಸುತ್ತದೆ ಎಂದರು. ವಾಲ್ಮೀಕಿ ಸಮಾಜದ ಜಿಲ್ಲಾಧ್ಯಕ್ಷರಾದ ಅಶೋಕ್ ಅವರು ಮಾತನಾಡಿ ಕೊಡಗು ಜಿಲ್ಲೆಯ ಎಲ್ಲಿಯಾದರೂ ಮಹರ್ಷಿ ವಾಲ್ಮೀಕಿಯವರ ಪ್ರತಿಮೆಯನ್ನು ನಿರ್ಮಿಸಬೇಕು ಎಂದು ಕೋರಿದರು.

ಆದಿವಾಸಿ ಜನರ ಏಳಿಗೆಗಾಗಿ ಶ್ರಮಿಸಿದ ಜೆ.ಪಿ.ರಾಜು ಅವರನ್ನು ಇದೇ ಸಂದರ್ಭದಲ್ಲಿ ಸನ್ಮಾನಿಸಲಾಯಿತು. ನೀಟ್ ಪರೀಕ್ಷೆಯಲ್ಲಿ ಹೆಚ್ಚು ಅಂಕ ಪಡೆದು ವೈದ್ಯಕೀಯ ಪದವಿ ಪ್ರವೇಶ ಪಡೆದಿರುವ ರೋಹನ್ ಸುರೇಶ್ ಅವರನ್ನು ಗೌರವಿಸಲಾಯಿತು. ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿಯಲ್ಲಿ ಹೆಚ್ಚು ಅಂಕ ಪಡೆದ ಪರಿಶಿಷ್ಟ ವರ್ಗಗಳ ವಿದ್ಯಾರ್ಥಿಗಳನ್ನು ಸನ್ಮಾನಿಸಲಾಯಿತು.

ಅಂತರ್ಜಾತಿ ವಿವಾಹಿತರಿಗೆ 3 ಲಕ್ಷ ರೂ. ಪ್ರೋತ್ಸಾಹ ಧನದ ಚೆಕ್ ವಿತರಿಸಲಾಯಿತು. ಹಾಗೆಯೇ ಕಾನೂನು ಪದವಿ ಪಡೆದು ಎರಡು ವರ್ಷಗಳ ಕಾಲ ತರಬೇತಿ ಪಡೆಯಲು ಪರಿಶಿಷ್ಟ ವರ್ಗದ ಕಾನೂನು ಪದವೀಧರರಿಗೆ ಆದೇಶ ಪತ್ರ ನೀಡಲಾಯಿತು. ಚೆನ್ನಂಗಿ ಬಸವನಹಳ್ಳಿ ಸರ್ಕಾರಿ ವಸತಿ ಶಾಲೆಯ ಮತ್ತು ಮರೂರು ತಿತಿಮತಿ ವಸತಿ ಶಾಲೆಯ ವಿದ್ಯಾರ್ಥಿಗಳು ಇದೇ ಸಂದರ್ಭದಲ್ಲಿ ನೃತ್ಯ ಪ್ರದರ್ಶನ ಮಾಡಿದರು.

ಸಮಗ್ರ ಗಿರಿಜನ ಅಭಿವೃದ್ಧಿ ಯೋಜನಾ ಇಲಾಖೆಯ ಯೋಜನಾ ಸಮನ್ವಯಾಧಿಕಾರಿ ಎಸ್.ಹೊನ್ನೇಗೌಡ, ಸಮಾಜ ಕಲ್ಯಾಣ ಇಲಾಖೆಯ ಉಪ ನಿರ್ದೇಶಕರಾದ ಶೇಖರ್, ತಹಶೀಲ್ದಾರ್ ಪ್ರವೀಣ್ ಕುಮಾರ್, ಆದಿವಾಸಿ ಪ್ರಮುಖರಾದ ಕುಡಿಯರ ಮುತ್ತಪ್ಪ, ಮಿಟ್ಟು ರಂಜತ್, ಮುತ್ತಮ್ಮ, ಆರ್.ಕೆ.ಚಂದ್ರು, ಜೆ.ಪಿ.ರಾಜು, ಇತರರು ಇದ್ದರು.

ಸಭಾ ಕಾರ್ಯಕ್ರಮಕ್ಕೂ ಮೊದಲು ನಗರದ ಗಾಂಧಿ ಮಂಟಪದಲ್ಲಿ ಹೆಚ್ಚುವರಿ ಜಿಲ್ಲಾಧಿಕಾರಿ ಬಿ.ಎನ್.ವೀಣಾ ಅವರು ಮೆರವಣಿಗೆಗೆ ಚಾಲನೆ ನೀಡಿದರು. ಜಿಲ್ಲೆಯ ವಿವಿಧ ಗಿರಿಜನ ಆಶ್ರಮ ಶಾಲೆಯ ವಿದ್ಯಾರ್ಥಿಗಳು, ಶಿಕ್ಷಕರು, ಉಪನ್ಯಾಸಕರು, ಪ್ರಾಂಶುಪಾಲರು ಪಾಲ್ಗೊಂಡಿದ್ದರು. ಹುಣಸೂರಿನ ಡೊಳ್ಳು ಕುಣಿತ ಕಲಾ ತಂಡದ ಪ್ರದರ್ಶನ ಗಮನ ಸೆಳೆಯಿತು. ಗಾಂಧಿ ಮಂಟಪದಿಂದ ಜನರಲ್ ತಿಮ್ಮಯ್ಯ ವೃತ್ತ, ಮಂಗೇರಿರ ಮುತ್ತಣ್ಣ ವೃತ್ತದ ಮೂಲಕ ಕಾವೇರಿ ಕಲಾಕ್ಷೇತ್ರದವರೆಗೆ ಮೆರವಣಿಗೆ ನಡೆಯಿತು.

ಯುಎಇನಲ್ಲಿ ಕೊಡಗು ಅರೆ ಭಾಷೆ ಗೌಡ ಕುಟುಂಬದಿಂದ ಕೈಲ್ ಮುಹೂರ್ತ ಆಚರಣೆ



ಮಡಿಕೇರಿ, ಅ.28– ಯುನಿಟೆಡ್ ಅರಬ್ ಎಮಿರೇಟ್ಸ್ (ಯುಎಇ)ನಲ್ಲಿ ನೆಲೆಸಿರುವ ಕೊಡಗು ಅರೆ ಭಾಷೆ ಗೌಡ ಕುಟುಂಬದವರು ಇತ್ತೀಚೆಗೆ ಕೈಲ್ ಮುಹೂರ್ತವನ್ನು ಸಂಭ್ರಮ–ಸಡಗರದಿಂದ ಆಚರಿಸಿದರು.

ಯುಎಇಯ ಅಜ್ಮಾನ್ ಬೀಚ್ ಹೋಟೆಲ್‌ನಲ್ಲಿ ತಮ್ಮ ಕೊಡಗು ಅರೆ ಭಾಷೆ ಗೌಡ ಸಾಂಪ್ರದಾಯಿಕ ಉಡುಗೆಗಳನ್ನು ತೊಟ್ಟ ಕೊಡಗು ಅರೆ ಭಾಷೆ ಗೌಡ ಕುಟುಂಬದವರು ಎರಡನೇ ವರ್ಷದ ಕೈಲ್ ಮುಹೂರ್ತ ಹಬ್ಬವನ್ನು ಆಚರಿಸಿ ಸಂಭ್ರಮಿಸಿದರು.

ಉದ್ಯೋಗ ಮತ್ತು ವ್ಯಾಪಾರ ಸೇರಿದಂತೆ ವಿವಿಧ ಕಾರಣಗಳಿಂದ ಯುಎಇನಲ್ಲಿ ವಾಸಿಸುತ್ತಿರುವ ಕೊಡಗು ಅರೆ ಭಾಷೆ ಗೌಡ ಕುಟುಂಬದವರು ಒಂದೇ ಕಡೆ ಸೇರಿ ತಮ್ಮ ಸಾಂಪ್ರದಾಯಿಕ ಹಬ್ಬವನ್ನು ಆಚರಿಸಿಕೊಂಡು ಬರುತ್ತಿರುವುದು ವಿಶೇಷವಾಗಿದೆ. ಮೊದಲಿಗೆ ಆಯುಧ ಪೂಜೆಯೊಂದಿಗೆ ಹಬ್ಬವನ್ನು ಆರಂಭಿಸಲಾಯಿತು. ನಂತರ ಕ್ರೀಡಾ ಜ್ಯೋತಿ ಬೆಳಗಿಸಿ ಆಟೋಟ ಸ್ಪರ್ಧೆಗಳಿಗೆ ಚಾಲನೆ ನೀಡಲಾಯಿತು. ಕುಟುಂಬಸ್ಥರು ವಿವಿಧ ಸ್ಪರ್ಧೆಗಳಲ್ಲಿ ಪಾಲ್ಗೊಂಡು ಗಮನ ಸೆಳೆದರಲ್ಲದೆ, ಬಹುಮಾನ ತಮ್ಮದಾಗಿಸಿಕೊಂಡರು.

ಕೆಜಿಎಸ್ ಬೆಂಗಳೂರು ಅಧ್ಯಕ್ಷ ಕೇಕಡ ನಾಣಯ್ಯ, ಕುದುಕುಳಿ ಮಿಲನ ಭರತ್, ಕೋಳಿಬೈಲು ಡಾ. ಮೇಜರ್ ಕುಶ್ವಂತ್, ಸಂಗೀತ ನಿರ್ದೇಶಕ ಚರಣ್ ರಾಜ್ ಸೇರಿದಂತೆ ಅನೇಕರು ಕಾರ್ಯಕ್ರಮದಲ್ಲಿ ಪಾಲ್ಗೊಂಡು ಕುಟುಂಬಸ್ಥರಿಗೆ ಶುಭ ಹಾರೈಸಿದರು. ಈ ವೇಳೆ ಕೊಡಗು ಅರೆ ಭಾಷೆ ಗೌಡ ಕುಟುಂಬಗಳು ನಡೆಸಿಕೊಟ್ಟ ಸಾಂಸ್ಕೃತಿಕ ಕಾರ್ಯಕ್ರಮಗಳು ಅಮೋಘವಾಗಿತ್ತು. ಯುಎಇನಲ್ಲಿ ನೆಲೆಸಿರುವ ಎಲ್ಲಾ ಕೊಡಗು ಅರೆ ಭಾಷೆ ಗೌಡ ಕುಟುಂಬಗಳು ಈ ಹಬ್ಬದಲ್ಲಿ ಪಾಲ್ಗೊಂಡಿದ್ದವು.

ಅಚ್ಚಂಡಿರ ಆನೇರ, ಬೆಳ್ಯನ, ಕಡ್ಲೇರ, ಕಲ್ಲಂಬಿ, ಕರ್ಣಯ್ಯ, ಕತ್ರಿಕೊಲ್ಲಿ, ಕುದುಪಜೆ, ಕೊಂಪುಳಿರ ಮತ್ತು ಮೊಟ್ಟನ ಕುಟುಂಬಗಳು ಸೇರಿ ಈ ಹಬ್ಬವನ್ನು ಆಯೋಜಿಸಿ ಯಶಸ್ವಿಗೊಳಿಸಿದವು.

ಕಾರಿನ ಮೇಲೆ ಕಾಡಾನೆ ದಾಳಿ: ಕಾರು ಜಖಂ, ಮಾಲೀಕ ಪಾರು



ಕುಶಾಲನಗರ, ಅ.28– ಸಮೀಪದ ಗುಡ್ಡೆಹೊಸೂರು ಬಳಿಯ ಆನೆಕಾಡು ಮೀಸಲು ಅರಣ್ಯ ಪ್ರದೇಶ ವ್ಯಾಪ್ತಿಯ ರಾಷ್ಟ್ರೀಯ ಹೆದ್ದಾರಿಯಲ್ಲಿ ಗುರುವಾರ ರಾತ್ರಿ ಕಾರಿನಲ್ಲಿ ತೆರಳುತ್ತಿದ್ದ ವೇಳೆ ಕಾರಿನ ಮೇಲೆ ಏಕಾಏಕಿ ಕಾಡಾನೆ ಹಿಂಡು ದಾಳಿ ಮಾಡಿದ ಹಿನ್ನೆಲೆಯಲ್ಲಿ ಕಾರು ಸಂಪೂರ್ಣ ಜಖಂಗೊಂಡಿದ್ದು, ಅದೃಷ್ಟವಶಾತ್ ಕಾರಿನಲ್ಲಿದ್ದವರು ಪ್ರಾಣಾಪಾಯದಿಂದ ಪಾರಾದ ಘಟನೆ ನಡೆದಿದೆ.

ಬೈಲುಕೊಪ್ಪೆಯ ಸಿದ್ದಾರ್ಥ್ ಎಂಬವರಿಗೆ ಸೇರಿದ ಕಾರು ಕಾಡಾನೆ ದಾಳಿಗೆ ಸಿಲುಕಿ ಜಖಂಗೊಂಡಿದೆ. ಶುಕ್ರವಾರ ರಾತ್ರಿ ಕುಶಾಲನಗರದಿಂದ ಮಡಿಕೇರಿಯತ್ತ ತೆರಳುವಾಗ ಘಟನೆ ನಡೆದಿದೆ. ರಸ್ತೆ ದಾಟುತ್ತಿದ್ದ ಆರೇಳು ಕಾಡಾನೆಗಳ ಹಿಂಡಿನಿಂದ ಈ ದಾಳಿ ನಡೆದಿದೆ.ಈ ಕುರಿತು ಕುಶಾಲನಗರ ಗ್ರಾಮಾಂತರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಜೆಡಿಎಸ್ ರಾಜ್ಯಾಧ್ಯಕ್ಷರಾಗಿ ಪುನರಾಯ್ಕೆಯಾದ ಹೆಚ್.ಡಿ. ಕುಮಾರಸ್ವಾಮಿಗೆ ಅಭಿನಂದನೆ



ವಿರಾಜಪೇಟೆ, ಅ.28– ಜೆಡಿಎಸ್ ರಾಜ್ಯಾಧ್ಯಕ್ಷರಾಗಿ ಮತ್ತೆ ಆಯ್ಕೆಯಾಗಿರುವ ಹೆಚ್.ಡಿ.ಕುಮಾರಸ್ವಾಮಿ ಅವರನ್ನು ವಿರಾಜಪೇಟೆ ಕ್ಷೇತ್ರದ ಜೆಡಿಎಸ್ ಅಧ್ಯಕ್ಷ ಪಿ.ಎ. ಮಂಜುನಾಥ್ ಅವರು ತಮ್ಮ ಬೆಂಬಲಿಗರೊಂದಿಗೆ ಬೆಂಗಳೂರು ನಿವಾಸದಲ್ಲಿ ಭೇಟಿ ಮಾಡಿ ಅಭಿನಂದಿಸಿದರು.

ಬಳಿಕ ಮುಬರುವ ಲೋಕಸಭಾ ಚುನಾವಣೆ ಹಾಗೂ ಜಿಲ್ಲಾ ಮತ್ತು ತಾಲೂಕು ಪಂಚಾಯಿತಿ ಚುನಾವಣೆ ಬಗ್ಗೆ ಹಾಗೂ ಕೊಡಗಿನಲ್ಲಿ ಜೆಡಿಎಸ್ ಪಕ್ಷ ಸಂಘಟನೆ ಬಗ್ಗೆ ಚರ್ಚಿಸಿದ ಬಳಿಕ ಮಾತನಾಡಿದ ಕುಮಾರಸ್ವಾಮಿ ಅವರು ಮುಂದಿನ ದಿನಗಳಲ್ಲಿ ಕೊಡಗು ಜಿಲ್ಲೆಗೆ ಭೇಟಿ ನೀಡಿ ಎಲ್ಲಾ ಮುಖಂಡರು ಹಾಗೂ ಕಾರ್ಯಕರ್ತರೊಂದಿಗೆ ಚರ್ಚೆ ನಡೆಸಿ ಪಕ್ಷದ ಬೆಳವಣಿಗೆಗೆ ಶ್ರಮಿಸಲು ಪ್ರಯತ್ನಿಸುವೆ ಎಂದರು.

ಸಹಕಾರ ಸಂಘಕ್ಕೆ ಹೇಮಂತ್ ಕುಮಾರ್ ಆಯ್ಕೆ

ಕುಶಾಲನಗರ, ಅ.28– ಕೂಡಿಗೆಯ ರಾಮೇಶ್ವರ ಕೂಡು ಮಂಗಳೂರು ವಿವಿಧೋದ್ದೇಶ ಸಹಕಾರ ಸಂಘದ ಅಧ್ಯಕ್ಷರಾಗಿ ಮೂರನೆಯ ಬಾರಿಗೆ ಕೆ.ಕೆ.ಹೇಮಂತ್ ಕುಮಾರ್ ಅವಿರೋಧವಾಗಿ ಆಯ್ಕೆಯಾದರು. ಕಳೆದ 12 ದಿನಗಳ ಹಿಂದೆ ನಡೆದ ಸಹಕಾರ ಸಂಘದ ಆಡಳಿತ ಮಂಡಳಿಯ ಚುನಾವಣೆಯಲ್ಲಿ ನಿರ್ದೇಶಕರಾಗಿ ಅವಿರೋಧವಾಗಿ ಆಯ್ಕೆಯಾಗಿದ್ದ ಹಾಸನ ಹಾಲು ಒಕ್ಕೂಟದ ಜಿಲ್ಲಾ ನಿರ್ದೇಶಕರಾದ ಕೆ.ಕೆ.ಹೇಮಂತ್ ಕುಮಾರ್ ಸಂಘದ ಮೂರನೇಯ ಬಾರಿಗೆ ಅಧ್ಯಕ್ಷರಾಗಿ ಆಯ್ಕೆಯಾದರು, ಉಪಾಧ್ಯಕ್ಷರಾಗಿ ವಿ. ಬಸಪ್ಪ ಅವಿರೋಧವಾಗಿ ಆಯ್ಕೆಯಾದರು.

ನ.1, ಕನ್ನಡ ರಾಜ್ಯೋತ್ಸವ

ಮಡಿಕೇರಿ ಅ.28– ಕೊಡಗು ಜಿಲ್ಲಾಡಳಿತ ವತಿಯಿಂದ 68 ನೇ ಕನ್ನಡ ರಾಜ್ಯೋತ್ಸವ ದಿನಾಚರಣೆಯು ನ.1 ರಂದು ಬೆಳಗ್ಗೆ 9 ಗಂಟೆಗೆ ನಗರದ ಜನರಲ್ ತಿಮ್ಮಯ್ಯ ಜಿಲ್ಲಾ ಕ್ರೀಡಾಂಗಣದಲ್ಲಿ ನಡೆಯಲಿದೆ.

ಕೊಡಗು ಜಿಲ್ಲಾ ಉಸ್ತುವಾರಿ ಸಚಿವ ಎನ್.ಎಸ್.ಭೋಸರಾಜು ಧ್ವಜಾರೋಹಣ ನೆರವೇರಿಸಲಿದ್ದಾರೆ. ಶಾಸಕ ಡಾ.ಮಂತರ್ ಗೌಡ ಅಧ್ಯಕ್ಷತೆ ವಹಿಸಲಿದ್ದಾರೆ. ಶಾಸಕ ಎ.ಎಸ್.ಪೊನ್ನಣ್ಣ ಸಂಸದ ಪ್ರತಾಪ್ ಸಿಂಹ, ವಿಧಾನಪರಿಷತ್ ಸದಸ್ಯರಾದ ಎಂ.ಪಿ.ಸುಜಾ ಕುಶಾಲಪ್ಪ, ಎಸ್.ಎಲ್.ಭೋಜೇಗೌಡ, ನಗರಸಭೆ ಅಧ್ಯಕ್ಷೆ ಎನ್.ಪಿ.ಅನಿತಾ, ಕನ್ನಡ ಸಾಹಿತ್ಯ ಪರಿಷತ್ತು ಜಿಲ್ಲಾ ಘಟಕದ ಅಧ್ಯಕ್ಷ ಎಂ.ಪಿ.ಕೇಶವ ಕಾಮತ್, ಕೊಡಗು ಜಿಪಂ ಆಡಳಿತಾಧಿಕಾರಿ ಡಾ.ಎನ್.ವಿ.ಪ್ರಸಾದ್, ಡಿಸಿ ವೆಂಕಟ್ ರಾಜಾ, ಇತರರು ಪಾಲ್ಗೊಳ್ಳಲಿದ್ದಾರೆ.

'ಹುಲಿ ಉಗುರು' ಸದ್ದಿನ ನಡುವೆ ಹುಲಿ ಪ್ರತ್ಯಕ್ಷ

ಕಾಫಿ ತೋಟದಲ್ಲಿ ಕಾಣಿಸಿಕೊಂಡ ಹುಲಿ ಕಂಡು ಗ್ರಾಮಸ್ಥರಲ್ಲಿ ಆತಂಕ



ಮಡಿಕೇರಿ,ಅ.28– ರಾಜ್ಯದೆಲ್ಲೆಡೆ 'ಹುಲಿ ಉಗುರು' ಸದ್ದು ಮಾಡುತ್ತಿರುವ ಬೆನ್ನಲ್ಲೆ ದಕ್ಷಿಣ ಕೊಡಗಿನಲ್ಲಿ ಹುಲಿ ಪ್ರತ್ಯಕ್ಷಗೊಂಡು ಆತಂಕ ಹುಟ್ಟಿಸಿದೆ. ಕಾಫಿ ತೋಟವೊಂದರಲ್ಲಿ ಹಾಡಹಗಲೇ ಹುಲಿ ಪ್ರತ್ಯಕ್ಷಗೊಂಡು ಗ್ರಾಮಸ್ಥರಲ್ಲಿ ಆತಂಕ ಸೃಷ್ಟಿಸಿರುವ ಘಟನೆ ಪೊನ್ನಂಪೇಟೆ ತಾಲೂಕಿನ ರುದ್ರಬೀಡು ಗ್ರಾಮದ ಹೊನ್ನಿಕೊಪ್ಪಲಿನಲ್ಲಿ ನಡೆದಿದೆ.

ಹೊನ್ನಿಕೊಪ್ಪಲಿನ ಪ್ರಶಾಂತ್ ಎಂಬುವರಿಗೆ ಸೇರಿದ ಕಾಫಿ ತೋಟದಲ್ಲಿ ವ್ಯಾಘ್ರ ಪ್ರತ್ಯಕ್ಷಗೊಂಡಿದ್ದು, ಹುಲಿ ಕಂಡು ಬಂದ ಸ್ಥಳದಲ್ಲಿ ಕೊಳೆತ ಸ್ಥಿತಿಯಲ್ಲಿರುವ ಕಾಡುಹಂದಿಯ ಕಳೇಬರ ಕೂಡ ಪತ್ತೆಯಾಗಿದೆ.

ಕಳೆದ ಎರಡು ದಿನಗಳ ಹಿಂದೆಯೇ ಹುಲಿ ಬೇಟೆಯಾಡಿ ಕಾಡುಹಂದಿಯನ್ನು ಕೊಂದು ಕೆಲವು ಭಾಗಗಳನ್ನು ಭಕ್ಷಿಸಿರಬಹುದೆಂದು ಶಂಕಿಸಲಾಗಿದೆ. ಶನಿವಾರ ಬೆಳಗ್ಗೆ ಕಾಫಿ ತೋಟದ ಕೆಲಸಕ್ಕೆ ತೆರಳಿದ್ದ ಕಾರ್ಮಿಕರಿಗೆ ಹುಲಿ ಕಾಣಿಸಿಕೊಂಡಿದ್ದು, ಅರಣ್ಯ ಇಲಾಖೆಗೆ ಮಾಹಿತಿ ನೀಡಿದ ಹಿನ್ನೆಲೆಯಲ್ಲಿ ಇಲಾಖೆಯ ಸಿಬ್ಬಂದಿಗಳು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದರು. ಹುಲಿ ಸೆರೆಗೆ ಕೂಂಬಿಂಗ್ ಕಾರ್ಯಾಚರಣೆ ನಡೆಸಲಾಗುವುದು ಎಂದು ತಿತಿಮತಿ ಉಪವಲಯ ಅರಣ್ಯಾಧಿಕಾರಿ ಹಾಲೇಶ್ ತಿಳಿಸಿದ್ದಾರೆ. ತಕ್ಷಣವೇ ಹುಲಿ ಹಿಡಿದು ಸ್ಥಳಾಂತರಿಸುವಂತೆ ಸ್ಥಳೀಯರು ಒತ್ತಾಯಿಸಿದ್ದಾರೆ.

ಚಾ.ನಗರ ಜಿಲ್ಲಾದ್ಯಂತ ಮಹರ್ಷಿ ವಾಲ್ಮೀಕಿ ಜಯಂತಿ ಆಚರಣೆ

ವಾಲ್ಮೀಕಿ ರಾಮಾಯಣ ಉದಾತ್ತ ಮೌಲ್ಯಗಳ ಮಹಾಕಾವ್ಯ

- ಶಾಸಕ ಸಿ.ಪುಟ್ಟರಂಗಶೆಟ್ಟಿ ಅಭಿಪ್ರಾಯ
- ಪ್ರತಿಭಾವಂತ ವಿದ್ಯಾರ್ಥಿಗಳು, ಸಾಧಕರಿಗೆ ಸನ್ಮಾನ



ಚಾಮರಾಜನಗರ, ಅ.28– ಮಹರ್ಷಿ ವಾಲ್ಮೀಕಿ ರಚಿಸಿದ ರಾಮಾಯಣ ಮಾತೃ, ಪಿತೃ, ತ್ಯಾಗ ಪರಿಪಾಲನೆಯಂತಹ ಉದಾತ್ತ ಮೌಲ್ಯವುಳ್ಳ ಮಹಾಕಾವ್ಯ ಎಂದು ಶಾಸಕ ಸಿ.ಪುಟ್ಟರಂಗಶೆಟ್ಟಿ ತಿಳಿಸಿದರು.

ನಗರದ ಸರ್ಕಾರಿ ಪೇಟೆ ಪ್ರೈಮರಿ ಶಾಲಾ ವರಣದಲ್ಲಿ ಶನಿವಾರ ಜಿಲ್ಲಾಡಳಿತ, ಜಿಪಂ ಹಾಗೂ ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆಯಿಂದ ಆಯೋಜಿಸಿದ್ದ ಮಹರ್ಷಿ ವಾಲ್ಮೀಕಿ ಜಯಂತಿ ಉದ್ಘಾಟಿಸಿ ಮಾತನಾಡಿದರು.

ಇಡೀ ಪ್ರಪಂಚವೇ ಮೆಚ್ಚುವಂತಹ ವಾಲ್ಮೀಕಿ ಅವರ ರಾಮಾಯಣದಲ್ಲಿ ಅನೇಕ ಉತ್ತಮ ವಿಚಾರಗಳಿವೆ. ಪ್ರಜಾಪ್ರಭುತ್ವದ ಬುನಾದಿ ಒಳಗೊಂಡ ಅಂಶಗಳು ಇವೆ. ತಂದೆ-ತಾಯಿ, ಸಹೋದರರ ಪ್ರೀತಿ, ಬಾಂಧವ್ಯ ಸೇರಿದಂತೆ ಇನ್ನೂ ಹಲವು ಮಹತ್ತರ ವಿಷಯಗಳನ್ನು ಒಳಗೊಂಡಂತೆ ಮಹಾಕಾವ್ಯ ರಾಮಾಯಣದಲ್ಲಿದೆ ಎಂದರು.

> ಸಮಾಜದ ಅಂಕುಡೊಂಕು ತಿದ್ದಿ ಸರಿದಾರಿಯಲ್ಲಿ ನಡೆಸಲು ಮಹಾನ್ ಪುರುಷರು, ದಾರ್ಶನಿಕರು, ಸಂತರ ಜಯಂತಿ ಆಚರಣೆ ಮಾಡಲಾಗುತ್ತಿದೆ. ಇಡೀ ಮನುಕುಲದ ಒಳಿತಿಗಾಗಿ ಶ್ರಮಿಸಿದ ಮೇರುವ್ಯಕ್ತಿಗಳ ಸ್ಮರಣೆ ಮಾಡುವುದು ನಮ್ಮೆಲ್ಲರ ಆದ್ಯ ಕರ್ತವ್ಯವಾಗಿದೆ. ಅವರು ಹಾಕಿಕೊಟ್ಟ ಮಾರ್ಗದಲ್ಲಿ ಮುನ್ನಡೆಯಬೇಕಿದೆ.
> –ಸಿ.ಪುಟ್ಟರಂಗಶೆಟ್ಟಿ, ಶಾಸಕರು.

ಕೇಂದ್ರ ಪರಿಹಾರ ಸಮಿತಿ ಮಾಜಿ ಅಧ್ಯಕ್ಷ ಎಂ. ರಾಮಚಂದ್ರ ಮಾತನಾಡಿ, ಇಂದು ತಂತ್ರಜ್ಞಾನ ಮುಂದುವರೆಯುತ್ತಿದೆ. ಈ ಮಧ್ಯೆ ನಮ್ಮ ಸಂಸ್ಕೃತಿ, ಪರಂಪರೆ ಮರೆಯಬಾರದು. ಮೇರು ಸಾಧಕರು, ವ್ಯಕ್ತಿಗಳ ವಿಚಾರಗಳನ್ನು ಮನನ ಮಾಡಿಕೊಂಡು ಅವರು ತೋರಿದ ಮಾರ್ಗದರ್ಶನದಲ್ಲಿ ನಡೆದುಕೊಂಡರೆ ಬದುಕು ಸಾರ್ಥಕವಾಗುತ್ತದೆ. ಸಮುದಾಯದವರು ಎಷ್ಟೇ ಕಷ್ಟವಾದರೂ ಮಕ್ಕಳಿಗೆ ಶಿಕ್ಷಣ ಕೊಡಿಸಬೇಕು. ಸರ್ಕಾರದ ಸವಲತ್ತುಗಳನ್ನು ಸದ್ಬಳಕೆ ಮಾಡಿಕೊಳ್ಳಬೇಕು ಎಂದರು.

ಜಿಲ್ಲಾಧಿಕಾರಿ ಸಿ.ಟಿ.ಶಿಲ್ಪಾನಾಗ್ ಮಾತನಾಡಿ, ರಾಮಾಯಣ ಪ್ರೀತಿ, ತ್ಯಾಗ, ತಪಸ್ಸು ಒಳಗೊಂಡ ಶ್ರೇಷ್ಠ ಗ್ರಂಥವಾಗಿದೆ. ರಾಮಾಯಣದ ಪಾತ್ರಗಳು ಮನುಷ್ಯ ಪ್ರೀತಿ, ಮಾನವತೆಯನ್ನು ಬಿಂಬಿಸುತ್ತವೆ. ನಡೆ, ನುಡಿಗಳಲ್ಲಿ ರಾಮಾಯಣ ರೂಢಿಸಿಕೊಳ್ಳಬೇಕಿದೆ. ಸತ್ಯ, ಸದಾಚಾರ ಹಾದಿಯಲ್ಲಿ ಮುನ್ನಡೆದು ಸಾರ್ಥಕತೆ ಜೀವನ ನಡೆಸಬೇಕು ಎಂದರು.

ಮುಖ್ಯ ಭಾಷಣ ಮಾಡಿದ ಮೈಸೂರಿನ ಭಾರತೀಯ ಭಾಷಾ ಸಂಸ್ಥಾನ, ಶಾಸ್ತ್ರೀಯ ಕನ್ನಡ ಅತ್ಯುನ್ನತ ಅಧ್ಯಯನ ಕೇಂದ್ರದ ಯೋಜನಾ ನಿರ್ದೇಶಕ ಡಾ.ನೀಲಗಿರಿ ತಳವಾರ ಅವರು, ಮಹರ್ಷಿ ವಾಲ್ಮೀಕಿ ಅವರ ತಪಸ್ಸಿನ ಫಲವಾಗಿ ರಾಮಾಯಣ ಮಹಾಕಾವ್ಯ ಬರೆಯಲು ಸಾಧ್ಯವಾಯಿತು ಎಂದರು.

ಇದೇ ವೇಳೆ 2022–23ನೇ ಸಾಲಿನ ಎಸ್‌ಎಸ್‌ಎಲ್‌ಸಿಯಲ್ಲಿ ಅತೀ ಹೆಚ್ಚು ಅಂಕ ಪಡೆದ ಕೊಳ್ಳೇಗಾಲದ ಪಲ್ಲವಿ ಅವರಿಗೆ ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆಯಿಂದ 1 ಲಕ್ಷ ನೀಡಿ ಗೌರವಿಸಲಾಯಿತು. ಹೆಚ್ಚು ಅಂಕ ಪಡೆದ ಗುಂಡ್ಲುಪೇಟೆಯ ಸಂಜನಾ, ಲಿಖಿತ್‌ಕುಮಾರ್, ಐಶ್ವರ್ಯ ಹಾಗೂ ದ್ವಿತೀಯ ಪಿಯುಸಿಯಲ್ಲಿ ಅತೀ ಹೆಚ್ಚು ಅಂಕ ಪಡೆದ ಹರ್ಷಿತಾ, ನಂದಿತಾ, ವರ್ಷಿತಾ ಅವರನ್ನು ಸನ್ಮಾನಿಸಲಾಯಿತು.

ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ಸಮುದಾಯದ ಹಿರಿಯ ಕಲಾವಿದರಾದ ಘಟಂ ಕೃಷ್ಣ, ಸುರೇಶ್‌ನಾಗ್, ಪತ್ರಕರ್ತರಾದ ಶ್ರೀನಿವಾಸನಾಯಕ್, ಸರ್ಕಾರಿ ನೌಕರರ ಸಂಘದ ಜಿಲ್ಲಾಧ್ಯಕ್ಷರಾದ ಚಂದ್ರಶೇಖರ್, ಡಾ.ಪುಟ್ಟರಾಜು, ಕೃಷ್ಣನಾಯಕ್ ಅವರನ್ನು ಸನ್ಮಾನಿಸಲಾಯಿತು. ಕಾರ್ಯಕ್ರಮದಲ್ಲಿ ನಗರಸಭಾ ಸದಸ್ಯರಾದ ಕಲಾವತಿ, ಸುರೇಶ್, ಶಿವರಾಜು, ಜಿಪಂ ಸಿಇಓ ಆನಂದ ಪ್ರಕಾಶ್ ಮೀನಾ, ಜಿಲ್ಲಾ ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿ ಕೆ. ಮಂಜುಳ, ಮುಖಂಡರಾದ ಪು. ಶ್ರೀನಿವಾಸನಾಯಕ, ಸೋಮನಾಯಕ, ಸುರೇಶ್‌ನಾಯಕ, ಸೋಮನಾಯಕ, ಎಚ್.ವಿ. ಚಂದ್ರು, ರಾಮಸಮುದ್ರ ನಾಗರಾಜು, ಚಾ.ಸಿ. ಸೋಮನಾಯಕ, ರಾಚಪ್ಪ, ಮಹದೇವ ನಾಯಕ, ಜಯಶೀಲ, ಚಂದ್ರಶೇಖರ್, ಸುರೇಶ್, ಶಿವು, ಚಂಗುಮಣಿ, ಜಯಸುಂದರ, ಪರಶಿವಮೂರ್ತಿ, ಕಪನಿನಾಯಕ, ನಾಗೇಂದ್ರ, ಶಿವಮೂರ್ತಿ, ರಾಜುನಾಯಕ, ರಮೇಶ್ ಇದ್ದರು. ವೇದಿಕೆ ಕಾರ್ಯಕ್ರಮಕ್ಕೂ ಮೊದಲು ಪ್ರವಾಸಿ ಮಂದಿರದಲ್ಲಿ ಮಹರ್ಷಿ ವಾಲ್ಮೀಕಿ ಅವರ ಭಾವಚಿತ್ರದ ಅದ್ದೂರಿ ಮೆರವಣಿಗೆಗೆ ಶಾಸಕ ಸಿ.ಪುಟ್ಟರಂಗಶೆಟ್ಟಿ ಚಾಲನೆ ನೀಡಿದರು.

ಉಸ್ತುವಾರಿ ಸಚಿವರ ಗೈರು: ಮುಖಂಡರ ಆಕ್ರೋಶ



ಚಾಮರಾಜನಗರ: ನಗರದಲ್ಲಿ ಶನಿವಾರ ನಡೆದ ಮಹರ್ಷಿ ವಾಲ್ಮೀಕಿ ಜಯಂತಿ ಕಾರ್ಯಕ್ರಮಕ್ಕೆ ಜಿಲ್ಲಾ ಉಸ್ತುವಾರಿ ಸಚಿವ ಕೆ.ವೆಂಕಟೇಶ್ ಅವರು ಗೈರಾದ ಹಿನ್ನೆಲೆಯಲ್ಲಿ ನಾಯಕ ಜನಾಂಗದ ಮುಖಂಡರು ಆಕ್ರೋಶ ವ್ಯಕ್ತಪಡಿಸಿದರು.

ನಾಯಕ ಸಮುದಾಯವನ್ನು ಸಚಿವರು ಕಡೆಗಣಿಸಿದ್ದಾರೆ ಎಂದು ಆರೋಪಿಸಿದ ಸಮುದಾಯದ ಮುಖಂಡರು ಮಹರ್ಷಿ ವಾಲ್ಮೀಕಿ ಅವರ ಭಾವಚಿತ್ರ ಮೆರವಣಿಗೆ ಭುವನೇಶ್ವರಿ ವೃತ್ತದ ಬಳಿ ಬರುತ್ತಿದ್ದಂತೆ ಸಚಿವರ ವಿರುದ್ಧ ಘೋಷಣೆ ಕೂಗಿ, ಕೆಲಕಾಲ ಪ್ರತಿಭಟನೆ ನಡೆಸಿದರು. ಈ ವೇಳೆ ಅಧಿಕಾರಿಗಳು ಜನಾಂಗದ ಮುಖಂಡರು ಹಾಗೂ ಪ್ರತಿಭಟನಾಕಾರರ ಮನವೊಲಿಸಲು ಮುಂದಾದರು. ಆದರೆ, ಯಾವುದೇ ಪ್ರಯೋಜನವಾಗಲಿಲ್ಲ. ಬಳಿಕ, ಮುಖ್ಯ ವೇದಿಕೆ ಬಳಿ ಸಮಾವೇಶಗೊಂಡ ನೂರಾರು ಪ್ರತಿಭಟನಾಕಾರರು ಸಚಿವ ಕೆ.ವೆಂಕಟೇಶ್ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ಈ ವೇಳೆ ಜಿಲ್ಲಾಧಿಕಾರಿ ಸಿ.ಟಿ.ಶಿಲ್ಪಾನಾಗ್ ಮಾತನಾಡಿ, ಕಾರ್ಯಕ್ರಮ ಸಂಬಂಧ ಸಚಿವರಿಗೆ ಆಹ್ವಾನ ಪತ್ರಿಕೆ ನೀಡಲಾಗಿತ್ತು. ಆದರೆ, ಅವರಿಗೆ ಅನಾರೋಗ್ಯ ಹಿನ್ನೆಲೆಯಲ್ಲಿ ಕಾರ್ಯಕ್ರಮಕ್ಕೆ ಹಾಜರಾಗಿಲ್ಲ. ಈ ಸಂಬಂಧ ನನ್ನೊಂದಿಗೆ ಹಾಗೂ ಶಾಸಕರೊಂದಿಗೆ ಮಾತನಾಡಿ, ಕಾರ್ಯಕ್ರಮವನ್ನು ಯಾವುದೇ ಲೋಪ– ದೋಷವಿಲ್ಲದೇ ಯಶಸ್ವಿಯಾಗಿ ಆಚರಿಸಿ, ನಾನು ಕನ್ನಡ ರಾಜ್ಯೋತ್ಸವಕ್ಕೆ ಆಗಮಿಸಿದ ವೇಳೆ ಸಮುದಾಯದ ಮುಖಂಡರನ್ನು ಭೇಟಿ ಮಾಡುತ್ತೇನೆಂದು ತಿಳಿಸಿದ್ದಾರೆ. ಹೀಗಾಗಿ ಪ್ರತಿಭಟನೆ ಕೈಬಿಡಬೇಕು ಎಂದು ಜಿಲ್ಲಾಧಿಕಾರಿಗಳು ಮನವಿ ಮಾಡಿದರು. ಬಳಿಕ, ಸಮುದಾಯದ ಮುಖಂಡರು ಪ್ರತಿಭಟನೆ ಕೈ ಬಿಟ್ಟರು. ನಂತರ ವೇದಿಕೆ ಕಾರ್ಯಕ್ರಮ ಸುಲಲಿತವಾಗಿ ನಡೆಯಿತು.

ರಾಮಾಯಣ ಜಗತ್ತಿನ ತಾತ್ವಿಕ, ವಾಸ್ತವ ಸಾಹಿತ್ಯ ಸೃಷ್ಟಿಗೆ ಪ್ರೇರಣೆ : ಶಾಸಕ ಎ.ಆರ್.ಕೃಷ್ಣಮೂರ್ತಿ



ಕೊಳ್ಳೇಗಾಲ, ಅ.28– ದೇಶ ಕಂಡ ಶ್ರೇಷ್ಠ ಕವಿಗಳಲ್ಲಿ ಮಹರ್ಷಿ ವಾಲ್ಮೀಕಿ ಪ್ರಮುಖರು. ವಾಲ್ಮೀಕಿ ರಾಮಾಯಣದ ಆಧಾರದ ಮೇಲೆ ವಿವಿಧ ಭಾಷೆಗಳಲ್ಲಿ ಕಾದಂಬರಿ, ಕಾವ್ಯ, ನಾಟಕ, ಕಥೆಗಳು ರಚಿತಗೊಂಡಿರುವುದು ಉತ್ತಮ ವಿಚಾರ. ಇಂದಿಗೂ ರಾಮಾಯಣ ಮಹಾಕಾವ್ಯ ಜಗತ್ತಿನ ತಾತ್ವಿಕ ಮತ್ತು ವಾಸ್ತವ ಸಾಹಿತ್ಯ ಸೃಷ್ಟಿಗೆ ಪ್ರೇರಣೆಯಾಗಿದೆ ಎಂದು ಶಾಸಕ ಎ.ಆರ್.ಕೃಷ್ಣಮೂರ್ತಿ ತಿಳಿಸಿದರು.

ಪಟ್ಟಣದ ನ್ಯಾಷನಲ್ ಶಾಲಾವರಣದಲ್ಲಿ ಆಯೋಜಿಸಿದ್ದ ಮಹರ್ಷಿ ವಾಲ್ಮೀಕಿ ಜಯಂತಿಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ರಾಮಾಯಣ ಮಹಾಕಾವ್ಯ ಮಾತೃ ದೇವೋಭವ, ಪಿತೃ ದೇವೋಭವ, ಆಚಾರ್ಯ ದೇವೋಭವದಂತಹ ಉತ್ತಮ ಬಾಂಧವ್ಯಗಳನ್ನು ಎತ್ತಿ ಹಿಡಿಯಲಿದೆ. ಜೊತೆಗೆ ಮಮತೆ, ಸಮತೆ, ಭ್ರಾತೃತ್ವ, ತ್ಯಾಗ, ದೇಶಪ್ರೇಮ, ಅಳಿಲು ಸೇವೆ, ಪಿತೃವಾಕ್ಯ ಪರಿಪಾಲನೆ ಸಾಮಾಜಿಕ ಹಾಗೂ ಮಾನವೀಯತೆಗಳ ವಾಸ್ತವತೆಗಳನ್ನು ಪ್ರತಿಪಾದಿಸಲಾಗಿದೆ. ಹೀಗಾಗಿ ರಾಮಾಯಣ ಅಂದು, ಇಂದೂ ಎಂದೆಂದಿಗೂ ಶ್ರೇಷ್ಠ ಮಹಾಕಾವ್ಯ ಎಂದರು.

ಜ್ಞಾನ ಮಾರ್ಗದತ್ತ ಕೊಂಡೊಯ್ಯುವ ಅಂಶಗಳು ಮಹಾಕಾವ್ಯ ರಾಮಾಯಣದಲ್ಲಿದೆ ಎಂದ ಅವರು, ಮಹನೀಯರ ತತ್ವಾದರ್ಶಗಳನ್ನು ಎಲ್ಲರೂ ಮೈಗೂಡಿಸಿಕೊಳ್ಳಬೇಕು ಎಂದು ತಿಳಿಸಿದರು.

ಈ ವೇಳೆ ಡಾ.ಪ್ರೇಮಲತಾ, ತಹಸೀಲ್ದಾರ್ ಮಂಜುಳಾ, ಬಿಇಓ ಮಂಜುಳಾ, ಡಿವೈಎಸ್ಪಿ ಸೋಮೇಗೌಡ, ತಾಪಂ ಇಓ ಶ್ರೀನಿವಾಸ್, ನಾಯಕ ಜನಾಂಗದ ಯಜಮಾನರಾದ ಚಿಕ್ಕಮಾದು, ಜಗದೀಶ್ ನಾಯಕ, ಮಹದೇವನಾಯಕ, ವಿಶ್ವಮೂರ್ತಿ ನಾಯಕ, ಮರುಹುಚ್ಚ ನಾಯಕ, ನಾಗೇಂದ್ರ, ನಗರಸಭೆ ಮಾಜಿ ಅಧ್ಯಕ್ಷ ಶಾಂತು, ರೇಖಾ, ರಮೇಶ್ ಹಾಗೂ ಇನ್ನಿತರರಿದ್ದರು.

ರಾಮಾಯಣ ಬರೆದ ಮಹಾಪುರುಷ ವಾಲ್ಮೀಕಿ: ನರೇಂದ್ರ



ಹನೂರು, ಅ.28– ಮಹನೀಯರ ಜಯಂತಿ ಆಚರಿಸುವುದು ಮುಖ್ಯವಲ್ಲ. ಅವರ ತತ್ವಾದರ್ಶಗಳನ್ನು ಜೀವನದಲ್ಲಿ ಅಳವಡಿಸಿಕೊಂಡಾಗ ಮಾತ್ರ ಜಯಂತಿಗಳು ಅರ್ಥಪೂರ್ಣವಾಗುತ್ತವೆ ಎಂದು ಮಾಜಿ ಶಾಸಕ ಆರ್.ನರೇಂದ್ರ ತಿಳಿಸಿದರು.

ಪಟ್ಟಣದ ಕಾಂಗ್ರೆಸ್ ಕಚೇರಿಯಲ್ಲಿ ನಡೆದ ವಾಲ್ಮೀಕಿ ಜಯಂತಿಯಲ್ಲಿ ಮಹರ್ಷಿ ವಾಲ್ಮೀಕಿ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ ಮಾತನಾಡಿದ ಅವರು, ಬೇಡರಾಗಿ ಜೀವನ ನಡೆಸುತ್ತಿದ್ದ ವಾಲ್ಮೀಕಿಯವರು ಕಾಲಕ್ರಮೇಣ ನಾರದ ಮುನಿಗಳ ಮಾರ್ಗದರ್ಶನದಲ್ಲಿ ಮನ ಪರಿವರ್ತನೆ ಮಾಡಿಕೊಂಡು ರಾಮನ ಜಪ ಮಾಡಿ ರಾಮಾಯಣ ಮಹಾಗ್ರಂಥ ಬರೆದ ಮಹಾಪುರುಷ ಆದಿಕವಿ ವಾಲ್ಮೀಕಿ ಜಯಂತಿಯನ್ನು ಸರ್ಕಾರದಿಂದ ಆಚರಿಸುತ್ತಿರುವುದು ಸಂತಸದ ವಿಚಾರ. ರತ್ನಾಕರನಾಗಿದ್ದ ಇವರು ವಾಲ್ಮೀಕಿಯಾಗಿ ಬದಲಾಗಿದ್ದು ಇತಿಹಾಸ. ಅವರು ಬರೆದ ರಾಮಾಯಣ ಗ್ರಂಥ ಪ್ರಪಂಚದಲ್ಲಿ ಪ್ರಸಿದ್ಧಿ ಪಡೆದುಕೊಂಡಿದೆ ಎಂದರು.

ಸರ್ಕಾರದ ಯೋಜನೆಗಳನ್ನು ಮನೆ ಮನೆಗೆ ತಲುಪಿಸಿ: ಕಾಂಗ್ರೆಸ್ ಸರ್ಕಾರ ಜಾರಿಗೆ ತಂದಿರುವ ಅನ್ನಭಾಗ್ಯ, ಗೃಹಲಕ್ಷ್ಮಿ, ಗೃಹಜ್ಯೋತಿ, ಶಕ್ತಿ ಯೋಜನೆಗಳನ್ನು ಕಾಂಗ್ರೆಸ್ ಕಾರ್ಯಕರ್ತರು ಮನೆಮನೆಗೆ ತಲುಪಿಸಬೇಕು. ಕ್ಷೇತ್ರದ ಸಾವಿರಾರು ಮಂದಿ ಗೃಹಜ್ಯೋತಿ ಹಾಗೂ ಗೃಹಲಕ್ಷ್ಮಿ ಯೋಜನೆ ಪಡೆಯಲು ಸಾಧ್ಯವಾಗಿಲ್ಲ. ಹೀಗಾಗಿ ಅಧಿಕಾರಿಗಳು ಯೋಜನೆಗಳ ಯಶಸ್ವಿಗೆ ಶ್ರಮಿಸಬೇಕು. ಅಧಿಕಾರಿಗಳು ಹಾಗೂ ಸರ್ಕಾರದ ಮಧ್ಯೆ ಕಾರ್ಯಕರ್ತರು ಸೇತುವೆಯಾಗಿ ಕರ್ತವ್ಯ ನಿರ್ವಹಿಸಿದರೆ ಸರ್ಕಾರದ ಎಲ್ಲಾ ಯೋಜನೆಗಳು ಪ್ರತಿಯೊಬ್ಬರಿಗೂ ತಲುಪಲಿವೆ ಎಂದರು.

ಇದೇ ವೇಳೆ ನಾಯಕ ಸಮಾಜದಿಂದ ಮಾಜಿ ಶಾಸಕ ನರೇಂದ್ರ ಅವರನ್ನು ಸನ್ಮಾನಿಸಲಾಯಿತು. ಕಾರ್ಯಕ್ರಮದಲ್ಲಿ ಈಶ್ವರ್, ಸಿದ್ದರಾಜು, ಚಿಕ್ಕಮಾದನಾಯಕ, ಗಿರೀಶ್, ಸುದೇಶ್, ಹರೀಶ್, ನಾಗರಾಜು, ವೆಂಕಟೇಶ್, ಚಿಕ್ಕತಮ್ಮಯ್ಯ, ವೆಂಕಟರಮಣ ನಾಯ್ಡು, ಪಾಳ್ಯಕೃಷ್ಣ, ನಾಗೇಂದ್ರ, ಪುಟ್ಟವೀರನಾಯಕ, ನಿಂಗಶೆಟ್ಟಿ, ಮಾದೇಶ್, ನಟರಾಜು, ಅಂಕರಾಜು, ಕೆ.ಸಿ.ಮಾದೇಶ್, ಮಹದೇವಸ್ವಾಮಿ ಸೇರಿದಂತೆ ಇತರರಿದ್ದರು.

ಕೃಷ್ಣಯ್ಯ ನಿಧನ



ಚಾಮರಾಜನಗರ, ಅ.28– ನಗರದ ಡಾ.ಬಿ.ಆರ್.ಅಂಬೇಡ್ಕರ್ ಬಡಾವಣೆ ನಿವಾಸಿಯೂ ಆದ ಕೆಇಬಿ ನಿವೃತ್ತ ನೌಕರ ಕೃಷ್ಣಯ್ಯ(80) ಶನಿವಾರ ಸಂಜೆ ನಿಧನರಾದರು. ಮೃತರು ಪತ್ನಿ, ತಾಲೂಕು ಅಂಬೇಡ್ಕರ್ ಸಂಘದ ಅಧ್ಯಕ್ಷ ಸಿ.ಕೆ.ಮಂಜುನಾಥ್ ಸೇರಿದಂತೆ 6 ಮಂದಿ ಪುತ್ರರು ಹಾಗೂ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ನಗರದ ಕರಿನಂಜನಪುರ ರಸ್ತೆಯಲ್ಲಿರುವ ಆದಿ ಕರ್ನಾಟಕ ಜನಾಂಗದ ಸ್ಮಶಾನದಲ್ಲಿ ಭಾನುವಾರ ಮಧ್ಯಾಹ್ನ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ವೀರಭದ್ರಪ್ಪ



ಚಾಮರಾಜನಗರ: ತಾಲೂಕಿನ ಬದನಗುಪ್ಪೆ ನಿವಾಸಿ ಹಾಗೂ ವೀರಶೈವ ಲಿಂಗಾಯತ ಸಮಾಜದ ಹಿರಿಯ ಮುಖಂಡ ಬಿ.ಪಿ. ವೀರಭದ್ರಪ್ಪ (92) ಶನಿವಾರ ನಿಧನರಾದರು.

ಇವರು ಜಿಲ್ಲಾ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ, ಚಾಮರಾಜನಗರ ಜಿಲ್ಲಾ ರಚನಾ ಹೋರಾಟ ಸಮಿತಿ ಪದಾಧಿಕಾರಿ, ಅವಿಭಜಿತ ಮೈಸೂರು ಜಿಲ್ಲಾ ಗ್ರಾಮಾಂತರ ಜಾ.ದಳ ಹಿರಿಯ ಉಪಾಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದರು. ಮೃತರು ಪುತ್ರಿ ವಿದ್ಯಾ ಎಸ್.ಶಿವಪ್ಪ ಪುತ್ರ ವರದಿಗಾರ ಪ್ರಸಾದ್, ಕೆಎಸ್‌ಎಸ್‌ಸಿಯ ಬಿ.ವಿ.ಮಹದೇವಸ್ವಾಮಿ, ಬಿ.ವಿ. ರಾಜೇಶ್ ಹಾಗೂ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಸ್ವಗ್ರಾಮದಲ್ಲಿ ಭಾನುವಾರ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಭೂಮಿ ತಾಯಿಗೆ ನಮಿಸುವ ಸಲುವಾಗಿ ಇಂದು ಮೈಸೂರಲ್ಲಿ ವಾಕಥಾನ್



ಮೈಸೂರು,ಅ.28(ಎಂಟಿವೈ)– ಭೂಮಿ ತಾಯಿಗೆ ಗೌರವ ಸಮರ್ಪಿಸುವ ಉದ್ದೇಶದಿಂದ ಅ.29ರಂದು ಬೆಳಗ್ಗೆ 7.30ಕ್ಕೆ ಮೈಸೂರಲ್ಲಿ ವಾಕಥಾನ್ ಆಯೋಜಿಸಲಾಗಿದೆ ಎಂದು ಸ್ಪೋಸ್ ಫೌಂಡೇಷನ್ ಅಧ್ಯಕ್ಷ ಶಿವಮೂರ್ತಿ ಕಿರಾಳ ತಿಳಿಸಿದ್ದಾರೆ. ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ವಿವಿಧತೆಯಲ್ಲಿ ಏಕತೆ ಸಂದೇಶ ಸಾರುವುದರೊಂದಿಗೆ ಭೂಮಿ ತಾಯಿ ಬಗ್ಗೆ ಗೌರವ ಇಟ್ಟುಕೊಳ್ಳುವಂತೆ ಜನರಲ್ಲಿ ಜಾಗೃತಿ ಮೂಡಿಸುವ ಭಾರತ ಹಾಗೂ ಅಮೆರಿಕಾದಲ್ಲಿ ಶಾಖೆ ಹೊಂದಿರುವ ಸ್ಪೋಸ್ ಫೌಂಡೇಷನ್ ವಾಕಥಾನ್ ಹಮ್ಮಿಕೊಂಡಿದೆ. ಅರಮನೆಯ ಕೋಟೆ ಆಂಜನೇಯಸ್ವಾಮಿ ದೇವಾಲಯದ ಮುಂಭಾಗದಿಂದ ವಾಕಥಾನ್ ಆರಂಭವಾಗಲಿದ್ದು, ಅರಮನೆ ಸುತ್ತ ಒಂದು ಸುತ್ತು ಸಾಗಿ, ಕೋಟೆ ಆಂಜನೇಯಸ್ವಾಮಿ ದೇವಾಲಯದ ಮುಂದೆ ಸಮಾಪ್ತಿಗೊಳ್ಳಲಿದೆ. ಈ ವಾಕಥಾನ್‌ನಲ್ಲಿ ಸಾವಿರ ಮಂದಿ ಪಾಲ್ಗೊಳ್ಳುವ ನಿರೀಕ್ಷೆಯಿದೆ ಎಂದರು. ಸುದ್ದಿಗೋಷ್ಠಿಯಲ್ಲಿ ಫೌಂಡೇಷನ್ ಪದಾಧಿಕಾರಿಗಳಾದ ವೆಂಕಟೇಶ್, ವಿಜಯಕುಮಾರ್, ನಾಗಾರ್ಜುನ್, ಜಿ.ವಿ. ರಮೇಶ್ ಇದ್ದರು.

20 ಕೋಟಿ ಕೊಡದಿದ್ದರೆ ಕೊಲ್ಲುವುದಾಗಿ ಮುಕೇಶ್ ಅಂಬಾನಿಗೆ ಬೆದರಿಕೆ

ಮುಂಬೈ, ಅ.28– ರಿಲಯನ್ಸ್ ಇಂಡಸ್ಟ್ರೀಸ್ ಅಧ್ಯಕ್ಷ ಮುಕೇಶ್ ಅಂಬಾನಿ ಅವರಿಗೆ ಇಮೇಲ್ ಮೂಲಕ ಕೊಲೆ ಬೆದರಿಕೆ ಬಂದಿದ್ದು, 20 ಕೋಟಿ ರೂ. ನೀಡಲು ವಿಫಲವಾದರೆ ಕೊಲ್ಲುವುದಾಗಿ ಬೆದರಿಕೆ ಹಾಕಲಾಗಿದೆ. ಮುಂಬೈ ಪೊಲೀಸರ ಪ್ರಕಾರ, ಇಮೇಲ್‌ನಲ್ಲಿ ನೀವು ನಮಗೆ 20 ಕೋಟಿ ರೂಪಾಯಿ ನೀಡದಿದ್ದರೆ, ನಾವು ನಿಮ್ಮನ್ನು ಕೊಲ್ಲುತ್ತೇವೆ. ನಮ್ಮ ಬಳಿ ಭಾರತದ ಅತ್ಯುತ್ತಮ ಶೂಟರ್‌ಗಳು ಇದ್ದಾರೆ ಎಂದು ಬರೆಯಲಾಗಿದೆ.

ಇಮೇಲ್ ಸ್ವೀಕರಿಸಿದ ನಂತರ ಮುಕೇಶ್ ಅಂಬಾನಿ ಅವರ ಭದ್ರತಾ ಉಸ್ತುವಾರಿ ದೂರು ನೀಡಿದ್ದು, ದೂರಿನ ಆಧಾರದ ಮೇಲೆ ಮುಂಬೈನ ಗಾಮ್‌ದೇವಿ ಪೊಲೀಸರು ಅಪರಿಚಿತ ವ್ಯಕ್ತಿಯ ವಿರುದ್ಧ ಐಪಿಸಿ ಸೆಕ್ಷನ್ 387 ಮತ್ತು 506 (2) ಅಡಿಯಲ್ಲಿ ಪ್ರಕರಣ ದಾಖಲಿಸಿ, ತನಿಖೆ ಆರಂಭಿಸಿದ್ದಾರೆ.

ಒಂದನೇ ಪುಟದಿಂದ

'ಔತಣ ಕೂಟ' ತಂತ್ರಗಾರಿಕೆ

ಒತ್ತಡವೂ ಹೆಚ್ಚಿದೆ. ನಮ್ಮ ಇಲಾಖೆಗಳಲ್ಲಿ ಹಸ್ತಕ್ಷೇಪ ನಿರಂತರವಾಗಿ ನಡೆದರೆ, ನಮಗೇನು ಕೆಲಸವಿರುತ್ತದೆ. ಇದಕ್ಕೆ ಕಡಿವಾಣ ಹಾಕಿ ಎಂದು ಮುಖ್ಯಮಂತ್ರಿ ಅವರನ್ನು ಒತ್ತಾಯಿಸಿದ್ದಾರೆ. ಅಧಿಕಾರ ಸೂತ್ರವನ್ನು ಶಿವಕುಮಾರ್ ಅವರು ಉಲ್ಲಂಘನೆ ಮಾಡಲು ಹೊರಟಂತಿದೆ. ಉಪ ಮುಖ್ಯಮಂತ್ರಿ ದೊರೆತಿದ್ದಕ್ಕೆ ಇಷ್ಟು ಆರ್ಭಟ ನಡೆಯುತ್ತಿದೆ. ಇನ್ನೂ ಮುಖ್ಯಮಂತ್ರಿ ಸ್ಥಾನ ದೊರೆತರೆ ಗತಿಯೇನು? ನಿಮ್ಮ ನಾಯಕತ್ವದಲ್ಲಿ ಪಕ್ಷ ಅಧಿಕಾರಕ್ಕೆ ಬಂದಿದೆ. ಐದು ವರ್ಷ ನೀವೇ ಮುಖ್ಯಮಂತ್ರಿಯಾಗಿರಿ. ಮುಂದಿನ ಅವಧಿಗೆ ಹೈಕಮಾಂಡ್ ಬೇರೆ ತೀರ್ಮಾನ ಮಾಡಿಕೊಳ್ಳಲಿ ಎಂದಿದ್ದಾರೆ.

ಒಂದು ವೇಳೆ ವರಿಷ್ಠರ ತೀರ್ಮಾನಕ್ಕೆ ತಲೆಬಾಗಿದರೆ, ನಾವು ಪರ್ಯಾಯ ನಾಯಕತ್ವ ಹುಡುಕಿಕೊಳ್ಳುತ್ತೇವೆ. ಅದರಲ್ಲೂ ನಮ್ಮ ಸಮುದಾಯದವರಿಗೆ ಅವಕಾಶ ದೊರೆಯಲಿ. ಅದಕ್ಕೆ ನಾವು ಬೆಂಬಲವಾಗಿ ನಿಲ್ಲುತ್ತೇವೆ ಎನ್ನುವ ಮೂಲಕ ಶಿವಕುಮಾರ್ ವಿರುದ್ಧ ಅಪಸ್ವರ ಎತ್ತಿದ್ದಾರೆ. ಎಲ್ಲರ ಮಾತನ್ನು ಆಲಿಸಿದ ಮುಖ್ಯಮಂತ್ರಿ ಅವರು, ಸದ್ಯಕ್ಕೆ ನನ್ನ ಕೈ ಕಟ್ಟಿ ಹಾಕಲಾಗಿದೆ. ಯಾವುದೇ ರಾಜಕೀಯ ನಿರ್ಧಾರ ಕೈಗೊಳ್ಳಲು ಸಾಧ್ಯವಿಲ್ಲ. ಎಐಸಿಸಿ ಅಧ್ಯಕ್ಷರಿಂದ ನಮಗೆ ಸೂಕ್ತ ಸಹಕಾರ ಸಿಗುತ್ತಿಲ್ಲ. ಮತ್ತೊಂದೆಡೆ ಕೇಂದ್ರ ಸರ್ಕಾರ ಆದಾಯ ತೆರಿಗೆ ದಾಳಿ ನಡೆಸುವ ಮೂಲಕ ನಮ್ಮನ್ನು ಇಕ್ಕಟ್ಟಿಗೆ ಸಿಲುಕಿಸುವ ಪ್ರಯತ್ನ ಮಾಡುತ್ತಿದೆ. ಈಗ ಯಾರಿಗೂ ಉಪ ಮುಖ್ಯಮಂತ್ರಿ ಹುದ್ದೆ ಅಥವಾ ಇನ್ನಾವುದೇ ಹುದ್ದೆ ನೀಡಲು ಸಾಧ್ಯವಿಲ್ಲ. ಮುಂದೆ ನೋಡೋಣ ಎಂದು ತಿಳಿಸಿದ್ದಾರೆ. ಅವರ ಮಾತಿನ ಬಗ್ಗೆ ಹೆಚ್ಚಿನ ಮಾಹಿತಿ ಲಭ್ಯವಾಗಿಲ್ಲ.

ಔತಣಕೂಟದಲ್ಲಿ ಭಾಗವಹಿಸಿದ್ದ ಡಾ.ಹೆಚ್.ಸಿ.ಮಹದೇವಪ್ಪ, ಕೆ.ಎನ್.ರಾಜಣ್ಣ, ಬಿ.ನಾಗೇಂದ್ರ ಅವರು ಪ್ರತ್ಯೇಕವಾಗಿ ಮಾತನಾಡಿ, ಸಿದ್ದರಾಮಯ್ಯ ಅವರೇ ಐದು ವರ್ಷಗಳ ಕಾಲ ಮುಖ್ಯಮಂತ್ರಿಯಾಗಿರುತ್ತಾರೆ. ಅಧಿಕಾರ ಹಂಚಿಕೆಗೆ ಸಂಬಂಧಿಸಿದಂತೆ ನಮಗೇನೂ ತಿಳಿದಿಲ್ಲ ಸಮಯ–ಸಂದರ್ಭ ನೋಡಿ ವರಿಷ್ಠರು ತೀರ್ಮಾನ ತೆಗೆದುಕೊಳ್ಳುತ್ತಾರೆ. ಸಿದ್ದರಾಮಯ್ಯ ಅವರೇ ಐದು ವರ್ಷ ಮುಖ್ಯಮಂತ್ರಿಯಾಗಿ ಮುಂದುವರೆಯಬೇಕು ಎಂದು ರಾಜಣ್ಣ ತಿಳಿಸಿದ್ದಾರೆ. ಆಪರೇಷನ್ ಕಮಲ, ಆಪರೇಷನ್ ಹಸ್ತಾ ಎರಡೂ ನಡೆಯುತ್ತಿದೆ. ಜೆಡಿಎಸ್‌ನ ಮೂರನೇ ಎರಡರಷ್ಟು ಶಾಸಕರು ಕಾಂಗ್ರೆಸ್ ಸೇರಲು ಮುಂದಾಗಿದ್ದಾರೆ. ಅವರು ಲೋಕಸಭಾ ಚುನಾವಣೆಗೂ ಮುನ್ನ ನಮ್ಮ ಪಕ್ಷದ ಕೈ ಹಿಡಿಯಬಹುದು ಎಂದಿದ್ದಾರೆ. ಅಧಿಕಾರ ಹಂಚಿಕೆಗೆ ಸಂಬಂಧಿಸಿದಂತೆ ಪಕ್ಷದ ಕೆಲವು ಶಾಸಕರು ತಮ್ಮ ಅಭಿಪ್ರಾಯ ಹಂಚಿಕೊಳ್ಳುತ್ತಿದ್ದಾರೆ. ಅದು ಅವರ ಅಭಿಪ್ರಾಯವಷ್ಟೇ, ತೀರ್ಮಾನವಲ್ಲ. ಅವರು ಹೇಳಿಕೊಂಡು ತಿರುಗುತ್ತಿದ್ದಾರೆ. ತಿರುಗಲಿ ಎಂದು ತಿಳಿಸಿದ್ದಾರೆ. ಈ ಮಧ್ಯೆ ಮಹದೇವಪ್ಪ ಮಾತನಾಡಿ, ಸಿಎಂ ಹುದ್ದೆ ಖಾಲಿ ಇಲ್ಲ. ಸಿದ್ದರಾಮಯ್ಯ ಅವರು ಪೂರ್ಣಾವಧಿ ವರೆಗೂ ಇರುತ್ತಾರೆ ಎಂದು ಚುಟುಕಾಗಿ ಹೇಳಿದ್ದಾರೆ.

ಸಾಂಪ್ರದಾಯಿಕ ಚಾಮುಂಡೇಶ್ವರಿ ತೆಪ್ಪೋತ್ಸವ

ಸಂಭ್ರಮಿಸಿದರು. 5 ಗಂಟೆಯಿಂದ 5.45ರವರೆಗೆ ಪೊಲೀಸ್ ಬ್ಯಾಂಡ್‌ನ ಹಿನ್ನಲೆ ಸಂಗೀತ ಹಾಗೂ ವಾದ್ಯಮೇಳದೊಂದಿಗೆ ಸಿಡಿಮದ್ದುಗಳನ್ನು ಸಿಡಿಸಿ ತೆಪ್ಪೋತ್ಸವದ ಸಂಭ್ರಮವನ್ನು ಇಮ್ಮಡಿಗೊಳಿಸಲಾಯಿತು. ಸಂಜೆ 5.45ಕ್ಕೆ ದೇವಿಯ ಉತ್ಸವ ಮೂರ್ತಿ ಚಿನ್ನದ ಪಲ್ಲಕ್ಕಿಯಲ್ಲಿ ಇರಿಸಿಕೊಂಡು 6 ಗಂಟೆಯೊಳಗೆ ದೇವಾಲಯಕ್ಕೆ ಸೇರಿಸಿ ಬಾಗಿಲು ಬಂದ್ ಮಾಡಲಾಯಿತು. ಗ್ರಹಣ ಕಾಲದಲ್ಲಿ ದೇವಾಲಯದಲ್ಲಿ ಪೂಜಾ ಕಾರ್ಯ ಜರುಗುವುದರಿಂದ ಸಾರ್ವಜನಿಕ ಪ್ರವೇಶವನ್ನು ಶನಿವಾರ ಸಂಜೆ 6 ರಿಂದ ಭಾನುವಾರ ಬೆಳಗ್ಗೆ ವರೆಗೆ ಪ್ರವೇಶ ನಿರ್ಬಂಧಿಸಲಾಯಿತು.

ನೂರಾರು ಜನ ಭಾಗಿ: ಗ್ರಹಣದ ಹಿನ್ನೆಲೆಯಲ್ಲಿ ತೆಪ್ಪೋತ್ಸವವನ್ನು ಸಂಜೆಯ ನಿಗದಿತ ವೇಳೆಯಲ್ಲಿ ನೆರವೇರಿಸಲು ನಿರ್ಧರಿಸಲಾಗಿತ್ತು. ಆದ್ದರಿಂದ ಪ್ರತೀ ವರ್ಷಕ್ಕಿಂತ ತೆಪ್ಪೋತ್ಸವಕ್ಕೆ ಸೇರುತ್ತಿದ್ದ ಭಕ್ತರ ಸಂಖ್ಯೆ ಸ್ವಲ್ಪ ಪ್ರಮಾಣದಲ್ಲಿ ಕಡಿಮೆಯಾಗಿದ್ದರೂ ನೂರಾರು ಮಂದಿ ದೇವಿಯ ಕೃಪೆಗೆ ಪಾತ್ರರಾದರು. ದೇವಿಕೆರೆಯ ಸುತ್ತಲು ಜನ ನೆರೆದಿದ್ದರು.

ರಾಜವಂಶಸ್ಥರು ಗೈರು: ಚಾಮುಂಡೇಶ್ವರಿ ತೆಪ್ಪೋತ್ಸವದಲ್ಲಿ ಮುದ್ದು ಹಾಜರಿರುತ್ತಿದ್ದ ಮೈಸೂರು ರಾಜವಂಶಸ್ಥರು ಈ ಬಾರಿ ಚಂದ್ರ ಗ್ರಹಣ ಹಿನ್ನೆಲೆಯಲ್ಲಿ ಗೈರಾಗಿದ್ದರು. ದೇವಿಕೆರೆ ಬದಿಯಲ್ಲಿ ರಾಜವಂಶಸ್ಥರು ಕುಳಿತು ತೆಪ್ಪೋತ್ಸವ ವೀಕ್ಷಣೆ ಮಾಡಲು ಆಸನ ವ್ಯವಸ್ಥೆ ಮಾಡಲಾಗಿತ್ತು. ಆದರೆ, ಸಿಮೀತ ಅವಧಿಯಲ್ಲಿ ನೆರವೇರಿದ ಚಾಮುಂಡೇಶ್ವರಿಯ ತೆಪ್ಪೋತ್ಸವಕ್ಕೆ ರಾಜವಂಶಸ್ಥರಾದ ಪ್ರಮೋದಾದೇವಿ ಒಡೆಯರ್, ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಅವರು ಭಾಗವಹಿಸಲಿಲ್ಲ. ಚಾಮುಂಡೇಶ್ವರಿ ದೇಗುಲದ ಪ್ರಧಾನ ಆಗಮಿಕ ಶಶಿಶೇಖರ ದೀಕ್ಷಿತ್ ನೇತೃತ್ವದಲ್ಲಿ ನಾಡ ದೇವಿಯ ತೆಪ್ಪೋತ್ಸವ ಸಂಪನ್ನಗೊಂಡಿತು.

ಜೈಕಾರ, ಭಜನೆ: ದೇವಿಕೆರೆಯಿಂದ ಚಾಮುಂಡೇಶ್ವರಿ ಸನ್ನಿಧಿವರೆಗೆ ಚಿನ್ನದ ಪಲ್ಲಕ್ಕಿಯೊಂದಿಗೆ ಸಾಗಿದ ನೂರಾರು ಭಕ್ತರು ಮೆರವಣಿಗೆಯುದ್ದಕ್ಕೂ ಚಾಮುಂಡೇಶ್ವರಿಗೆ ಜೈಕಾರ ಕೂಗಿ ಭಕ್ತಿ ಮೆರೆದರು. ಕೆಲವರು ಭಜನೆ ಮಾಡುತ್ತಾ ಪಲ್ಲಕ್ಕಿಯೊಂದಿಗೆ ಸಾಗಿದರು.

> ಚಂದ್ರ ಗ್ರಹಣ ಹಿನ್ನೆಲೆಯಲ್ಲಿ ಈ ಬಾರಿ ಸಂಜೆ ವೇಳೆಯೇ ತೆಪ್ಪೋತ್ಸವ ನಡೆಸಲಾಯಿತು. ಎಲ್ಲಾ ಪೂಜಾ ಕೈಂಕರ್ಯಗಳನ್ನು ಸಂಪ್ರದಾಯ ಬದ್ಧವಾಗಿ ನೆರವೇರಿಸಲಾಗಿದೆ. ಚಂದ್ರ ಗ್ರಹಣ ಮೋಕ್ಷಗೊಂಡ ನಂತರ ಚಾಮುಂಡೇಶ್ವರಿ ದೇವಿಗೆ ಅಭಿಷೇಕ ಮಾಡಲಾಗುವುದು. ಗ್ರಹಣ ಆರಂಭವಾಗುವ ಮೂರು ಗಂಟೆ ಮುಂಚಿತವಾಗಿ ಪೂಜಾ ಕೈಂಕರ್ಯಗಳನ್ನು ಮುಗಿಸಬೇಕು. ಆದ್ದರಿಂದ ಈ ವರ್ಷ ಮುಸ್ಸಂಜೆ ವೇಳೆಯಲ್ಲಿ ತಾಯಿ ಚಾಮುಂಡೇಶ್ವರಿಯ ತೆಪ್ಪೋತ್ಸವ ನಡೆಸಲಾಗಿದೆ.
>
> – ಶಶಿಶೇಖರ ದೀಕ್ಷಿತ್, ಪ್ರಧಾನ ಆಗಮಿಕ, ಚಾಮುಂಡೇಶ್ವರಿ ದೇವಸ್ಥಾನ

ಜಾರಿಗೆ ಪ್ರತ್ಯೇಕ ಸಚಿವಾಲಯ ಸ್ಥಾಪನೆ

ಮಾಡಲಾಯಿತು. ಹಿಂದಿನ ಸರ್ಕಾರದವರು ಈ ಮೊತ್ತವನ್ನು ಹೆಚ್ಚಿಸಲಿಲ್ಲ. ನಮ್ಮ ಸರ್ಕಾರ ಈ ವರ್ಷದ ಆಯವ್ಯಯದಲ್ಲಿ ಈ ವರ್ಗಗಳಿಗೆ 34 ಸಾವಿರ ಕೋಟಿ ರೂ. ಅನುದಾನವನ್ನು ಮೀಸಲಿಟ್ಟಿದೆ ಎಂದು ತಿಳಿಸಿದರು. ರಾಜ್ಯದ ಒಟ್ಟು ಜನಸಂಖ್ಯೆಯ ಶೇ.17.1ರಷ್ಟು ಎಸ್‌ಸಿ ಹಾಗೂ ಶೇ.7 ರಷ್ಟು ಎಸ್‌ಟಿ ವರ್ಗಕ್ಕೆ ಸೇರಿದವರಿದ್ದಾರೆ. 2011ರ ಜನಗಣತಿ ಪ್ರಕಾರ, ಶೇ.24.1 ರಷ್ಟು ಎಸ್‌ಸಿ ಹಾಗೂ ಎಸ್‌ಟಿ ವರ್ಗದ ಜನಸಂಖ್ಯೆಯಿದೆ. ಈ ಜನಸಂಖ್ಯೆಗನು ಗುಣವಾಗಿ ಎಸ್ ಸಿ ಎಸ್ ಟಿ ವರ್ಗಗಳ ಕಲ್ಯಾಣಕ್ಕಾಗಿ ಪ್ರತ್ಯೇಕ ಅನುದಾನ ಮೀಸ ಲಿಡುವ ಬಗ್ಗೆ ಕಾನೂನು ತಂದ ಮೊದಲ ರಾಜ್ಯ ಕರ್ನಾಟಕ ಎಂಬ ಹೆಗ್ಗಳಿಕೆಗೆ ರಾಜ್ಯ ಪಾತ್ರವಾಗಿದೆ. ಯಾವುದೇ ಸರ್ಕಾರಗಳು ಬಂದರೂ ಈ ಕಾನೂನನ್ನು ಯಾರು ಬದಲಾಯಿಸಲು ಸಾಧ್ಯವಿಲ್ಲ. ಈ ಕಾನೂನು ನಂತರ 2013 ರಿಂದ 2018ರವರೆಗೆ ನಮ್ಮ ಸರ್ಕಾರ ಒಟ್ಟು 88 ಸಾವಿರ ಕೋಟಿ ರೂ.ಗಳನ್ನು ಎಸ್‌ಸಿ ಎಸ್ಟಿ ಜನರಿಗೆ ಮೀಸ ಲಿಡಲಾಗಿತ್ತು. ಈ ಪ್ರಮಾಣದ ಜನ ಸಂಖ್ಯೆಗೆ ಈ ಅನುದಾನ ರಾಜ್ಯಾಂಗ ಬದ್ಧವಾಗಿದೆ. ಜಿಲ್ಲಾ ಹಾಗೂ ತಾಲೂಕು ಕೇಂದ್ರಗಳಲ್ಲಿ ಮಹರ್ಷಿ ವಾಲ್ಮೀಕಿ ಜಯಂತಿಯನ್ನು ಆಚರಿಸಲಾಗುತ್ತಿದೆ ಎಂದು ತಿಳಿಸಿದರು.

ನಾಡಿನ ಸಮಸ್ತ ಜನತೆಗೆ ಮಹರ್ಷಿ ವಾಲ್ಮೀಕಿ ಜಯಂತ್ಯೋತ್ಸವದ ಶುಭಾಶಯಗಳನ್ನು ಮುಖ್ಯಮಂತ್ರಿಯವರು ಕೋರಿ ದರು. ಈ ಸಾಲಿನಲ್ಲಿ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ 8 ಸಾಧಕರಿಗೆ ಮಹರ್ಷಿ ವಾಲ್ಮೀಕಿ ಪ್ರಶಸ್ತಿಯನ್ನು ಪ್ರದಾನ ಮಾಡಲಾಗಿದ್ದು, ಕನ್ನಡ ನಾಡಿನ ಜನತೆಯ ಪರವಾಗಿ ಅವರಿಗೆ ಅಭಿನಂದನೆಗಳನ್ನು ಸಲ್ಲಿಸಿದರು. ಪ್ರಶಸ್ತಿ ಪುರಸ್ಕೃತರ ಸಾಧನೆಗಳು ಎಲ್ಲರಿಗೂ ದಾರಿದೀಪವಾಗಲಿ ಎಂದು ಹಾರೈಸಿದರು.



ವಿಶ್ವಕಪ್ ಮಹಾಸಮರ 2023

ರೋಚಕ ಪಂದ್ಯದಲ್ಲಿ ಕಿವೀಸ್ ಮಣಿಸಿದ ಆಸೀಸ್



ಧರ್ಮಶಾಲಾ, ಅ.28– ಕೊನೆವರೆಗೂ ಜಿದ್ದಾಜಿದ್ದಿಯಿಂದ ಕೂಡಿದ್ದ ರೋಚಕ ಪಂದ್ಯದಲ್ಲಿ ಆಸ್ಟ್ರೇಲಿಯಾ, ನ್ಯೂಜಿಲೆಂಡ್ ವಿರುದ್ಧ 5 ರನ್‌ಗಳ ರೋಚಕ ಜಯ ಸಾಧಿಸಿದೆ. ಆ ಮೂಲಕ ಆಸೀಸ್ ಸೆಮೀಸ್ ಹಾದಿ ಸುಲಭವಾದರೆ ಇತ್ತ ಕಿವೀಸ್ ಸತತ 2ನೇ ಸೋಲು ಅನುಭವಿಸಿದೆ.

ಇಲ್ಲಿನ ಹಿಮಾಚಲ ಪ್ರದೇಶ ಕ್ರಿಕೆಟ್ ಅಸೋಸಿಯೇಷನ್ ಕ್ರೀಡಾಂಗಣದಲ್ಲಿ ಟಾಸ್ ಸೋತು ಮೊದಲು ಬ್ಯಾಟ್ ಮಾಡಿದ ಆಸ್ಟ್ರೇಲಿಯಾ 49.2 ಓವರ್‌ಗಳಿಗೆ 388 ರನ್‌ಗಳಿಗೆ ಆಲೌಟಾಯಿತು. ತಂಡದ ಪರ ಇನ್ನಿಂಗ್ಸ್ ಆರಂಭಿಸಿದ ಡೇವಿಡ್ ವಾರ್ನರ್ ಹಾಗೂ ಟ್ರಾವಿಸ್ ಹೆಡ್ ಜಿದ್ದಿಗೆ ಬಿದ್ದವರಂತೆ ರನ್ ಗಳಿಸಿದರು. ಈ ಜೋಡಿ ಮೊದಲ ವಿಕೆಟ್‌ಗೆ 175 ರನ್ ಜೊತೆಯಾಟವಾಡಿ ಉತ್ತಮ ಆರಂಭ ಒದಗಿಸಿತು. ಆದರೆ 65 ಎಸೆತಗಳಲ್ಲಿ 6 ಸಿಕ್ಸರ್, 5 ಬೌಂಡರಿ ಒಳಗೊಂಡ ಬಿರುಸಿನ 81 ರನ್ ಗಳಿಸಿ ಡೇವಿಡ್ ವಾರ್ನರ್ ವಿಕೆಟ್ ಒಪ್ಪಿಸಿದರು. ಮತ್ತೊಂದೆಡೆ ವಿಶ್ವಕಪ್ ಪದಾರ್ಪಣೆ ಪಂದ್ಯದಲ್ಲೇ 59 ಎಸೆತಗಳಲ್ಲೇ ಸ್ಫೋಟಕ ಶತಕ ಸಿಡಿಸಿ ದಾಖಲೆ ನಿರ್ಮಿಸಿದ ಟ್ರಾವಿಸ್ ಹೆಡ್ 67 ಎಸೆತಗಳಲ್ಲಿ 7 ಸಿಕ್ಸರ್, 10 ಬೌಂಡರಿ ಒಳಗೊಂಡ 109 ರನ್ ಗಳಿಸಿ ನಿರ್ಗಮಿಸಿದರು. ನಂತರ ಕಣಕ್ಕಿಳಿದ ಮಿಚೆಲ್ ಮಾರ್ಷ್ 36, ಸ್ಟೀವ್ ಸ್ಮಿತ್ ಹಾಗೂ ಮಾರ್ನಸ್ ಲಾಬುಶೇನ್ ತಲಾ 18, ಗ್ಲೇನ್ ಮ್ಯಾಕ್ಸ್‌ವೆಲ್ 41, ಜಾಸ್ ಇಂಗ್ಲಿಸ್ 38, ಪ್ಯಾಟ್ ಕಮ್ಮಿನ್ಸ್ 37 ರನ್ ಗಳಿಸಿದರು.

ಕಿವೀಸ್ ಪರ ಟ್ರೆಂಟ್ ಬೌಲ್ಟ್, ಗ್ಲೇನ್ ಫಿಲಿಪ್ಸ್ ತಲಾ 3, ಮಿಚೆಲ್ ಸ್ಯಾಂಟ್ನರ್ 2, ಮ್ಯಾಟ್ ಹೆನ್ರಿ ಹಾಗೂ ಜೇಮ್ಸ್ ನೀಶಾಮ್ ತಲಾ ಒಂದೊಂದು ವಿಕೆಟ್ ಕಿತ್ತರು.

389 ರನ್‌ಗಳ ಬೃಹತ್ ಗೆಲುವಿನ ಗುರಿ ಬೆನ್ನತ್ತಿದ ನ್ಯೂಜಿಲೆಂಡ್ 50 ಓವರ್‌ಗಳಲ್ಲಿ 9 ವಿಕೆಟ್ ನಷ್ಟಕ್ಕೆ 383 ರನ್ ಗಳಿಸಿ ವಿರೋಚಿತ ಸೋಲಿಗೆ ಒಳಗಾಯಿತು. ತಂಡದ ಪರ ರಚಿನ್ ರವೀಂದ್ರ 89 ಎಸೆತಗಳಲ್ಲಿ 5 ಸಿಕ್ಸ್, 9 ಬೌಂಡರಿ ಒಳಗೊಂಡ 116ರನ್ ಗಳಿಸಿ ವಿಕೆಟ್ ಒಪ್ಪಿಸಿದರು. ಉಳಿದಂತೆ ಡಿವೋನ್ ಕಾನ್ವೆ 28, ವಿಲ್ ಯಂಗ್ 32, ಡೇರಿಲ್ ಮಿಚೆಲ್ 54, ಟಾಮ್ ಲಾಥಮ್ 21, ಗ್ಲೇನ್ ಫಿಲಿಪ್ಸ್ 12, ಮಿಚೆಲ್ ಸ್ಯಾಂಟ್ನರ್ 17, ಮ್ಯಾಟ್ ಹೆನ್ರಿ 9, ಜೇಮ್ಸ್ ನೀಶಮ್ 51, ಟ್ರೆಂಟ್ ಬೌಲ್ಟ್ 10 ರನ್ ಗಳಿಸಿದರು. ಆಡಂ ಜಂಪಾ 3, ಜೋಶ್ ಹ್ಯಾಸೆಲ್‌ವುಡ್, ಪ್ಯಾಟ್ ಕಮ್ಮಿನ್ಸ್ ತಲಾ 2, ಗ್ಲೇನ್ ಮ್ಯಾಕ್ಸ್‌ವೆಲ್ 1 ವಿಕೆಟ್ ಪಡೆದರು. ಟ್ರಾವಿಸ್ ಹೆಡ್ ಪಂದ್ಯಶ್ರೇಷ್ಠ ಪ್ರಶಸ್ತಿಗೆ ಭಾಜನರಾದರು.

ಅಂಕಪಟ್ಟಿ ವಿವರ

ತಂಡ	ಪಂದ್ಯಗಳು	ಗೆಲುವು	ಸೋಲು	ಡ್ರಾ	ಅಂಕ
ದಕ್ಷಿಣ ಆಫ್ರಿಕಾ	6	5	1	0	10
ಇಂಡಿಯಾ	5	5	0	0	10
ನ್ಯೂಜಿಲ್ಯಾಂಡ್	6	4	2	0	8
ಆಸ್ಟ್ರೇಲಿಯಾ	6	4	2	0	8
ಶ್ರೀಲಂಕಾ	5	2	3	0	4
ಪಾಕಿಸ್ತಾನ	6	2	4	0	4
ಅಫ್ಘಾನಿಸ್ತಾನ್	5	2	3	0	4
ನೆದರ್‌ಲ್ಯಾಂಡ್ಸ್	6	2	4	0	4
ಬಾಂಗ್ಲಾದೇಶ	6	1	5	0	2
ಇಂಗ್ಲೆಂಡ್	5	1	4	0	2

ಬಾಂಗ್ಲಾಗೆ ಶಾಕ್ ನೀಡಿದ ಡಚ್ಚರು

ನೆದರ್ಲೆಂಡ್ಸ್‌ಗೆ 87 ರನ್ ಜಯ, ಪಾಲ್ ವ್ಯಾನ್ ಮೀಕೆರೆನ್ ಪಂದ್ಯಶ್ರೇಷ್ಠ



ಕೋಲ್ಕತಾ, ಅ.28– ನಾಯಕ ಸ್ಕಾಟ್ ಎಡ್ವರ್ಡ್ಸ್ ಅವರ ಅರ್ಧ ಶತಕ ಹಾಗೂ ಪಾಲ್ ವ್ಯಾನ್ ಮೀಕೆರೆನ್ ಅವರ ಬೌಲಿಂಗ್ ದಾಳಿ ನೆರವಿನಿಂದ ಬಾಂಗ್ಲಾ ದೇಶದ ವಿರುದ್ಧ ನೆದರ್ಲೆಂಡ್ಸ್ 87 ರನ್‌ಗಳ ಜಯ ಸಾಧಿಸಿದೆ.

ಈಗಾಗಲೇ ಟೂರ್ನಿಯಲ್ಲಿ ದಕ್ಷಿಣ ಆಫ್ರಿಕಾವನ್ನು ಮಣಿಸಿ ಸಂಚಲನ ಮೂಡಿಸಿರುವ ಡಚ್ ತಂಡ, ಇದೀಗ ಬಾಂಗ್ಲಾದೇಶ ತಂಡಕ್ಕೆ ಮರ್ಮಾಘಾತ ನೀಡಿದೆ.

ಇಲ್ಲಿನ ಈಡನ್ ಗಾರ್ಡನ್ ಮೈದಾನದಲ್ಲಿ ನಡೆದ ಪಂದ್ಯದಲ್ಲಿ ಟಾಸ್ ಗೆದ್ದು ಮೊದಲು ಬ್ಯಾಟಿಂಗ್ ಮಾಡಿದ ನೆದರ್ಲೆಂಡ್ಸ್ ನಿಗದಿತ 50 ಓವರ್‌ಗಳಲ್ಲಿ 229 ರನ್‌ಗಳಿಗೆ ಆಲೌಟ್ ಆಯಿತು. ತಂಡದ ಪರ ವೆಸ್ಲಿ ಬ್ಯಾರೆಸಿ 41, ಕಾಲಿನ್ ಅಕರ್ಮನ್ 15, ಸ್ಕಾಟ್ ಎಡ್ವರ್ಡ್ಸ್ 68, ಬಾಸ್ ಡಿ ಲೀಡೆ 17, ಸೈಬ್ರಾಂಡ್ ಎಂಗಲ್‌ಬ್ರೆಕ್ಟ್ 35, ವ್ಯಾನ್ ಬೀಕ್ 23ರನ್ ಗಳಿಸಿದರು. ಬಾಂಗ್ಲಾದೇಶ ಪರ ಮುಸ್ತಾಫಿಝುರ್ ರೆಹಮಾನ್, ಟಾಸ್ಕಿನ್ ಅಹ್ಮದ್, ಶೋರಿಫುಲ್ ಇಸ್ಲಾಂ ಮತ್ತು ಮೆಹದಿ ಹಸನ್ ತಲಾ 2, ಶಕೀಬ್ ಅಲ್ ಹಸನ್ 1 ವಿಕೆಟ್ ಉರುಳಿಸಿದರು.

230 ರನ್‌ಗಳ ಗೆಲುವಿನ ಗುರಿ ಬೆನ್ನತ್ತಿದ ಬಾಂಗ್ಲಾದೇಶ 42.2 ಓವರ್‌ಗಳಲ್ಲಿ 142ರನ್‌ಗಳಿಗೆ ಆಲೌಟ್ ಆಗುವ ಮೂಲಕ ಸೋಲು ಒಪ್ಪಿಕೊಂಡಿತು. ತಂಡದ ಪರ ತಂಜೀದ್ ಹಸನ್ 15, ಮೆಹದಿ ಹಸನ್ ಮಿರಾಜ್ 35, ಮಹಮದುಲ್ಲಾ, ಮುಸ್ತಾಫಿಝುರ್ ರೆಹಮಾನ್ 20, ಮೆಹದಿ ಹಸನ್ 17, ತಸ್ಕೀನ್ ಅಹಮದ್ 11ರನ್ ಗಳಿಸಿದರು. ನೆದರ್ಲೆಂಡ್ಸ್ ಪರ ಪಾಲ್ ವ್ಯಾನ್ ಮೀಕೆರೆನ್ 4, ಬಾಸ್ ಡಿ ಲೀಡೆ 2, ಆರ್ಯನ್ ದತ್, ಲೋಗನ್ ವ್ಯಾನ್ ಬೀಕ್ ಹಾಗೂ ಕಾಲಿನ್ ಅಕರ್ಮನ್ ತಲಾ ಒಂದೊಂದು ವಿಕೆಟ್ ಪಡೆದರು. ಪಾಲ್ ವ್ಯಾನ್ ಮೀಕೆರೆನ್ ಪಂದ್ಯಶ್ರೇಷ್ಠ ಪ್ರಶಸ್ತಿಗೆ ಭಾಜನರಾದರು. ಬಾಂಗ್ಲಾದೇಶ ವಿರುದ್ಧದ ಗೆಲುವಿನೊಂದಿಗೆ ನೆದರ್ಲೆಂಡ್ಸ್ ಈ ವಿಶ್ವಕಪ್‌ನಲ್ಲಿ ಎರಡನೇ ಜಯ ದಾಖಲಿಸಿತು.

ಇಂದಿನ ಪಂದ್ಯ
ಭಾರತ vs ಇಂಗ್ಲೆಂಡ್
ಸಮಯ: ಮ.2.00ಕ್ಕೆ, ಸ್ಥಳ: ಲಕ್ನೋ

2025ಕ್ಕೆ 2 ಬಿಲಿಯನ್ ಟೆರಾಬೈಟ್ ಡೇಟಾ ಕ್ಲೌಡ್ ಕಂಪ್ಯೂಟಿಂಗ್‌ನಲ್ಲಿ ಸಂಗ್ರಹ

ಸೀನಿಯರ್ ಇಂಜಿನಿಯರ್ ಎನ್.ವಿನಯ್ ಕುಮಾರ್



ಮೈಸೂರು,ಅ.28(ಪಿಎಂ)–ಇಡೀ ಪ್ರಪಂಚದಲ್ಲಿ 2025ರ ವೇಳೆಗೆ ಸುಮಾರು 2 ಬಿಲಿಯನ್ ಟೆರಾಬೈಟ್ ಡೇಟಾ ಕ್ಲೌಡ್ ಕಂಪ್ಯೂಟಿಂಗ್‌ನಲ್ಲಿ ಸಂಗ್ರಹಗೊಳ್ಳುವ ಅಂದಾಜಿದೆ ಎಂದು ಜೀಬ್ರಾ ಟೆಕ್ನಾಲಜೀಸ್‌ನ ಸೀನಿಯರ್ ಇಂಜಿನಿಯರ್ ಎನ್.ವಿನಯ್ ಕುಮಾರ್ ತಿಳಿಸಿದರು.

ಮೈಸೂರಿನ ಜೆಎಲ್‌ಬಿ ರಸ್ತೆಯಲ್ಲಿರುವ ಇಂಜಿನಿಯರ್‌ಗಳ ಸಂಸ್ಥೆಯ (ಮೈಸೂರು ಘಟಕ) ಎಸ್.ಪಿ.ಭಟ್ ಸಭಾಂಗಣದಲ್ಲಿ ಸಂಸ್ಥೆ ವತಿಯಿಂದ ಶನಿವಾರ ಹಮ್ಮಿಕೊಂಡಿದ್ದ ತಾಂತ್ರಿಕ ಉಪನ್ಯಾಸದಲ್ಲಿ 'ಕ್ಲೌಡ್ ಕಂಪ್ಯೂಟಿಂಗ್' ಕುರಿತು ಅವರು ಮಾತನಾಡಿದರು.

2022ರಲ್ಲಿ ಶೇ.60ರಷ್ಟು ಕಾರ್ಪೊರೇಟ್ ಡೇಟಾವನ್ನು ಕ್ಲೌಡ್‌ನಲ್ಲಿ ಸಂಗ್ರಹಿಸಲಾಗಿದೆ. ನಾವು ಬಹುತೇಕ ಮಂದಿ ಇಂದು ಕ್ಲೌಡ್ ಅಪ್ಲಿಕೇಷನ್‌ಗಳನ್ನು ಬಳಸುತ್ತಿದ್ದೇವೆ. ಹಾಗಾಗಿ ಕ್ಲೌಡ್ ಕಂಪ್ಯೂಟಿಂಗ್ ನಮ್ಮ ಸುತ್ತಮುತ್ತ ಇದ್ದೇ ಇದೆ. ಯಾವುದೇ ವೆಬ್‌ಸೈಟ್ ಅನಾವರಣಗೊಳಿಸಲು ಸರ್ವರ್ ಅಗತ್ಯವಾಗುತ್ತದೆ ಎಂದರು.

ನಮ್ಮ ಪರ್ಸನಲ್ ಕಂಪ್ಯೂಟರ್‌ನಲ್ಲಿ ಮಾಹಿತಿಗಳನ್ನು ಸಂಗ್ರಹಿಸಿಟ್ಟುಕೊಳ್ಳದೇ ಇಂಟರ್‌ನೆಟ್‌ನಲ್ಲಿ ಸಂಗ್ರಹಿಸಿಟ್ಟರೆ ಅದೇ ಕ್ಲೌಡ್ ಕಂಪ್ಯೂಟಿಂಗ್. ಇಂಟರ್‌ನೆಟ್ ಲಭ್ಯವಿರುವ ಕಡೆ ಯಾವಾಗ ಬೇಕಾದರೂ ಎಲ್ಲಿ ಬೇಕಾದರೂ ಸಂಗ್ರಹಿಸಿಟ್ಟ ನಮ್ಮ ಮಾಹಿತಿ ತೆರೆಯಬಹುದು. ಇಂತಹ ಸೌಲಭ್ಯವನ್ನು ಕ್ಲೌಡ್ ಕಂಪ್ಯೂಟಿಂಗ್ ಕಲ್ಪಿಸುತ್ತದೆ ಎಂದು ತಿಳಿಸಿದರು.

ಕ್ಲೌಡ್ ಕಂಪ್ಯೂಟಿಂಗ್‌ನಲ್ಲಿ ಅನಿಯಮಿತ ಸಂಗ್ರಹಕ್ಕೆ ಅವಕಾಶವಿದೆ. ನೀವು ಅಮೆಜಾನ್ ಅಥವಾ ನೆಟ್‌ಫ್ಲಿಕ್ಸ್‌ನಲ್ಲಿ ಸಿನಿಮಾ ವೀಕ್ಷಿಸಿದರೆ ಮುಂದಿನ ಬಾರಿ ನೀವು ಲಾಗ್ ಇನ್ ಆದಾಗ ಕೆಲವು ಶಿಫಾರಸ್ಸುಗಳು ನಿಮಗೆ ಗೋಚರಿಸುತ್ತವೆ. ಈ ಪ್ರಕ್ರಿಯೆ ಹಿಂದೆಯೂ ಕ್ಲೌಡ್ ಕಂಪ್ಯೂಟಿಂಗ್ ಪಾತ್ರವಿದೆ. ಕ್ಲೌಡ್ ಗೇಮಿಂಗ್ ಮಾರುಕಟ್ಟೆಯು ಮುಂದಿನ ವರ್ಷದ ವೇಳೆಗೆ 6.3 ಶತಕೋಟಿ ಡಾಲರ್‌ಗಳನ್ನು ತಲುಪುವ ನಿರೀಕ್ಷೆಯಿದೆ. ಕ್ಲೌಡ್ ಸೇವೆ ಒದಗಿಸುವಲ್ಲಿ ಅಮೆಜಾನ್ ಮುಂದಿದೆ ಎಂದು ವಿವರಿಸಿದರು.

ಇಂಜಿನಿಯರ್‌ಗಳ ಸಂಸ್ಥೆ ಮೈಸೂರು ಘಟಕದ ಅಧ್ಯಕ್ಷ ಬಿ.ಎಸ್.ಪ್ರಭಾಕರ, ಜಂಟಿ ಕಾರ್ಯದರ್ಶಿ ಡಾ.ಆರ್.ದೀಪು, ಗೌರವ ಕಾರ್ಯದರ್ಶಿ ಹೆಚ್.ಎಸ್.ಸುರೇಶ್ ಬಾಬು ಮತ್ತಿತರರು ಹಾಜರಿದ್ದರು.

'ಪ್ರಾಣಾಭಿಸರ ವೈದ್ಯಮಿತ್ರ' ಪ್ರಶಸ್ತಿಗೆ ಡಾ.ಬಿ.ಗುರುಬಸವರಾಜ ಆಯ್ಕೆ

ಇಂದು ಪ್ರಶಸ್ತಿ ಪ್ರದಾನ



ಮೈಸೂರು,ಅ.28(ಪಿಎಂ)–'ವೈದ್ಯಮಿತ್ರ' ಮಾಸಿಕ ಪತ್ರಿಕೆ ವತಿಯಿಂದ ಕೊಡಮಾಡಲಿರುವ ಮೊಟ್ಟ ಮೊದಲ 'ಪ್ರಾಣಾಭಿಸರ ವೈದ್ಯಮಿತ್ರ' ಅಂತಾರಾಷ್ಟ್ರೀಯ ಪ್ರಶಸ್ತಿಗೆ ಮೈಸೂರಿನ ಜೆಎಸ್‌ಎಸ್ ಆಯುರ್ವೇದ ವೈದ್ಯಕೀಯ ಕಾಲೇಜಿನ ನಿವೃತ್ತ ಪ್ರಾಧ್ಯಾಪಕರೂ ಆದ ಖ್ಯಾತ ಆಯುರ್ವೇದ ವೈದ್ಯ ಡಾ.ಬಿ.ಗುರುಬಸವರಾಜ ಅವರನ್ನು ಆಯ್ಕೆ ಮಾಡಲಾಗಿದೆ.

ಬೆಂಗಳೂರು ಜಯನಗರದ ಅಪೋಲೋ ಸ್ಪೆಷಾಲಿಟಿ ಆಸ್ಪತ್ರೆ, ವೈದ್ಯಮಿತ್ರ ಪತ್ರಿಕೆ ಹಾಗೂ ಎನ್‌ಐಎಂಎ ಬೆಂಗಳೂರು–ರಾಮನಗರ ಘಟಕಗಳ ಸಂಯುಕ್ತಾಶ್ರಯದಲ್ಲಿ ಅ.29ರಂದು ಬೆಂಗಳೂರಿನ ಸೌತ್‌ಎಂಡ್ ಸರ್ಕಲ್ ಬಳಿಯ ಹೋಟೆಲ್ ಲಾ ಮಾರ್ವೆಲ್ಲಾದಲ್ಲಿ ಅಂದು ಸಂಜೆ 4ಕ್ಕೆ ಪ್ರಶಸ್ತಿ ಪ್ರದಾನ ಸಮಾರಂಭ ನಡೆಯಲಿದೆ.

ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ರಾಜ್ಯ ಸರ್ಕಾರದ ಆಯುಷ್ ಇಲಾಖೆಯ ಆಯುಕ್ತರಾದ ಲೀಲಾವತಿ, ಜಂಟಿ ನಿರ್ದೇಶಕ ಡಾ.ಬಿ.ಎಸ್.ಶ್ರೀಧರ್, ರಾಜ್ಯ ಮುಖ್ಯ ಯೋಜನೆ ಮತ್ತು ಅಭಿವೃದ್ಧಿ ಅಧಿಕಾರಿ ಡಾ.ಮೊಹಮ್ಮದ್ ರಫಿ ಹಕೀಂ, ಹಾಸನದ ಎಸ್‌ಡಿಎಂ ಆಯುರ್ವೇದ ವೈದ್ಯಕೀಯ ಕಾಲೇಜಿನ ಪ್ರಾಂಶುಪಾಲ ಡಾ.ಪ್ರಸನ್ನ ಎನ್.ರಾವ್, ನವದೆಹಲಿಯ ಸಿಸಿಐಎಂ ಮಾಜಿ ಉಪಾಧ್ಯಕ್ಷ ಡಾ.ಜಯಪ್ರಕಾಶ್ ನಾರಾಯಣ್, ಎನ್‌ಐಎಂಎ ಇಂಡಿಯಾ ಮಾಜಿ ಅಧ್ಯಕ್ಷ ಡಾ.ಕೆ.ಸಿ. ಬಲ್ಲಾಳ್, ಮೈಸೂರಿನ ಸರ್ಕಾರಿ ಆಯುರ್ವೇದ ಸಂಶೋಧನಾ ಕೇಂದ್ರದ ಜಂಟಿ ನಿರ್ದೇಶಕ ಡಾ.ಲಕ್ಷ್ಮಿನಾರಾಯಣ ಶೆಣೈ ಅತಿಥಿಗಳಾಗಿ ಭಾಗವಹಿಸಲಿದ್ದಾರೆ.

ವಿಶೇಷ ಆಹ್ವಾನಿತರಾಗಿ ಬೆಂಗಳೂರಿನ ಶ್ರೀ ಶ್ರೀ ಕಾಲೇಜ್ ಆಫ್ ಆಯುರ್ವೇದ ಸೈನ್ಸ್ ಅಂಡ್ ರಿಸರ್ಚ್ ಹಾಸ್ಪಿಟಲ್ ಪ್ರಾಂಶುಪಾಲ ಡಾ.ಗಣೇಶ್ ಪುತ್ತೂರು, ಮೈಸೂರಿನ ಜೆಎಸ್‌ಎಸ್ ಆಯುರ್ವೇದ ವೈದ್ಯಕೀಯ ಕಾಲೇಜಿನ ಪ್ರಾಂಶುಪಾಲ ಡಾ.ಸರ್ಬೇಶ್ವರ್‌ಕರ್ ಪಾಲ್ಗೊಳ್ಳಲಿದ್ದಾರೆ.

ಬಳಿಕ ಸಂಜೆ 5ಕ್ಕೆ ಇದೇ ಹೋಟೆಲ್‌ನಲ್ಲಿ ವೈಜ್ಞಾನಿಕ ವಿಚಾರಗೋಷ್ಠಿ ನಡೆಯಲಿದೆ. ಇದರಲ್ಲಿ ಜಿಐ ಎಂಎಎಸ್ ನಿರ್ದೇಶಕ ಡಾ.ಆಶಿಶ್ ಆರ್.ಶಾ, ವೈದ್ಯ ಡಾ.ಆದೇಶ್ ಎ.ಶೆಟ್ಟಿ, ನಿಮ್ಹಾನ್ಸ್ ಮಾಜಿ ಕುಲಪತಿ ಡಾ.ಪಿ.ಸತೀಶ್ ಚಂದ್ರ, ವೈದ್ಯರಾದ ಡಾ.ಕೆ.ಎನ್.ಕೃಷ್ಣ, ಡಾ.ಬಿ.ಎ.ಚಂದ್ರಮೌಳಿ, ಡಾ.ಚಿನ್ಮಯ್ ಪಿ.ನಾಗೇಶ್, ಡಾ.ಅನಿರುದ್ಧ ವಿಲಾಸ್‌ಕುಲಕರ್ಣಿ ಪಾಲ್ಗೊಳ್ಳಲಿದ್ದಾರೆ. ಪತ್ರಿಕೆಯ ಸಂಪಾದಕೀಯ ಮಂಡಳಿಯ ಡಾ.ಟಿ.ಎಸ್.ಭಾರದ್ವಾಜನ್, ಡಾ.ರಾಜಶೇಖರ್ ಭೂಸನೂರಮಠ, ಡಾ.ಎಸ್.ವಿಕ್ರಮ್, ಡಾ.ಎಂ.ಎಲ್.ರಾಜೇಂದ್ರ ಪ್ರಸಾದ್, ಡಾ.ಎಂ.ವಿಜಯರಾಜ್, ಡಾ.ಕಲ್ಲೇಶ್ ಮುರಸಿಳ್ಳಿನ್, ಡಾ.ಮನ್ನೆ ಮೋಹನ್ ಉಪಸ್ಥಿತರಿರಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ರಾಸಾಯನಿಕ ಮುಕ್ತ ವಸ್ತುಗಳ ಪ್ರದರ್ಶನ, ಮಾರಾಟ



ಮೈಸೂರು,ಅ.28(ಎಂಟಿವೈ)– ಮೈಸೂರಿನ ನಂಜರಾಜ ಬಹದ್ದೂರ್ ಕಲ್ಯಾಣ ಮಂಟಪದಲ್ಲಿ ಅ.29ರಂದು ಬೆಳಗ್ಗೆ 10ರಿಂದ ಸಂಜೆ 6ರವರೆಗೆ ಮಹಿಳಾ ಸಂಘಗಳು ಉತ್ಪಾದಿಸಿದ ವಸ್ತುಗಳ ಪ್ರದರ್ಶನ ಮತ್ತು ಮಾರಾಟ ಮೇಳ ಆಯೋಜಿಸಲಾಗಿದೆ ಎಂದು ಮೇಳದ ಆಯೋಜಕಿ ಟಿ.ಗಾಯತ್ರಿ ತಿಳಿಸಿದ್ದಾರೆ.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮಹಿಳಾ ಸಬಲೀಕರಣದ ಹಿನ್ನೆಲೆಯಲ್ಲಿ ಮಹಿಳೆಯರು ಹಾಗೂ ಮಹಿಳಾ ಸ್ವಸಹಾಯ ಸಂಘಗಳು ಉತ್ಪಾದಿಸಿದ ವಸ್ತುಗಳ ಮಾರಾಟಕ್ಕೆ ವೇದಿಕೆ ಕಲ್ಪಿಸುವುದರೊಂದಿಗೆ ವಿವಿಧ ವಸ್ತುಗಳನ್ನು ಉತ್ಪಾದಿಸುವ ಮಹಿಳಾ ಸಂಘಗಳನ್ನು ಒಂದೆಡೆ ಸೇರಿಸುವ ನಿಟ್ಟಿನಲ್ಲಿ ದಾವಣಗೆರೆಯ ಸಂತೆಬೆನ್ನೂರಿನ ಗಯೂಸ್ ಗ್ಲಿಟ್ಜ್ ಯೂಟ್ಯೂಬ್ ಚಾನೆಲ್ ವತಿಯಿಂದ ಈ ಮೇಳ ಆಯೋಜಿಸಲಾಗಿದೆ. ಕೈಮಗ್ಗದ ಬಟ್ಟೆ, ಗಾಣದ ಎಣ್ಣೆ ಸೇರಿದಂತೆ ಇನ್ನಿತರ ಉತ್ಪನ್ನಗಳನ್ನು ಪ್ರದರ್ಶನ ಮತ್ತು ಮಾರಾಟ ವ್ಯವಸ್ಥೆ ಮಾಡಲಾಗಿದೆ. 25 ಕ್ಕೂ ಹೆಚ್ಚು ಮಹಿಳೆಯರು ತಾವು ತಯಾರಿಸಿದ ರಾಸಾಯನಿಕ ಮುಕ್ತ ವಸ್ತು, ಕೈಮಗ್ಗದ ಬಟ್ಟೆ, ಗಾಣದ ಎಣ್ಣೆಯನ್ನು ಇಲ್ಲಿ ಮಾರಾಟ ಮಾಡಲಿದ್ದಾರೆ ಎಂದರು.

ಸುದ್ದಿಗೋಷ್ಠಿಯಲ್ಲಿ ಮೇಳದ ಆಯೋಜಕರಾದ ಪಿ.ವಿ. ರವಿಕುಮಾರ್, ಪ್ರದೀಪ್, ಮಹೇಶ್‌ರಾಜೇ ಅರಸ್ ಇದ್ದರು.


ದರಪಟ್ಟಿ ಆಹ್ವಾನ

ಮೈಸೂರು, ಅ.28– ಮೈಸೂರು ಜಿಲ್ಲಾ ಕೃಷಿ ತರಬೇತಿ ನಾಗನಹಳ್ಳಿ ಕೇಂದ್ರದ ವತಿಯಿಂದ ವಿವಿಧ ಕೃಷಿ ತರಬೇತಿಯನ್ನು ಆಯೋಜಿಸಲಾಗುತ್ತಿದ್ದು, ಕಾರ್ಯಕ್ರಮಗಳಲ್ಲಿ ಭಾಗವಹಿಸುವ ಶಿಬಿರಾರ್ಥಿಗಳಿಗೆ ಅಗತ್ಯವಿರುವ ಉಪಾಹಾರ ಲಘು ಉಪಾಹಾರ, ಟೀ, ಕಾಫಿ ಇತ್ಯಾದಿಗಳನ್ನು ಪೂರೈಕೆ ಮಾಡಲು ಆಸಕ್ತ ಸರಬರಾಜುದಾರರಿಂದ ದರಪಟ್ಟಿ ಆಹ್ವಾನಿಸಲಾಗಿದೆ.

ಹೆಚ್ಚಿನ ಮಾಹಿತಿಗಾಗಿ ನಾಗನಹಳ್ಳಿಯಲ್ಲಿರುವ ಜಿಲ್ಲಾ ಕೃಷಿ ತರಬೇತಿ ಕೇಂದ್ರವನ್ನು ಸಂಪರ್ಕಿಸಬಹುದು ಎಂದು ಜಿಲ್ಲಾ ಕೃಷಿ ತರಬೇತಿ ಕೇಂದ್ರದ ಉಪ ಕೃಷಿ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನರೆಡ್ಕೋ ನೂತನ ಪದಾಧಿಕಾರಿಗಳ ಪದಗ್ರಹಣ

ಕಾನೂನುಬಾಹಿರ ಬಡಾವಣೆ ನಿರ್ಮಿಸುವವರ ವಿರುದ್ಧ ಕ್ರಮ: ಸಚಿವ ಚಲುವರಾಯಸ್ವಾಮಿ ಎಚ್ಚರಿಕೆ



ನರೆಡ್ಕೋ ಸಂಸ್ಥಾಪನಾ ದಿನ ಹಾಗೂ ಮೈಸೂರು ವಿಭಾಗದ ನೂತನ ಪದಾಧಿಕಾರಿಗಳ ಪದಗ್ರಹಣ ಸಮಾರಂಭವನ್ನು ಕೃಷಿ ಸಚಿವ ಎನ್.ಚಲುವರಾಯಸ್ವಾಮಿ ಉದ್ಘಾಟಿಸಿದರು. ಶಾಸಕ ಎ.ಬಿ.ರಮೇಶ್ ಬಂಡಿಸಿದ್ದೇಗೌಡ, ನರೆಡ್ಕೋ ಪದಾಧಿಕಾರಿಗಳು ಉಪಸ್ಥಿತರಿದ್ದರು.

ಮೈಸೂರು, ಅ.28(ಎಂಕೆ)– ನಗರದ ರ್‍ಯಾಡಿಸನ್ ಬ್ಲೂ ಹೋಟೆಲ್‌ನಲ್ಲಿ ನರೆಡ್ಕೋ(ನ್ಯಾಷನಲ್ ರಿಯಲ್ ಎಸ್ಟೇಟ್ ಡೆವಲಪ್‌ಮೆಂಟ್ ಕೌನ್ಸಿಲ್) ಸಂಸ್ಥಾಪನಾ ದಿನ ಹಾಗೂ ಮೈಸೂರು ವಿಭಾಗದ ನೂತನ ಪದಾಧಿಕಾರಿಗಳ ಪದಗ್ರಹಣ ಸಮಾರಂಭ ಶುಕ್ರವಾರ ನೆರವೇರಿತು.

2023–25ನೇ ಸಾಲಿನ ನರೆಡ್ಕೋ ಮೈಸೂರು ವಿಭಾಗದ ನೂತನ ಛೇರ್ಮನ್ ಆಗಿ ಟಿ.ಜಿ.ಆದಿಶೇಷನ್ ಗೌಡ, ಅಧ್ಯಕ್ಷರಾಗಿ ವಿ.ಸಿ.ರವಿಕುಮಾರ್, ಉಪಾಧ್ಯಕ್ಷರಾಗಿ ಡಾ.ಎಂ.ಡಿ.ರಾಘವೇಂದ್ರ ಪ್ರಸಾದ್, ಗೌರವ ಕಾರ್ಯದರ್ಶಿಯಾಗಿ ಪಿ.ವಿನಯ್ ಶಂಕರ್, ಖಜಾಂಚಿಯಾಗಿ ಎ.ಪಿ.ನಾಗೇಶ್ ಹಾಗೂ ಜಂಟಿ ಕಾರ್ಯದರ್ಶಿಯಾಗಿ ಪಿ.ಎಸ್.ಗಗನ್ ದೀಪ್ ಪ್ರಮಾಣ ವಚನ ಬೋಧಿಸುವ ಮೂಲಕ ಅಧಿಕಾರ ಸ್ವೀಕರಿಸಿದರು.

ಹಾಗೆಯೇ ಆಡಳಿತ ಮಂಡಳಿ ಸದಸ್ಯರಾಗಿ ಮೈಸೂರು ವಿಭಾಗದ ಮಾಜಿ ಅಧ್ಯಕ್ಷ ಎನ್.ದಿವ್ಯೇಶ್, ಮಾಜಿ ಕಾರ್ಯದರ್ಶಿ ಎಂ.ಎಲ್.ನಾಗೇಶ್, ಧೀರೇಂದ್ರ ಕುಮಾರ್ ಮೆಹ್ತಾ, ಜಿ.ಕೆ.ಸುದೀಂದ್ರ, ಎಸ್.ಹೆಚ್.ಜಗದೀಶ್, ಪಿ.ನಂಜುಂಡ ಸ್ವಾಮಿ, ಗಣೇಶ್ ನಾರಾಯಣ ಹೆಗಡೆ ಹಾಗೂ ವಿ.ಮೋಹನ್ ಕುಮಾರ್ ಅಧಿಕಾರ ಸ್ವೀಕರಿಸಿದರು.

ಪದಗ್ರಹಣ ಸಮಾರಂಭವನ್ನು ಉದ್ಘಾಟಿಸಿದ ಕೃಷಿ ಸಚಿವ ಎನ್.ಚಲುವರಾಯಸ್ವಾಮಿ ಮಾತನಾಡಿ, ಕಾನೂನು ಬಾಹಿರವಾಗಿ ಬಡಾವಣೆಗಳನ್ನು ಅಭಿವೃದ್ಧಿ ಪಡಿಸಿರುವವರ ವಿರುದ್ಧ ಕ್ರಮಕೈಗೊಳ್ಳುವ ಕುರಿತು ಸರ್ಕಾರದ ಮಟ್ಟದಲ್ಲಿ ಚಿಂತನೆ ನಡೆಸಲಾಗುತ್ತಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ತವರು ಜಿಲ್ಲೆಯಾದ ಮೈಸೂರಿನ ಸಮಗ್ರ ಅಭಿವೃದ್ಧಿ ಕುರಿತು ಮುಖ್ಯಮಂತ್ರಿಗಳ ಗಮನಕ್ಕೆ ತರುವ ಪ್ರಯತ್ನವನ್ನು ನಾವು ಮಾಡುತ್ತೇವೆ. ನೀವೂ ಕೂಡ ಅವರನ್ನು ಭೇಟಿ ಮಾಡಿ ಮನವರಿಕೆ ಮಾಡಿಕೊಡಿ ಎಂದು ಸಲಹೆ ನೀಡಿದರು.

ಸಾಂಸ್ಕೃತಿಕ ನಗರಿ ಮೈಸೂರು ಅಕ್ಷರಶಃ ಮೈಸೂರು ಪಾಕ್‌ನಂತೆಯೇ ಇದೆ. ಅದರಲ್ಲಿ ಯಾವುದೇ ಅನುಮಾನವಿಲ್ಲ. ಭಾರತದಲ್ಲಿ ಪ್ರಪಂಚವನ್ನೇ ಆಕರ್ಷಣೆ ಮಾಡುವ ನಗರವೆಂದರೆ ಬೆಂಗಳೂರು. ಈಗಾಗಲೇ ಬೆಂಗಳೂರು ಬೆಳೆದಿದ್ದು, ಜನಸಂಖ್ಯೆ ಹೆಚ್ಚಾಗಿದೆ. ಆದ್ದರಿಂದ ಮೈಸೂರು, ಮಂಡ್ಯ, ಮಂಗಳೂರು ಸೇರಿದಂತೆ ಇನ್ನಿತರೆ ನಗರಗಳ ಅಭಿವೃದ್ಧಿಗೆ ಗಮನ ಹರಿಸಲಾಗುತ್ತಿದೆ ಎಂದರು.

ವೇಗವಾಗಿ ಬೆಳೆಯುತ್ತಿರುವ ರಾಜ್ಯ: ಕರ್ನಾಟಕ ದೇಶದಲ್ಲಿಯೇ ಅತ್ಯಂತ ವೇಗವಾಗಿ ಬೆಳೆಯುತ್ತಿರುವ ರಾಜ್ಯ ಎಂಬುದರಲ್ಲಿ ಎರಡು ಮಾತಿಲ್ಲ. ಇದರಲ್ಲಿ ಬಿಲ್ಡರ್‌ಗಳ ಪಾತ್ರ ಮಹತ್ವದ್ದಾಗಿದೆ. ಆದರೆ ಕೆಲ ಬಿಲ್ಡರ್‌ಗಳು ಅಡ್ಡದಾರಿ ಹಿಡಿದು, ಯಾವುದೇ ಕಾನೂನು ನಿಯಮ ಪಾಲಿಸದೆ ಬಡಾವಣೆಗಳನ್ನು ನಿರ್ಮಿಸುವ ಮೂಲಕ ಗ್ರಾಹಕರಿಗೆ(ಅಲ್ಲಿನ ಬಡಾವಣೆ ನಿವಾಸಿಗಳಿಗೆ) ತೊಂದರೆಯಾಗುವಂತೆ ಮಾಡುತ್ತಿರುವುದು ನೋಡಿದ್ದೇವೆ. ಅಂತಹವರ ವಿರುದ್ಧ ಕ್ರಮಕೈಗೊಳ್ಳುವ ಕುರಿತು ಚಿಂತನೆ ನಡೆಸಲಾಗುತ್ತಿದೆ ಎಂದು ಎಚ್ಚರಿಸಿದರು.

ರಾಜ್ಯ ಮತ್ತು ದೇಶದ ಅಭಿವೃದ್ಧಿಯಾಗಬೇಕಾದರೆ ಮೊದಲು ನಮ್ಮಲ್ಲಿ ಶಿಸ್ತು ಬರಬೇಕು. ಸರ್ಕಾರವೇ ಎಲ್ಲರಲ್ಲಿಯೂ ಶಿಸ್ತು ತರಲು ಸಾಧ್ಯವಿಲ್ಲ. ನಮ್ಮ ಆಲೋಚನೆ, ಅಭಿವೃದ್ಧಿ ನಮ್ಮ ಮುಂದಿನ ಪೀಳಿಗೆಗೆ ಬಳುವಳಿಯಾಗಿ ನೀಡುವಂತಿರಬೇಕು ಎಂದು ಹೇಳಿದರಲ್ಲದೆ ನರೆಡ್ಕೋ ಮೈಸೂರು ವಿಭಾಗವು ಅತ್ಯುತ್ತಮವಾಗಿ ಕಾರ್ಯನಿರ್ವಹಿಸುತ್ತಿದ್ದು, ಕಟ್ಟಡಗಳ ನಿರ್ಮಾಣ ಕುರಿತು ಸಂಸ್ಥೆಯಲ್ಲಿ ವಿಚಾರಗಳನ್ನು ಸಾರ್ವಜನಿಕರಿಗೆ ತಿಳಿಸುವಂತೆ ಸೂಚಿಸಿದರು. ಹಾಗೆಯೇ ಮೈಸೂರು ನಗರದ ಅಭಿವೃದ್ಧಿ ಕುರಿತು ನೀಡಿರುವ ಮನವಿಗಳನ್ನು ಮುಖ್ಯಮಂತ್ರಿಗಳ ಗಮನಕ್ಕೆ ತರಲಾಗುವುದು ಎಂದು ಭರವಸೆ ನೀಡಿದರು.

ಬಳಿಕ ನರೆಡ್ಕೋ ನೂತನ ಸದಸ್ಯರನ್ನು ಆತ್ಮೀಯವಾಗಿ ಸನ್ಮಾನಿಸಿ ಬರಮಾಡಿಕೊಳ್ಳಲಾಯಿತು. ಶಾಸಕ ಎ.ಬಿ.ರಮೇಶ್ ಬಂಡಿಸಿದ್ದೇಗೌಡ, ನರೆಡ್ಕೋ ರಾಜ್ಯಾಧ್ಯಕ್ಷ ಶ್ಯಾಮ್ ಕುಮಾರ್ ಮರೆಡ್ಡಿ, ಉಪಾಧ್ಯಕ್ಷ ಮನೋಜ್ ಲೋಧಾ, ಮೈಸೂರ್ ಚೇಂಬರ್ ಆಫ್ ಕಾಮರ್ಸ್‌ನ ಅಧ್ಯಕ್ಷ ಲಿಂಗರಾಜು, ಮೈಸೂರು ಇಂಡಸ್ಟ್ರೀಸ್ ಅಸೋಸಿಯೇಷನ್ ಕಾರ್ಯದರ್ಶಿ ಸುರೇಶ್ ಕುಮಾರ್ ಜೈನ್ ಮತ್ತಿತರರು ಉಪಸ್ಥಿತರಿದ್ದರು.

ಮೈಸೂರಲ್ಲಿ ಸದ್ಯಕ್ಕಿದೆ ಶುದ್ಧ ಗಾಳಿ...!

- ಚಿಕ್ಕಮಗಳೂರಿಗೆ ದೇಶದಲ್ಲೇ ಎರಡನೇ ಸ್ಥಾನ
- ಮಡಿಕೇರಿ, ಚಾ.ನಗರದಲ್ಲೂ ಶುದ್ಧ ಪ್ರಾಣವಾಯು

“ಮಡಿಕೇರಿ ಹಸಿರು ಗಿರಿ ಶಿಖರದಿಂದ ಕೂಡಿದೆ. ಎಲ್ಲಿ ನೋಡಿದರೂ ಹಸಿರು ವನವೇ ಹಾಸಿದೆ. ಕೈಗಾರಿಕೆಗಳಿಲ್ಲದೆ ಹಚ್ಚ ಹಸಿರಿನ ಕಾಡಿನಿಂದ ಕೂಡಿರುವ ಮಡಿಕೇರಿ ಕೂಡ ಶುದ್ಧ ಗಾಳಿಯ ಟಾಪ್ ನಗರಗಳಲ್ಲಿ ಒಂದಾಗಿದೆ. ಇನ್ನು ಚಾಮರಾಜನಗರದಲ್ಲಿ ಬಂಡೀಪುರ ಅಭಯಾರಣ್ಯ, ಬಿಳಿರಂಗನ ಬೆಟ್ಟ, ಮಹದೇಶ್ವರ ಬೆಟ್ಟ ಹೀಗೆ ಹಲವು ಅರಣ್ಯ ಪ್ರದೇಶಗಳಿಂದ ಸುತ್ತುವರೆದಿರುವುದರಿಂದ ಶುದ್ಧ ಗಾಳಿ ಹೊಂದಲು ಸಾಧ್ಯವಾಗಿದೆ.





“ಪರಿಸರ ಮಾಲಿನ್ಯ ಇಲಾಖೆಯೂ ದೈನಂದಿನ ಗಾಳಿ ಗುಣಮಟ್ಟ ವರದಿ ಮಾಡಲು ಬಳಸುವ ಏರ್ ಕ್ವಾಲಿಟಿ ಇಂಡೆಕ್ಸ್‌ನಲ್ಲಿ 50ಕ್ಕಿಂತ ಕಡಿಮೆ ಇದ್ದರೆ ಗುಣಮಟ್ಟದ ಗಾಳಿ, 100ರ ಒಳಗಿದ್ದರೆ ಸಮಾಧಾನಕರ ಎಂದು ವರ್ಗೀಕರಿಸಿದೆ. ಆದರೆ ಈ ತನಕ ಮೈಸೂರಿನಲ್ಲಿ ಏರ್ ಕ್ವಾಲಿಟಿ ಇಂಡೆಕ್ಸ್‌ನಲ್ಲಿ 100ರ ಗಡಿ ದಾಟಿದ ಇತಿಹಾಸವೇ ಇಲ್ಲ. ಕೆಲವು ಬಾರಿ 50ಕ್ಕಿಂತ ಕಡಿಮೆ ಇದ್ದರೆ, ಮತ್ತೆ ಕೆಲವು ಬಾರಿ 100ರ ಒಳಗಿರುತ್ತದೆ. ಕರ್ನಾಟಕ ಪರಿಸರ ಮಾಲಿನ್ಯ ಇಲಾಖೆ ವಾರದಲ್ಲಿ ಎರಡು ದಿನ 24 ಗಂಟೆಗಳ ಕಾಲ ಗಾಳಿಯ ಸಾಂದ್ರತೆ ಮಾಪನ ಮಾಡುತ್ತದೆ. ಅದರಲ್ಲಿ ಮೈಸೂರಿನ ಏರ್ ಕ್ವಾಲಿಟಿ ಇಂಡೆಕ್ಸ್ 100ರ ಒಳಗೇ ಇದೆ. ಆಂಬಿಯನ್ ಏರ್ ಕ್ವಾಲಿಟಿ ಮಾನಿಟರ್‌ನಿಂದಲೂ ಇದನ್ನು ಅಳೆಯಲಾಗುತ್ತದೆ. ಈ ಅಂಕಿ-ಅಂಶದ ಪ್ರಕಾರ ಮೈಸೂರಿನ ಗಾಳಿಯ ಗುಣಮಟ್ಟ ಉತ್ತಮವಾಗಿದೆ. – ಹರೀಶ್ ಶಂಕರ್, ಪರಿಸರ ಅಧಿಕಾರಿ, ಕರ್ನಾಟಕ ಮಾಲಿನ್ಯ ನಿಯಂತ್ರಣ ಇಲಾಖೆ

■ ಬಾಪುಲಿಂಗರಾಜ್ ಅರಸ್

ಅತ್ಯಂತ ಶುದ್ಧ ಗಾಳಿ ಹೊಂದಿರುವ ನಗರಗಳ ಪಟ್ಟಿಯಲ್ಲಿ ಕರ್ನಾಟಕದ ಚಿಕ್ಕಮಗಳೂರು ದೇಶದಲ್ಲೇ ಎರಡನೇ ಸ್ಥಾನ ಪಡೆದಿದೆ. ಹಾಗೆಯೇ ಅತ್ಯಂತ ಶುದ್ಧ ಗಾಳಿ ಹೊಂದಿರುವ ದೇಶದ 10 ನಗರಗಳಲ್ಲಿ ಮೈಸೂರು, ಮಡಿಕೇರಿ, ಚಾಮರಾಜನಗರ ಕೂಡ ಸೇರಿವೆ. ಟಾಪ್ 10 ನಗರಗಳಲ್ಲಿ 8 ಕರ್ನಾಟಕದಲ್ಲೇ ಇವೆ. ಈಗಾಗಲೇ ಸ್ವಚ್ಛ ನಗರ ಹೆಗ್ಗಳಿಕೆಯ ಸಾಂಸ್ಕೃತಿಕ ನಗರಿ ಮೈಸೂರು, ದೇಶದಲ್ಲೇ ಅತೀ ಹೆಚ್ಚು ಹುಲಿ ಸಂಖ್ಯೆ ಹೊಂದಿರುವ ಚಾಮರಾಜನಗರ ಹಾಗೂ ಹಸಿರು ಗಿರಿ ಶಿಖರದ ಮಡಿಕೇರಿಯ ಮುಕುಟಕ್ಕೂ ಮತ್ತೊಂದು ಗರಿ ಸೇರ್ಪಡೆಯಾಗಿದೆ.

ಪುಣೆಯ ರೆಸ್ಪಿರೇರ್ ಲಿವಿಂಗ್ ಸೈನ್ಸಸ್ ಮತ್ತು ಕ್ಲೈಮೇಟ್ ಟ್ರೆಂಡ್ಸ್ (Respirer Living Sciences and Climate Trends) ರಾಷ್ಟ್ರೀಯ ಶುದ್ಧ ಗಾಳಿ ಬಗ್ಗೆ ವಿಶ್ಲೇಷಣೆ ನಡೆಸಿದೆ. ಭಾರತದ ವಿವಿಧ ನಗರಗಳ ಶುದ್ಧ ಗಾಳಿಯ ಸಾಂದ್ರತೆ ಬಗ್ಗೆ ಪರಿಶೀಲನೆ ಮಾಡಿ, ಡಾಟಾ ಕಲೆ ಹಾಕಿದೆ.

ಒಂದು ವರ್ಷದ ಅವಧಿಯಲ್ಲಿ ಅಂದರೆ ಅಕ್ಟೋಬರ್ 1, 2022 ರಿಂದ ಸೆಪ್ಟೆಂಬರ್ 30, 2023ರವರೆಗೆ ಗಾಳಿಯ ಗುಣಮಟ್ಟದಲ್ಲಿ ಆಗಿರುವ ಬದಲಾವಣೆಯನ್ನು ರೆಸ್ಪಿರೇರ್ ಲಿವಿಂಗ್ ಸೈನ್ಸಸ್ ಮತ್ತು ಕ್ಲೈಮೇಟ್ ಟ್ರೆಂಡ್ಸ್ ಅನ್ವೇಷಿಸಿದೆ. ಬೇಸಿಗೆ ಹಾಗೂ ಚಳಿಗಾಲದಲ್ಲಿ ನಗರಗಳಲ್ಲಿ ಆಗಿರುವ ಗಾಳಿಯ ಸಾಂದ್ರತೆ ಮತ್ತು ಬದಲಾವಣೆಯನ್ನು ಸೂಕ್ಷ್ಮವಾಗಿ ಅವಲೋಕಿಸಿ ರೆಸ್ಪಿರೇರ್ ಲಿವಿಂಗ್ ಸೈನ್ಸಸ್ ಮತ್ತು ಕ್ಲೈಮೇಟ್ ಟ್ರೆಂಡ್ಸ್ ರೇಟಿಂಗ್ ನೀಡಿದೆ. ಇಡೀ ದೇಶದಲ್ಲಿ ಶುದ್ಧ ಗಾಳಿ ಹೊಂದಿರುವ ನಗರಗಳಲ್ಲಿ ಮಿಜೋರಾಂನ ಐಜ್ವಾಲ್ ಅಗ್ರ ಸ್ಥಾನದಲ್ಲಿದ್ದರೆ, ಕರ್ನಾಟಕದ ಚಿಕ್ಕಮಗಳೂರು ಎರಡನೇ, ಹರಿಯಾಣದ ಮಂಡಿಖೇರಾ ಮೂರನೇ ಸ್ಥಾನದಲ್ಲಿದೆ. ಈ ನಗರಗಳಲ್ಲಿ ಇರುವ ಶುದ್ಧ ಗಾಳಿಯ ಸಾಂದ್ರತೆಯ ಬಗ್ಗೆ ರೆಸ್ಪಿರೇರ್ ಲಿವಿಂಗ್ ಸೈನ್ಸ್ ಮತ್ತು ಕ್ಲೈಮೇಟ್ ಟ್ರೆಂಡ್ಸ್ ವಿವರ ನೀಡಿದೆ. ಮಿಜೋರಾಂನ ಐಜ್ವಾಲ್ 11g/m3ನ PM2.5 ಶುದ್ಧ ಗಾಳಿ ಸಾಂದ್ರತೆ ಹೊಂದಿದ್ದರೆ, ಕರ್ನಾಟಕದ ಚಿಕ್ಕಮಗಳೂರು 17.6g/m3 ಮತ್ತು ಹರಿಯಾಣದ ಮಂಡಿಖೇರಾ 17.7 g/m3 ಸಾಂದ್ರತೆ ಹೊಂದಿವೆ.

ದೇಶದ ಶುದ್ಧ ಗಾಳಿ ಹೊಂದಿರುವ ದೇಶದ ನಗರಗಳಲ್ಲಿ ಟಾಪ್ 10ರಲ್ಲಿ ಮೈಸೂರು, ಮಡಿಕೇರಿ, ಚಾಮರಾಜನಗರ, ವಿಜಯಪುರ, ರಾಯಚೂರು, ಶಿವಮೊಗ್ಗ, ಗದಗ ಸ್ಥಾನ ಪಡೆದಿವೆ.

ಮೈಸೂರು ನಗರದ ಮಧ್ಯೆ ಕುಕ್ಕರಹಳ್ಳಿ ಕೆರೆ, ಕಾರಂಜಿ ಕೆರೆ, ರೇಸ್ ಕೋರ್ಸ್ ಸೇರಿದಂತೆ ಹಲವು ವಿಶಾಲ ಹಸಿರು ಪ್ರದೇಶಗಳಿದ್ದು, ಇಲ್ಲೆಲ್ಲಾ ಸಾಕಷ್ಟು ಮರ-ಗಿಡಗಳಿವೆ. ಜೊತೆಗೆ ಮೈಸೂರು ನಗರದಲ್ಲಿ ಹೆಚ್ಚು ಮಾಲಿನ್ಯ ಉಂಟು ಮಾಡುವ ಕೈಗಾರಿಕೆಗಳಿಲ್ಲ. ಇದ್ದರೂ ಅವೆಲ್ಲವೂ ನಗರದ ಹೊರ ವಲಯದಲ್ಲಿವೆ.

ಮಡಿಕೇರಿ ಹಸಿರು ಗಿರಿ ಶಿಖರದಿಂದ ಕೂಡಿದೆ. ಎಲ್ಲಿ ನೋಡಿದರೂ ಹಸಿರು ವನವೇ ಹಾಸಿದೆ. ಕೈಗಾರಿಕೆಗಳಿಲ್ಲದೆ ಹಚ್ಚ ಹಸಿರಿನ ಕಾಡಿನಿಂದ ಕೂಡಿರುವ ಮಡಿಕೇರಿ ಕೂಡ ಶುದ್ಧ ಗಾಳಿಯ ಟಾಪ್ ನಗರಗಳಲ್ಲಿ ಒಂದಾಗಿದೆ. ಇನ್ನು ಚಾಮರಾಜನಗರದಲ್ಲಿ ಬಂಡೀಪುರ ಅಭಯಾರಣ್ಯ, ಬಿಳಿರಂಗನ ಬೆಟ್ಟ, ಮಹದೇಶ್ವರ ಬೆಟ್ಟ ಹೀಗೆ ಹಲವು ಅರಣ್ಯ ಪ್ರದೇಶಗಳಿಂದ ಸುತ್ತುವರೆದಿರುವುದರಿಂದ ಶುದ್ಧ ಗಾಳಿ ಹೊಂದಲು ಸಾಧ್ಯವಾಗಿದೆ.


“ಮೈಸೂರು ನಗರ ರಾಜರ ಕಾಲದಲ್ಲೇ ಯೋಜನಾ ಬದ್ಧವಾಗಿ ನಿರ್ಮಾಣವಾಗಿದೆ. ದೂರದೃಷ್ಟಿಯಿಂದ ಮಹಾರಾಜರು ವಿಶಾಲವಾದ ರಸ್ತೆ ನಿರ್ಮಾಣದೊಂದಿಗೆ ಇಕ್ಕೆಲಗಳಲ್ಲಿ ಮರಗಳನ್ನು ಬೆಳೆಸಿದ್ದಾರೆ. ಇತ್ತೀಚೆಗೆ ನಿರ್ಮಾಣವಾಗುತ್ತಿರುವ ಬಡಾವಣೆಗಳಲ್ಲಿ ಕೂಡ ಉದ್ಯಾನವನಗಳಿಗೆ ಜಾಗ ಮೀಸಲಿರಿಸಲಾಗುತ್ತಿದೆ. ಅಲ್ಲಿ ಮರ-ಗಿಡಗಳನ್ನು ಬೆಳೆಸಲಾಗುತ್ತಿದೆ. ನಂಜನಗೂಡು ಕೈಗಾರಿಕಾ ಪ್ರದೇಶ, ಹೆಬ್ಬಾಳು, ಕೂರ್ಗಳ್ಳಿ, ಮೇಟಗಳ್ಳಿ, ಹೂಟಗಳ್ಳಿ ಸೇರಿದಂತೆ ಇತರೆ ಕೈಗಾರಿಕಾ ಪ್ರದೇಶಗಳು ನಗರ ಹೊರ ವಲಯದಲ್ಲಿವೆ. ಹಾಗಾಗಿ ನಗರದಲ್ಲಿ ವಾಯುಮಾಲಿನ್ಯವಿಲ್ಲ. ಬೇರೆ ನಗರಗಳಲ್ಲಿ ವಿಪರೀತ ಮಾಲಿನ್ಯವಿರುವ ಕಾರಣ ಬಹಳಷ್ಟು ಜನರು ವಾಸಕ್ಕೆ ಮೈಸೂರನ್ನು ಆಯ್ಕೆ ಮಾಡಿಕೊಳ್ಳುತ್ತಿದ್ದಾರೆ. – ಮನು, ಮೈಸೂರು ಅಮೇಚೂರ್ ನ್ಯಾಚುರಲಿಸ್ಟ್




ಮಕ್ಕಳ ಚಿತ್ರಕಥೆ

‘ಚಾಣಕ್ಯನ ಮಾತು, ಸರ್ವಕಾಲೀಕ ಅನ್ವಯ’

–ಹೆಚ್.ಜಿ.ಎನ್.ಪ್ರಸಾದ್, ಮೊ:9845376199




"ಗುರು" ಕಲಿಸಿದ ಪಾಠಕ್ಕಿಂತ, "ವಿಶ್ವಾಸಘಾತ"ದಲ್ಲಿ ಕಲಿತ ಪಾಠ ಸದಾ ನೆನಪಿನಲ್ಲಿ ಇರುತ್ತದೆ....!




ಯಾರು ತನ್ನ "ಗುಟ್ಟಿನ" ವಿಷಯಗಳನ್ನು ಎಲ್ಲರೆದುರೂ ಹೇಳಿಕೊಳ್ಳುತ್ತಾನೋ, ಅವನು "ಇರುವೆ"ಯ ಗೂಡಲ್ಲಿ "ಹಾವು" ಸಿಕ್ಕಿದಂತೆ ಸಾಯುತ್ತಾನೆ....!




"ದುರ್ಬಲ" ವ್ಯಕ್ತಿಯನ್ನು ಗಮನಿಸಿ, ನಿರ್ಲಕ್ಷಿಸಬೇಡಿ. ಏಕೆಂದರೆ, ಅವರು ಎಲ್ಲರಿಗಿಂತ ಹೆಚ್ಚು "ಸೇಡಿನ" ಮನೋಭಾವನೆಯನ್ನು ಹೊಂದಿರುತ್ತಾರೆ...!



"ಶತ್ರು"ವಿನೊಂದಿಗೆ "ಸ್ನೇಹ"ದಿಂದ ವರ್ತಿಸಬೇಕು....!



ಅಳತೆ ಮೀರಿ ಮಾಡಿದ "ಸಾಲ", ಅದ್ದೂರಿಯಿಂದ ಮಾಡಿದ "ಮದುವೆ", ಸರಳತೆ ಮೀರಿದ "ತೋರಿಕೆ"ಯ ಬದುಕು, ಅತಿಯಾದ "ನಂಬಿಕೆ" ಒಳ್ಳೆಯದಲ್ಲ....!



ದೇಶದ "ಬುದ್ಧಿಜೀವಿಗಳು" ಮತ್ತು "ಅಪರಾಧಿಗಳು" ತಳಮಳಗೊಂಡಿದ್ದಾರೆಂದರೆ, ಆ ದೇಶದ ಆಡಳಿತ ನಡೆಸುವಾತ...ಸರಿದಾರಿಯಲ್ಲಿದ್ದಾನೆಂದೇ ಅರ್ಥ....!



ವಾರಭವಿಷ್ಯ

29.10.2023 ರಿಂದ 4.11.2023

ಈ ವಾರದಲ್ಲಿ ಗ್ರಹಗಳ ರಾಶಿ ಸಂಚಾರ:- ರವಿ-ತುಲಾ, ಚಂದ್ರ-ಮೇಷ, ವೃಷಭ, ಮಿಥುನ, ಕಟಕ, ಕುಜ-ತುಲಾ, ಬುಧ-ತುಲಾ, ಗುರು-ಮೇಷ, ಶುಕ್ರ-ಕನ್ಯಾ, ಶನಿ-ಕುಂಭ, ರಾಹು-ಮೇಷ ಮತ್ತು ಕೇತು-ತುಲಾ.

ವಿ.ಕೇಶವಮೂರ್ತಿ
ಜ್ಯೋತಿಷ್ಯ ವಿದ್ವಾಂಸರು, 'ಭಾವಸಾರ ರತ್ನ'
'ಚೈತನ್ಯಶ್ರೀ ಪ್ರಶಸ್ತಿ ಪುರಸ್ಕೃತರು'
ಕಲ್ಪದ್ರುಮ ಜ್ಯೋತಿಷ್ಯ ಅಧ್ಯಯನ ಕೇಂದ್ರ
ವಿಳಾಸ: 533, 6ನೇ ಕ್ರಾಸ್, ಬೋಗಾದಿ ಉತ್ತರ,
2ನೇ ಹಂತ, ಮೈಸೂರು ನಿರ್ಮಿತಿ ಕೇಂದ್ರ ಹತ್ತಿರ, ಮೈಸೂರು.
ಮೊ.9740973224, 9739548720



ಮೇಷ (ಚು.ಚೆ.ಲ.ಲಿ.ಲು.ಲೆ.ಲೋ.ಅ)

ವಾರದಾರಂಭಕ್ಕೆ ಗೃಹದಲ್ಲೂ, ಸಾಮಾಜಿಕವಾಗಿಯೂ ಬಯಸಿದ್ದನ್ನು ಗಳಿಸುವಿರಿ. ಮನೆ ಮಂದಿ ಹಾಗೂ ಆತ್ಮೀಯರ ಒಡಗೂಡಿ ಸಂತಸದ ಸಮಯ. ಸುಖ ವಸ್ತುಗಳ ಸಂಗ್ರಹ. ವಾರ ಮಧ್ಯಾನಂತರ ಇಲ್ಲ ಸಲ್ಲದ ಅಪವಾದಗಳಿಗೆ ಗುರಿಯಾಗುವಿರಿ. ಅನಾಲೋಚಿತ ವಾಗ್ದಾನ ನೀಡಿ ಪೇಚಿಗೆ ಸಿಲುಕುವಿರಿ. ಏರಿಳಿತವಿಲ್ಲದೆ ಬದುಕುಂಟೇ? ಸಂಭಾಳಿಸಿಕೊಂಡು ಹೋಗಲು ಹಿರಿಯರ ಮಾರ್ಗದರ್ಶನದ ಅಗತ್ಯವಿದೆ. ಶ್ರೀ ಲಕ್ಷ್ಮೀನರಸಿಂಹ ಸ್ತುತಿ. ಶುಭ ಸಂಖ್ಯೆ-5

ವೃಷಭ (ಇ.ಉ.ಎ.ಒ.ವ.ವಿ.ವು.ವೆ.ವೊ)

ಕಷ್ಟ ಇದ್ದಾಗ ದುಡಿಮೆಯೇ ದೇವರು. ಚಿಂತಿಸುವ ಅಗತ್ಯವಿಲ್ಲ. ಸೆಟ್ ಬ್ಯಾಕ್ ನಂತರ ಕಮ್ ಬ್ಯಾಕ್ ಇದ್ದೇ ಇರುತ್ತದೆ. ಸಪ್ತಾಹದ ಆದಿಗೆ ಹೊಸ ನಿರ್ಣಯಗಳು ತಲೆಗೆ ಬರುತ್ತದೆ. ಕಾರ್ಯಗತ ಮಾಡಲು ಆತುರ ಪಟ್ಟರೆ ನಷ್ಟ ಅನುಭವಿಸಬೇಕಾಗುತ್ತದೆ. ಮಾತು ಹಿತಮಿತವಾಗಿರಲಿ. ಅನ್ಯಥಾ ಕಲಹಕ್ಕೆ ಹೇತುವಾಗುವುದು. ಅಧಿಕಾರಿಗಳ ಸಹಕಾರದಿಂದ ಆಸ್ತಿ ವಿಷಯಗಳು ನಿಮ್ಮ ಅನುಕೂಲಕ್ಕೆ ಆಗುತ್ತದೆ. ಶ್ರೀ ಲಕ್ಷ್ಮೀ ಅಷ್ಟಕ ಪಠಿಸಿ. ಶುಭ ಸಂಖ್ಯೆ-2.

ಮಿಥುನ (ಕ.ಕಿ.ಕು.ಘ.ಙ.ಛ.ಕೆ.ಕೊ.ಹ)

ಈ ಸಪ್ತಾಹವೆಲ್ಲಾ ನಿಮ್ಮ ಸಹಾಯಕ್ಕಿರುವ ಗ್ರಹ ಚಂದ್ರನಿಂದ ಧನ-ಧಾನ್ಯ ಲಾಭ, ಇಷ್ಟ ಪ್ರಾಪ್ತಿ. ಮೃಷ್ಟಾನ್ನ ಭೋಜನ ಕೈಗೊಂಡ ಮಹತ್ವದ ಕಾರ್ಯಗಳಲ್ಲಿ ಯಶಸ್ಸು ಲಭಿಸುತ್ತದೆ. ಕಳೆದುಕೊಂಡ ವಸ್ತುವನ್ನು ಮರಳಿ ಪಡೆಯುವಿರಿ. ಶಯನಾದಿ ಸುಖಗಳು ದೊರೆಯುತ್ತದೆ. ಕ್ಷೀರೋತ್ಪನ್ನ ವ್ಯಾಪಾರಿಗಳಿಗೆ, ಹೋಟೆಲ್, ಕೇಟರಿಂಗ್ ವ್ಯವಹಾರಿಗಳಿಗೆ ಉತ್ತಮ ಸಮಯವಾಗಿದೆ. ಮಿತ್ರ ಜನರ ಸಂಪರ್ಕದಿಂದ ಆನಂದ. ಶ್ರೀ ವೆಂಕಟೇಶ್ವರ ದರ್ಶನ. ಶುಭ ಸಂಖ್ಯೆ-1.

ಕಟಕ (ಹೀ.ಹು.ಹೆ.ಹೊ.ಡ.ಡಿ.ಡು)

ಕೆಲವು ಕೆಲಸಗಳು ನಿರಾಯಾಸವಾಗಿ ಪೂರ್ಣಗೊಳ್ಳುತ್ತವೆ. ಆಪ್ತ ಸ್ನೇಹಿತರು ಮತ್ತು ಕುಟುಂಬ ಸದಸ್ಯರೊಂದಿಗೆ ಮನೆಯಲ್ಲಿ ಸಂತೋಷದಿಂದ ಕಳೆಯುತ್ತೀರಿ. ನಿರುದ್ಯೋಗಿಗಳ ಪ್ರಯತ್ನಗಳು ಫಲ ನೀಡಲಿದೆ. ಅಷ್ಟಮ ಶನಿದೇವನ ಕಾರಣ ದುಷ್ಟಜನರಿಂದ ಧನ ಹಾನಿ. ಪಾಲುದಾರಿಕೆ ವ್ಯವಹಾರಗಳಲ್ಲಿ ಒಮ್ಮತವಿಲ್ಲದೆ ಜಗಳಗಳು ಉಂಟಾಗಬಹುದು. ವಾರಾಂತ್ಯಕ್ಕೆ ಪುಣ್ಯಕ್ಷೇತ್ರ ಭೇಟಿಯಿಂದ ಮನಸ್ಸಿಗೆ ನಿರಾಳ. ಶ್ರೀ ನವಗ್ರಹ ಸ್ತೋತ್ರ ಪಠಿಸಿ. ಶುಭ ಸಂಖ್ಯೆ-9.

ಸಿಂಹ (ಮ.ಮಿ.ಮು.ಮೊ.ಮೆ.ಟ.ಟಿ.ಟು.ಟೆ)

'ರೋಗಿ ಬಯಸಿದ್ದು ಹಾಲು ಅನ್ನ, ವೈದ್ಯರು ಹೇಳಿದ್ದು ಹಾಲು ಅನ್ನ' ಎಂಬ ಗಾದೆಯಂತೆ ಸಾಮಾಜಿಕ, ಸಾಂಸಾರಿಕ ವ್ಯವಹಾರಗಳು ನಿರಾತಂಕವಾಗಿ ಸಾಗುವುದು. ಇದಕ್ಕೆ ಸ್ತ್ರೀಯರೊಬ್ಬರ ಪ್ರಮುಖ ಸಹಾಯ ನಿಮಗೆ ನೆರವಾಗುವುದು. ರಾಜಕಾರಣಿಗಳಿಗೆ ಸ್ಥಾನಮಾನಗಳು ಲಭಿಸುವುದು. ಅನಾರೋಗ್ಯ, ಆತಂಕಗಳ ನಿವಾರಣೆ ಆಗುವುದು. ವಾರದ ಕಡೆಗೆ ಸಾಧು ಸಂತರ ಭೇಟಿಯಿಂದ ಧನ್ಯತಾಭಾವವನ್ನು ಹೊಂದುವಿರಿ. ಶ್ರೀ ಮನ್ನಾರಾಯಣ ನಾಮಸ್ಮರಣೆ. ಶುಭ ಸಂಖ್ಯೆ-3

ಕನ್ಯಾ (ಟೊ.ಪ.ಪಿ.ಪು.ಫ.ಣ.ಠ.ಪೆ.ಪೊ)

'ಉದರನಿಮಿತ್ತಂ ಬಹುಕೃತ ವೇಷಂ' ಎನ್ನುವಂತಹ ವ್ಯಕ್ತಿಗಳಿಂದ ವಂಚನೆಗೆ ಗುರಿಯಾಗುವ ಸಾಧ್ಯತೆ ಇರುತ್ತದೆ. ನಿಮ್ಮ ಗುಪ್ತ ಮಾಹಿತಿಗಳನ್ನು ಯಾರಲ್ಲೂ ಹಂಚಿಕೊಳ್ಳಬೇಡಿ. ವ್ಯಾಪಾರ ವ್ಯವಹಾರಗಳು ನಿಧಾನಗತಿಯಲ್ಲಿ ಸಾಗಿದರೂ ಲಾಭಾಂಶಕ್ಕೆ ಕೊರತೆ ಇರದು. ಕೈಗೆ ಹಣ ಬಂದಾಗ ಋಣಮುಕ್ತರಾಗಲು ಪ್ರಯತ್ನಿಸಿ. ಸರ್ಕಾರಿ ನೌಕರರು ವಾಮಮಾರ್ಗದ ಸಂಪಾದನೆಗೆ ಆಸೆಪಟ್ಟರೆ ತೊಂದರೆ ಗ್ಯಾರಂಟಿ. ಶ್ರೀ ಸತ್ಯನಾರಾಯಣ ಪೂಜೆ. ಶುಭ ಸಂಖ್ಯೆ-7

ತುಲಾ (ರ.ರಿ.ರು.ರೆ.ರೊ.ತ.ತಿ.ತು.ತೆ)

ಮನೆಯ ಒಳಗೂ, ಮನೆಯ ಹೊರಗೂ ನಿಮ್ಮದೇ ಮೇಲುಗೈ ಸಾಧಿಸುತ್ತೀರಿ. ಹೊಸ ಶೇರು, ಮ್ಯೂಚುಯಲ್ ಫಂಡ್ ಹೂಡಿಕೆಗಳನ್ನು ಮಾಡಲು ಅಡ್ಡಿಯಿಲ್ಲ. ಉದ್ಯೋಗಿಗಳು ಹಿರಿಯ ಅಧಿಕಾರಿಗಳೊಂದಿಗಿನ ವಿವಾದಗಳನ್ನು ಬಗೆಹರಿಸಿಕೊಳ್ಳುತ್ತೀರಿ. ಗಣ್ಯ ವ್ಯಕ್ತಿಗಳ ಜೊತೆ ಸಂಪರ್ಕ ಉಂಟಾಗುವುದು. ಕೇತು-ರಾಹುಗಳು ಬಾಧಕರಿದ್ದು ಸಮಾಜಘಾತುಕ ಶಕ್ತಿಗಳ ಸಂಪರ್ಕ ನಿಮಗೆ ಮುಳುವಾಗಬಹುದು. ಶ್ರೀ ದೇವಿ ಉಪಾಸನೆ. ಶುಭ ಸಂಖ್ಯೆ-4.

ವೃಶ್ಚಿಕ (ತೊ.ನ.ನಿ.ನು.ನೆ.ನೊ.ಯು.ಯಿ.ಯ

'ನಂಬಿ ಕೆಟ್ಟವರಿಲ್ಲವೋ ಹರಿಯ, ನಂಬದವರು ಕೆಟ್ಟರೆ ಕೆಡಲಿ' ಎಂಬ ದಾಸರ ಪದದಂತೆ ಮುಂದೆ ಸಾಗಿ ಉಚ್ಚ ಚಂದ್ರನ ದೃಷ್ಟಿಯ ಪರಿಣಾಮ ನಿರ್ದಿಷ್ಟ ಸಮಯಕ್ಕೆ ಕೈಗೆ ಹಣ ಬರುತ್ತದೆ. ಐಷಾರಾಮಿ ಜೀವನ ಬಹಳ ದಿನ ನಡೆಯುವುದಿಲ್ಲ. ಪ್ರಯಾಣದಲ್ಲಿ ಅಡಚಣೆಗಳು ಉಂಟಾಗಿ ಬವಣೆ ಪಡುವಿರಿ. ಮಕ್ಕಳ ಚಲನ-ವಲನದ ಮೇಲೆ ಗಮನವಿರಿಸಿ. ಆಸ್ತಿ ವಿವಾದಗಳಿಂದ ಮಾನಸಿಕ ಕಿರಿಕಿರಿ. ಶ್ರೀ ಸುಬ್ರಮಣ್ಯ ದರ್ಶನ. ಶುಭ ಸಂಖ್ಯೆ-6

ಧನುಸ್ಸು (ಯೆ.ಯೊ.ಬ.ಬಿ.ಬು.ಧ.ಭ.ಢ.ಬೆ)

ಸಪ್ತಾಹದ ಆರಂಭಕ್ಕೆ ಪರೋಪಕಾರ ಬುದ್ಧಿ, ಇದರಿಂದ ಸಾಮಾಜಿಕ ಗೌರವ ಪ್ರಾಪ್ತಿ. ನಿಮ್ಮ ಪುತ್ರ-ಪುತ್ರಿಯರಿಗೆ ಉದ್ಯೋಗ ಲಭ್ಯವಾಗುವ ಸಾಧ್ಯತೆ. ವ್ಯಾಪಾರ, ವ್ಯವಹಾರಗಳು ಗುರುಕೃಪೆಯಿಂದ ದ್ವಿಗುಣಗೊಳ್ಳುವುದು. ಸಹೋದರ ವರ್ಗದಲ್ಲಿ ವಿರಸ ಹಾಗೂ ಅಪನಂಬಿಕೆ ಉಂಟಾಗುವುದು. ಯುವಕ-ಯುವತಿಯರಿಗೆ ಕಂಕಣ ಬಲ ಕೂಡಿ ಬರುವುದು. ವಾರದ ಕಡೆಗೆ ಪಾರಮಾರ್ಥಿಕ ವಿಷಯದಲ್ಲಿ ಒಲವು. ಶ್ರೀ ಶ್ರೀಧರಸ್ವಾಮಿ ದರ್ಶನ. ಶುಭ ಸಂಖ್ಯೆ-4.

ಮಕರ (ಬೊ.ಜ.ಜಿ.ಶಿ.ಶು.ಶೆ.ಶೊ.ಗ.ಗಿ.)

ವ್ಯಾಪಾರ ವ್ಯವಹಾರಗಳಲ್ಲಿ ಕಠಿಣ ಪ್ರತಿಸ್ಪರ್ಧಿಗಳ ಉಪಟಳ. ಪ್ರಮುಖ ಕಾರ್ಯಗಳು ನಿಧಾನವಾಗಿ ಪೂರ್ಣಗೊಳ್ಳುತ್ತವೆ. ಕೈಗೆ ಬಂದ ಹಣ ನೀರಿನಂತೆ ಖರ್ಚಾಗುವುದು. ಬೃಹತ್ ಉದ್ಯಮಪತಿಗಳಿಗೆ ಕಾರ್ಮಿಕರ ಅಸಹಕಾರದಿಂದ ಉತ್ತಮ ಆರ್ಡರ್‌ಗಳು ಕೈ ತಪ್ಪುವ ಸಾಧ್ಯತೆ, ರಿಯಲ್ ಎಸ್ಟೇಟ್ ವ್ಯವಹಾರಸ್ಥರು ತಾತ್ಕಾಲಿಕವಾಗಿ ಸಾಲ ಮಾಡುವ ಪರಿಸ್ಥಿತಿ ಬಂದೀತು. ಶ್ರೀ ಮಾರುತಿಗೆ ತುಳಸಿಮಾಲೆ ಸಮರ್ಪಣೆ. ಶುಭ ಸಂಖ್ಯೆ-1.

ಕುಂಭ (ಗು.ಗೆ.ಗೊ.ಸ.ಸಿ.ಸು.ಸೆ.ಸೊ.ದ)

ವಾರದಾರಂಭಕ್ಕೆ ನಿರುದ್ಯೋಗಿಗಳಿಗೆ ಶುಭ ಮಾಹಿತಿ ಹೊತ್ತ ಮಿಂಚಂಚೆ ಬರುವುದು. ಬಂಧು ಮಿತ್ರರೊಂದಿಗಿನ ವಿವಾದಗಳು ಸ್ವಲ್ಪಮಟ್ಟಿಗೆ ಬಗೆಹರಿಯುತ್ತವೆ. ಸಮಾಜದ ಪ್ರಮುಖ ವ್ಯಕ್ತಿಗಳೊಂದಿಗೆ ಪರಿಚಯಗಳು ಹೆಚ್ಚಾಗುತ್ತವೆ. ಜನ್ಮಸ್ಥ ಶನಿದೇವ ಇರುವ ಕಾರಣ ಮನೆಯಾಳುಗಳಿಂದ ತೊಂದರೆಯೂ, ಆರೋಗ್ಯದಲ್ಲಿ ಕಿರಿಕಿರಿಯೂ ಉಂಟಾಗುತ್ತದೆ. ವಾಹನ ಚಾಲನೆಯಲ್ಲಿ ಆತುರ ಗಂಡಾಂತರ ತರುವುದು. ಶ್ರೀ ಶನ್ಯಾಷ್ಟೋತ್ತರ ಪಠಿಸಿ. ಶುಭ ಸಂಖ್ಯೆ-5

ಮೀನ (ದಿ.ದು.ಖ.ಝ.ಥ.ದೆ.ದೊ.ಚ.ಚಿ)

ಹಣಕಾಸಿನ ಪರಿಸ್ಥಿತಿ ಸುಧಾರಿಸಿ, ಸಾಲಗಳು ದೂರವಾಗಲು ಬೃಹಸ್ಪತಿಯ ಅನುಗ್ರಹವಿದೆ. ಬಹಳ ದಿನಗಳಿಂದ ಕಾಡುತ್ತಿದ್ದ ಸಮಸ್ಯೆಗಳಿಗೆ ಪರಿಹಾರ ದೊರಕುತ್ತದೆ. ಸರ್ಕಾರಿ ನೌಕರರಿಗೆ ಉನ್ನತ ಸ್ಥಾನಕ್ಕೆ ಬಡ್ತಿಯೊಂದಿಗೆ ವರ್ಗಾವಣೆಯಾಗುವ ಸಂಭವವಿದೆ. ಕುಟುಂಬ ಸದಸ್ಯರು ಪ್ರಮುಖ ಕೆಲಸಗಳಲ್ಲಿ ಸಹಾಯಹಸ್ತವನ್ನು ನೀಡುವರು. ಮಕ್ಕಳ ವಿವಾಹ ಪ್ರಯತ್ನಗಳು ಧನಾತ್ಮಕವಾಗಿರುತ್ತದೆ. ಸಣ್ಣ ಪುಟ್ಟ ಆರೋಗ್ಯ ಸಮಸ್ಯೆಗಳು ಬಾಧಿಸುತ್ತವೆ. ಶ್ರೀ ದಕ್ಷಿಣಾಮೂರ್ತಿ ಸ್ತೋತ್ರ ಪಠಿಸಿ. ಶುಭ ಸಂಖ್ಯೆ-2

ಕೋಟೆಯಂತೆ ಸರಗೂರಲ್ಲೂ ವಾಲ್ಮೀಕಿ ಭವನ ನಿರ್ಮಾಣ

——— ವಾಲ್ಮೀಕಿ ಜಯಂತಿ ಕಾರ್ಯಕ್ರಮದಲ್ಲಿ ಶಾಸಕ ಅನಿಲ್ ಚಿಕ್ಕಮಾದು ಭರವಸೆ ———



ಸರಗೂರು, ಅ.28– ಕೋಟೆ ಮಾದರಿಯಲ್ಲಿಯೇ ಸರಗೂರಿನಲ್ಲೂ ವಾಲ್ಮೀಕಿ ಭವನ ನಿರ್ಮಾಣಕ್ಕೆ ಆದ್ಯತೆ ನೀಡಿ ಅನುದಾನ ಮಂಜೂರು ಮಾಡಿಸಿಕೊಡುವುದಾಗಿ ಶಾಸಕ ಅನಿಲ್ ಚಿಕ್ಕಮಾದು ಭರವಸೆ ನೀಡಿದರು.

ಪಟ್ಟಣದ ಜಯಚಾಮರಾಜೇಂದ್ರ ಕ್ರೀಡಾಂಗಣದಲ್ಲಿ ಶನಿವಾರ ತಾಲೂಕು ಆಡಳಿತ, ರಾಷ್ಟ್ರೀಯ ಹಬ್ಬಗಳ ಆಚರಣಾ ಸಮಿತಿ, ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ, ನಾಯಕ ಸಮಾಜದಿಂದ ನಡೆದ ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ಜಯಂತಿ ಸಮಾರಂಭದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.


"ಸರಗೂರಿನ ನಾಯಕ ಸಂಘ ವಾಲ್ಮೀಕಿ ಭವನ ನಿರ್ಮಾಣಕ್ಕೆ ನಿವೇಶನ ಗುರುತಿಸಲಾಗಿದ್ದು, ಜಿಲ್ಲಾಧಿಕಾರಿಗಳ ಕಚೇರಿಯಿಂದ ಅನುಮೋದನೆ ಬಂದ ಬಳಿಕ ವಾಲ್ಮೀಕಿ ಭವನ ನಿರ್ಮಾಣಕ್ಕೆ ಸಹಕಾರ ನೀಡಲಾಗುವುದು. ಜತೆಗೆ ಚಿಕ್ಕ ದೇವಮ್ಮನ ವೃತ್ತದಲ್ಲಿ ವಾಲ್ಮೀಕಿ ಪುತ್ಥಳಿ ನಿರ್ಮಾಣಕ್ಕೂ ಪ್ರೋತ್ಸಾಹ ನೀಡಲಾಗುವುದು. ವಾಲ್ಮೀಕಿ ರಾಮಾಯಣ ಬರೆಯದಿದ್ದರೆ ರಾಮನಾಮ ಭಜಿಸಲು ಆಗುತ್ತಿರಲಿಲ್ಲ. ವಾಲ್ಮೀಕಿ ಅವರು ರಾಮನನ್ನು ಇಡೀ ಜಗತ್ತಿಗೆ ಪರಿಚಯಿಸಿದರು. ಹೀಗಾಗಿ ನಾಯಕ ಸಮಾಜ ತುಂಬಾ ಇತಿಹಾಸಯುಳ್ಳ ಸಮಾಜವಾಗಿದೆ" ಎಂದು ಅವರು ಹೇಳಿದರು.

ಕನ್ನಡ ಉಪನ್ಯಾಸಕ ಚಿಕ್ಕಮಳಲಿ ಆರ್. ಮಹದೇವ್ ಮಾತನಾಡಿ, "ವಾಲ್ಮೀಕಿ ಮಹರ್ಷಿ ಅವರು ಕೇವಲ ಒಂದು ಜಾತಿ, ಧರ್ಮ, ಜನಾಂಗಕ್ಕೆ ಸೀಮಿತವಾಗಿಲ್ಲ. ಬದಲಿಗೆ ರಾಮಾಯಣ ಮಹಾಕಾವ್ಯ ರಚಿಸಿದವರು. ಇವರು ಜಗತ್ತಿಗೆ ಜ್ಞಾನದ ಬೆಳಕು ನೀಡಿದ ಮಹಾನ್ ಕವಿ. ಜೀವನದ ವಿವಿಧ ಮೌಲ್ಯಗಳನ್ನು ತಿಳಿಸಿಕೊಟ್ಟವರು" ಎಂದು ಹೇಳಿದರು.

ಸರಗೂರು ತಾಲೂಕು ನಾಯಕ ಸಮಾಜದ ಅಧ್ಯಕ್ಷ ಪುರದಕಟ್ಟೆ ಬಸವರಾಜು, ಉಪಾಧ್ಯಕ್ಷ ಶ್ರೀನಿವಾಸ್ ಮಾತನಾಡಿ, "ನೂತನ ತಾಲೂಕು ಸರಗೂರಿಗೆ ಸರಕಾರದ ವಿವಿಧ ಇಲಾಖೆಗಳನ್ನು ಮಂಜೂರು ಮಾಡಬೇಕು. ಸರಗೂರಿನಲ್ಲಿ ವಾಲ್ಮೀಕಿ ಭವನ ನಿರ್ಮಾಣಕ್ಕೆ ಶಾಸಕರು ಅನುವು ಮಾಡಿಕೊಡಬೇಕು" ಎಂದು ಮನವಿ ಮಾಡಿದರು.

ಪಟ್ಟಣ ಪಂಚಾಯಿತಿ ಅಧ್ಯಕ್ಷೆ ರಾಧಿಕಾ ಶ್ರೀನಾಥ್, ಸ್ಥಾಯಿಸಮಿತಿ ಅಧ್ಯಕ್ಷೆ ಉಮಾರಾಮು, ಉಪಾಧ್ಯಕ್ಷ ವಿನಾಯಕ ಪ್ರಸಾದ್, ಸದಸ್ಯರಾದ ಶ್ರೀನಿವಾಸ್, ನೂರಾಳಸ್ವಾಮಿ, ವೀರೇಶ್, ಚಲುವಕೃಷ್ಣ, ತಹಶೀಲ್ದಾರ್ ಪರಶಿವಮೂರ್ತಿ, ಸಣ್ಣರಾಮಪ್ಪ, ಇಒ ಕೆ.ಸುಷ್ಮಾ, ಮುಖ್ಯಾಧಿಕಾರಿ ಮಂಜುನಾಥ್, ನಾಯಕ ಸಮಾಜದ ಟೌನ್ ಅಧ್ಯಕ್ಷ ಬೆಟ್ಟನಾಯಕ, ಚನ್ನಪ್ಪ ನಾಯಕ, ಮುಖಂಡರಾದ ಶಂಭುಲಿಂಗನಾಯಕ, ಕೆ.ಚಿಕ್ಕವೀರನಾಯಕ, ಜಯಪ್ರಕಾಶ್ ಚಿಕ್ಕಣ್ಣ, ಎಂ.ಸಿ. ದೊಡ್ಡನಾಯಕ, ಕ್ಯಾತನಹಳ್ಳಿ ನಾಗರಾಜು, ಜಿನ್ನಹಳ್ಳಿ ರಾಜನಾಯಕ, ಬಸವರಾಜು, ರವಿಕುಮಾರ್, ಮಹದೇವ, ಚಿಕ್ಕಾಯಕರು, ಸಿದ್ದರಾಜು, ಅಂಕಪ್ಪ, ಮೈಮುಲ್ ನಿರ್ದೇಶಕ ಈರೇಗೌಡ, ಆದಿಕರ್ನಾಟಕ ಸಮಾಜದ ಅಧ್ಯಕ್ಷ ಹೆಚ್.ಸಿ.ನರಸಿಂಹಮೂರ್ತಿ, ಪರಶಿವಮೂರ್ತಿ, ಕಸಾಪ ಅಧ್ಯಕ್ಷ ಕನ್ನಡಪ್ರಮೋದ್, ಎಂ.ಕೆಂಡಗಣ್ಣಸ್ವಾಮಿ, ತಾಲೂಕು ಆರೋಗ್ಯಾಧಿಕಾರಿ ಟಿ.ರವಿಕುಮಾರ್, ಸೋಮಣ್ಣ, ಎಸ್.ಎ. ನಾಗೇಂದ್ರ ರಮೇಶ್ ಚಂಡು, ರವಿ, ಸಿ.ಪಿ.ಐ. ಲಕ್ಷ್ಮಿಕಾಂತ್, ಪಿ.ಎಸ್.ಐ, ನಂದೀಶ್ ಕುಮಾರ್, ಇಲಾಖಾ ಅಧಿಕಾರಿಗಳು ಸೇರಿದಂತೆ ಇನ್ನಿತರರು ಹಾಜರಿದ್ದರು. ಇದೇ ಸಂದರ್ಭದಲ್ಲಿ ಮಹರ್ಷಿ ವಾಲ್ಮೀಕಿ ಅವರ ಭಾವಚಿತ್ರಕ್ಕೆ ಗಣ್ಯರು ಪುಷ್ಪಾರ್ಚನೆ ಸಲ್ಲಿಸಿದರು.

ಸರಗೂರಲ್ಲಿ ಅದ್ದೂರಿ ಮೆರವಣಿಗೆ



ಸರಗೂರು, ಅ.28– ಹೆಚ್.ಡಿ.ಕೋಟೆ ಮತ್ತು ಸರಗೂರು ತಾಲೂಕಿನ ರಾಷ್ಟ್ರೀಯ ಹಬ್ಬಗಳ ಆಚರಣಾ ಸಮಿತಿ, ತಾಲೂಕು ಆಡಳಿತ ಮತ್ತು ಸರಗೂರು ಮತ್ತು ಹೆಚ್.ಡಿ.ಕೋಟೆ ತಾಲೂಕಿನ ನಾಯಕ ಸಮಾಜದ ವತಿಯಿಂದ ಮಹರ್ಷಿ ವಾಲ್ಮೀಕಿ ಜಯಂತಿ ಅಂಗವಾಗಿ ಅದ್ದೂರಿ ಮೆರವಣಿಗೆ ಸರಗೂರು ಪಟ್ಟಣದಲ್ಲಿ ನಡೆಸಲಾಯಿತು. ಶಾಸಕ ಅನಿಲ್ ಚಿಕ್ಕಮಾದು ವಾಲ್ಮೀಕಿ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡುವುದರ ಮೂಲಕ ಮೆರವಣಿಗೆಗೆ ಚಾಲನೆ ನೀಡಿದರು.

ಮೆರವಣಿಗೆ ಸರಗೂರು ಪಟ್ಟಣದ ಕೆಇಬಿ ಕಚೇರಿ ಬಳಿಯಿಂದ ಪ್ರಮುಖ ಬೀದಿಗಳಲ್ಲಿ ತೆರಳಿ, ಬೆಳ್ಳಿರಥದಲ್ಲಿ ವಾಲ್ಮೀಕಿಯವರ ಭಾವಚಿತ್ರವನ್ನು ಇರಿಸಿ ಮೆರವಣಿಗೆ ಮಾಡಲಾಯಿತು.

ಮೆರವಣಿಗೆಯಲ್ಲಿ ಚಂಡೆ, ಪೂಜಾ ಕುಣಿತ, ನೃತ್ಯ, ವೀರಗಾಸೆ ಕುಣಿತ, ಜಾನಪದ ಕಲೆಗಳಲ್ಲಿ ಒಂದಾದ ಕಂಸಾಳೆ, ನಗಾರಿ, ಬ್ಯಾಂಡ್‌ಸೆಟ್, ಕುದುರೆ ಮೇಲೆ ಕುಳಿತ ಮದಕರಿನಾಯಕ, ಸಂಗೊಳ್ಳಿ ರಾಯಣ್ಣ ವೇಷಧಾರಿಗಳು ಸೇರಿದಂತೆ ಹತ್ತಾರು ಸ್ತಬ್ಧಚಿತ್ರಗಳು ಮೆರವಣಿಗೆಗೆ ಸಾಥ್ ನೀಡಿದವು.

ಮೆರವಣಿಗೆಯಲ್ಲಿ ಅಭಿಮಾನಿಗಳೊಂದಿಗೆ ಶಾಸಕ ಅನಿಲ್ ಚಿಕ್ಕಮಾದು ಕುಣಿದು ಕುಪ್ಪಳಿಸಿದರು. ಅಲ್ಲದೇ ತಾಲೂಕು ಆಡಳಿತದ ವತಿಯಿಂದ ವಾಲ್ಮೀಕಿಯವರ ಜೀವನ ಚರಿತ್ರೆಯುಳ್ಳ ಸ್ತಬ್ಧಚಿತ್ರ ಮತ್ತು ವಾಲ್ಮೀಕಿಯವರು ಲವಕುಶರಿಗೆ ಬಿಲ್ವಿದ್ಯೆ ಹೇಳಿಕೊಡುವಂತಹ ಸ್ತಬ್ಧಚಿತ್ರ, ಬೇಡರ ಕಣ್ಣಪ್ಪ, ರಾಮ ಮತ್ತು ವಾಲ್ಮೀಕಿ ಇರುವ ಸ್ತಬ್ಧಚಿತ್ರ ಎಲ್ಲರನ್ನು ಮೂಕವಿಸ್ಮಿತರಾಗಿ ನೋಡುವಂತೆ ಮಾಡಿತು. ಮೆರವಣಿಗೆ ಮುಗಿದ ನಂತರ ವೇದಿಕೆ ಹತ್ತಿರ ಸಮಾವೇಶಗೊಂಡಿತು.

ಶ್ರೀಕಂಠೇಶ್ವರನ ದರ್ಶನ ಪಡೆದ ಶಾಸಕ ಜಿಟಿಡಿ

ಲೋಕಸಭೆಗೆ ಮಾತ್ರವಲ್ಲ, ಎಲ್ಲಾ ಹಂತದ ಚುನಾವಣೆಗೆ ಮೈತ್ರಿ



ನಂಜನಗೂಡು, ಅ.28– ಪೌರ್ಣಿಮೆ ಹಾಗೂ ಚಂದ್ರಗ್ರಹಣದ ಪ್ರಯುಕ್ತ ಶಾಸಕ ಜಿ.ಟಿ.ದೇವೇಗೌಡ ಶ್ರೀಕಂಠೇಶ್ವರ ಸ್ವಾಮಿ ದೇವಾಲಯಕ್ಕೆ ಭೇಟಿ ನೀಡಿ, ದೇವರ ದರ್ಶನ ಪಡೆದು ವಿಶೇಷ ಪೂಜೆ ಸಲ್ಲಿಸಿದರು.

ಮೊದಲಿಗೆ ಶ್ರೀಕಂಠೇಶ್ವರರವರ ಗರ್ಭಗುಡಿಯಲ್ಲಿ ವಿಶೇಷ ಪೂಜೆ ಸಲ್ಲಿಸಿದರಲ್ಲದೆ, ಸ್ವಲ್ಪಕಾಲ ಧ್ಯಾನಸಕ್ತರಾಗಿದ್ದರು. ದೇವಾಲಯದ ವತಿಯಿಂದ ಅವರಿಗೆ ಫಲ ತಾಂಬೂಲ, ಶೇಷವಸ್ತ್ರನೀಡಿ ಗೌರವಿಸಲಾಯಿತು.

ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ರಾಜ್ಯದಲ್ಲಿ ಬರಗಾಲ ಪರಿಸ್ಥಿತಿ ಇದ್ದು, ಜನರು ಪರಿತಪಿಸುತ್ತಿದ್ದಾರೆ. ಈ ಸಂಕಷ್ಟದಿಂದ ರಾಜ್ಯದ ಜನರನ್ನು ಪಾರು ಮಾಡಬೇಕು, ಉತ್ತಮ ಮಳೆ ಬೆಳೆಯಾಗಿ ಶಾಂತಿ, ಸೌಹಾರ್ದತೆಯಿಂದ ಜನರು ಬಾಳುವೆ ಮಾಡುವಂತಾಗಲಿ ಎಂದು ಶ್ರೀಕಂಠೇಶ್ವರನಲ್ಲಿ ಪ್ರಾರ್ಥನೆ ಸಲ್ಲಿಸಿರುವುದಾಗಿ ತಿಳಿಸಿದರು.

ಜೆಡಿಎಸ್ ಪಕ್ಷ ಬಿಜೆಪಿಯೊಂದಿಗೆ ಬರೀ ಲೋಕಸಭೆ ಚುನಾವಣೆಗೆ ಮಾತ್ರ ಮೈತ್ರಿ ಮಾಡಿಕೊಂಡಿಲ್ಲ. ಬಿಜೆಪಿ ಪಕ್ಷದ ರಾಷ್ಟ್ರಾಧ್ಯಕ್ಷರು ಮತ್ತು ಪ್ರಧಾನಿ ಮೋದಿ ಅವರು ಸ್ಥಳೀಯ ಚುನಾವಣೆ ಮತ್ತು ರಾಜ್ಯ, ರಾಷ್ಟ್ರ ಚುನಾವಣೆ ಸೇರಿದಂತೆ ಎಲ್ಲಾ ಚುನಾವಣೆಗಳಲ್ಲಿ ಹೊಂದಾಣಿಕೆ ಮಾಡಿಕೊಂಡು ಹೋಗಬೇಕು ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿರುವ ಕಾರಣ ಪಕ್ಷದ ಹಂತದಲ್ಲಿ ಚರ್ಚೆ ನಡೆಯುತ್ತಿದೆ. ಅಲ್ಲದೆ ಸಿ.ಎಂ.ಇಬ್ರಾಹಿಂ ಕೂಡ ಜೆಡಿಎಸ್ ರಾಷ್ಟ್ರಾಧ್ಯಕ್ಷ ಎಚ್.ಡಿ. ದೇವೇಗೌಡ ನೇತೃತ್ವದ ಸಭೆಯಲ್ಲಿ ಮೈತ್ರಿಗೆ ಒಪ್ಪಿ ಸಹಿ ಹಾಕಿದ್ದಾರೆ. ಅಲ್ಲದೆ ಅವರು ಹಿರಿಯ ನಾಯಕರಾಗಿದ್ದು, ಇನ್ನೂ ಕಾಲ ಮಿಂಚಿಲ್ಲ ಅವರ ಜೊತೆ ಮಾತುಕತೆ ನಡೆಸಿ ಪಕ್ಷದಲ್ಲೇ ಉಳಿಸಿಕೊಳ್ಳುವ ಪ್ರಯತ್ನ ನಡೆಸಲಾಗುವುದು ಎಂದರು.

ಇದೇ ಸಂದರ್ಭದಲ್ಲಿ ಜೆಡಿಎಸ್ ಜಿಲ್ಲಾಧ್ಯಕ್ಷ ನರಸಿಂಹಸ್ವಾಮಿ, ಮುಖಂಡರಾದ ಮಸಗೆ ರಾಜು, ಸಂಜುಗೌಡ, ಯೋಗೀಂದ್ರ ಸೇರಿದಂತೆ ಜೆಡಿಎಸ್ ಪಕ್ಷದ ಕಾರ್ಯಕರ್ತರು ಇದ್ದರು.

ಸಂಗೀತ ವಿವಿಗೆ ಎಂ.ಆರ್.ರಾಜೇಶ್ ಕುಲಸಚಿವ



ಮೈಸೂರು, ಅ. 28– ಕರ್ನಾಟಕ ರಾಜ್ಯ ಡಾ. ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯಕ್ಕೆ ಎಂ. ಆರ್.ರಾಜೇಶ್ ಅವರನ್ನು ನೇಮಿಸಲಾಗಿದೆ ಎಂದು ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯ ಸರ್ಕಾರದ ಅಧೀನ ಕಾರ್ಯದರ್ಶಿಗಳಾದ ಉಮಾದೇವಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮಹರ್ಷಿ ವಾಲ್ಮೀಕಿ ಅವರಂತೆ ನಾವು ಸಾಧನೆ ಮಾಡಬೇಕು



ತಿ.ನರಸೀಪುರ, ಅ.28– ಮಹರ್ಷಿ ವಾಲ್ಮೀಕಿ ರಾಮಾಯಣ ರಚಿಸಿದರು. ನಾವೂ ಅವರಂತೆ ಸಾಧನೆ ಮಾಡುವ ಚಿಂತನೆಗಳನ್ನು ಅಳವಡಿಸಿಕೊಳ್ಳಬೇಕು ಎಂದು ಪ್ರೇರಣಾ ಶಿಕ್ಷಣ ಮತ್ತು ಗ್ರಾಮೀಣಾಭಿವೃದ್ಧಿ ಸಂಸ್ಥೆಯ ಸಂಸ್ಥಾಪಕಿ ಮೊಳಕಾಲ್ಮೂರು ಜಯಲಕ್ಷ್ಮಿ ನಾಯಕ್ ಕರೆ ಕೊಟ್ಟರು.

ತಾಲೂಕು ಆಡಳಿತ ಮತ್ತು ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ, ರಾಷ್ಟ್ರೀಯ ಹಬ್ಬಗಳ ಆಚರಣೆ ಸಮಿತಿ, ಹಾಗೂ ತಾಲೂಕು ನಾಯಕರ ಸಂಘದ ಸಂಯುಕ್ತ ಆಶ್ರಯದಲ್ಲಿ ಪಟ್ಟಣದ ವಿದ್ಯೋದಯ ಕಾಲೇಜು ಆವರಣದಲ್ಲಿ ನಡೆದ ಶ್ರೀ ಮಹರ್ಷಿ ವಾಲ್ಮೀಕಿ ಜಯಂತ್ಯುತ್ಸವ ಸಮಾರಂಭದಲ್ಲಿ ಅವರು ಮಾತನಾಡಿದರು.

ಡಾ. ಬಿ. ಆರ್. ಅಂಬೇಡ್ಕರ್ ಅವರು ನಮಗೆ ಸಂವಿಧಾನದ ಮೂಲಕ ಮೀಸಲಾತಿಯನ್ನು ಕಲ್ಪಿಸಿಕೊಡದಿದ್ದರೆ ನಮ್ಮ ಸಮಾಜ ಇಂದು ಕಾಡಿನಲ್ಲಿ ವಾಸಿಸುವಂತಾಗಿತ್ತು. ಇದನ್ನು ಅರಿತು ಎಸ್ಸಿ ಎಸ್ಟಿ ಹಾಗೂ ಒಬಿಸಿ ವರ್ಗದವರು ಒಗ್ಗಟ್ಟಾಗುವ ಮೂಲಕ ರಾಜಕೀಯದಲ್ಲಿ ಗುರ್ತಿಸಿಕೊಂಡು ಉನ್ನತ ಸ್ಥಾನಮಾನಗಳನ್ನು ಅಲಂಕರಿಸಿದಾಗ ಮಾತ್ರ ನಾವು ಮೇಲೆ ಬರಲು ಸಾಧ್ಯ ಎಂದು ಅಭಿಪ್ರಾಯಪಟ್ಟರು

ತಹಶೀಲ್ದಾರ್ ಸುರೇಶ್ ಆಚಾರ್ ಮಾತನಾಡಿದರು. ಕಾರ್ಯಕ್ರಮಕ್ಕೂ ಮುನ್ನ ಪಟ್ಟಣದ ಶ್ರೀ ಗುಂಜಾ ಲಕ್ಷ್ಮಿ ನರಸಿಂಹಸ್ವಾಮಿ ದೇವಾಲಯದ ಮುಂಭಾಗ ಮೆರವಣಿಗೆಗೆ ರಾಷ್ಟ್ರೀಯ ಹಬ್ಬಗಳ ಆಚರಣೆ ಸಮಿತಿಯ ಅಧ್ಯಕ್ಷ ಹಾಗೂ ತಹಶೀಲ್ದಾರ್ ಟಿ. ಜಿ. ಸುರೇಶಾಚಾರ್ ಚಾಲನೆ ನೀಡಿದರು, ಮೆರವಣಿಗೆಯಲ್ಲಿ ವಿವಿಧ ಕಲಾತಂಡಗಳಿಂದ ಕುಣಿತ ಹಾಗೂ ಮಹರ್ಷಿ ವಾಲ್ಮೀಕಿ ಅವರ ಭಾವಚಿತ್ರಗಳ ಮೆರವಣಿಗೆ ನಡೆಯಿತು. ಈ ಸಂದರ್ಭದಲ್ಲಿ ಮಾಜಿ ಶಾಸಕ ಡಾ. ಯತೀಂದ್ರ ಸಿದ್ದರಾಮಯ್ಯ, ಕಾಂಗ್ರೆಸ್ ಯುವ ಮುಖಂಡ ಸುನಿಲ್ ಬೋಸ್, ಪಿ ಕಾರ್ಡ್ ಬ್ಯಾಂಕ್ ಮಾಜಿ ಅಧ್ಯಕ್ಷ ಕೆ ವಜ್ರೇಗೌಡ ಮತ್ತಿತರರು ಭಾಗವಹಿಸಿದ್ದರು,

ಇದೇ ಸಂದರ್ಭದಲ್ಲಿ ವಿವಿಧ ಕ್ಷೇತ್ರದಲ್ಲಿ ಸೇವೆ ಸಲ್ಲಿಸಿದ ಹಾಗೂ ಅತಿ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳನ್ನು ಸನ್ಮಾನಿಸಲಾಯಿತು. ವೆಂಕಟರಮಣ, ಆರ್.ರಾಜು, ಹರಿಪ್ರಿಯಾ ರಾಜಪ್ಪಾಜಿ, ಅಮೋಘ ನಾಯಕ್,ಮಾಲಿನಿ ಅವರನ್ನು ಸನ್ಮಾನಿಸಲಾಯಿತು

ಕಾರ್ಯಕ್ರಮದಲ್ಲಿ ಜಿ.ಪಂ ಮಾಜಿ ಸದಸ್ಯರಾದ ಸುಧಾಮಣಿ, ಹೊನ್ನನಾಯಕ, ಮಂಜುನಾಥ್, ಕೆ.ಸಿ.ಲೋಕೇಶ್ ನಾಯಕ್, ರೇಣುಕಾ, ತಾಲೂಕು ನಾಯಕರ ಸಂಘದ ಅಧ್ಯಕ್ಷ ಚಿಕ್ಕಣ್ಣ, ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಎಮ್.ವಿ. ಶಿವಶಂಕರ್ ಮೂರ್ತಿ, ತಹಸಿಲ್ದಾರ್ ಸುರೇಶ ಆಚಾರ್, ತಾ.ಪಂ ಇಓ ಸಿ.ಕೃಷ್ಣ, ಬಿಇಓ.ಜಿ. ಶೋಭ, ಪರಿಶಿಷ್ಟ ವರ್ಗ ಕಲ್ಯಾಣ ಇಲಾಖೆಯ ಅಧಿಕಾರಿ ಕೋಮಲ, ಮುಖಂಡರಾದ ಮನ್ಸೂರ್ ಅಲಿ, ಕೆ. ಎನ್. ಪ್ರಭುಸ್ವಾಮಿ, ಅಂಬೇಡ್ಕರ್ ಅಭಿವೃದ್ಧಿ ಸಂಘದ ಅಧ್ಯಕ್ಷ ಕರುಹಟ್ಟಿ ಮಹದೇವಯ್ಯ, ಬಾಬು ಜಗಜೀವನ್ ರಾಮ್ ಸಂಘದ ಅಧ್ಯಕ್ಷ ಪುಟ್ಟಯ್ಯ, ಮೂಗೂರು ಸಿದ್ದರಾಜು, ವಿಕ್ರಾಂತ್ ಮಹದೇವು, ಪುರಸಭಾ ಅಧ್ಯಕ್ಷ ಟಿ. ಎಂ.ನಂಜುಂಡಸ್ವಾಮಿ, ಚಿನ್ನಸ್ವಾಮಿ, ಗದ್ದೆಮೋಳೆ ಸಿದ್ದರಾಜು, ಶ್ರೀ ರಂಗರಾಜಪುರ ರಾಜೇಶ್, ವ್ಯಾಸರಾಜಪುರ ಸುಂದರ್, ಕೊಳತ್ತೂರು ಕುಮಾರ್, ಮೂಗೂರು ಕುಮಾರಸ್ವಾಮಿ ಹಾಜರಿದ್ದರು.


ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನ

ಹೆಚ್.ಡಿ.ಕೋಟೆ, ಅ.28– ತಾಲೂಕು ನಾಯಕ ನೌಕರರ ಸಂಘದ ವತಿಯಿಂದ ಹೆಚ್.ಡಿ.ಕೋಟೆ ಮತ್ತು ಸರಗೂರು ತಾಲೂಕು ಜನಾಂಗದ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಲು ಅರ್ಜಿ ಆಹ್ವಾನಿಸಲಾಗಿದೆ. 2022–23ನೇ ಸಾಲಿನ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಶೇ.95 ಮತ್ತು ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಶೇ.90 ಹಾಗೂ ಪದವಿ ಪರೀಕ್ಷೆಯಲ್ಲಿ ಶೇ.85ರಷ್ಟು ಅಂಕಗಳಿಸಿದ ವಿದ್ಯಾರ್ಥಿಗಳು ಸ್ವವಿವರಗಳೊಂದಿಗೆ ನ.10ರೊಳಗೆ ಅರ್ಜಿ ಸಲ್ಲಿಸಬೇಕು.

ಮಾಹಿತಿಗಾಗಿ ಸಂಘದ ಅಧ್ಯಕ್ಷ ಸಿದ್ದರಾಜು (ಮೊ.ಸಂ: 98459 59727), ಕಾರ್ಯದರ್ಶಿ ಕೃಷ್ಣನಾಯಕ (9964460082) ಹಾಗೂ ಖಜಾಂಚಿ ಚೆನ್ನನಾಯಕ (9916017669) ಅವರನ್ನು ಸಂಪರ್ಕಿಸಬಹುದು ಎಂದು ಎಚ್.ಡಿ. ಕೋಟೆ ಮತ್ತು ಸರಗೂರು ತಾಲೂಕು ಸಂಘದ ಅಧ್ಯಕ್ಷ ಸಿದ್ದರಾಜು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ವಾಲ್ಮೀಕಿ ಅವರ ರಾಮಾಯಣ ಮಹಾನ್ ಗ್ರಂಥ

• ವಾಲ್ಮೀಕಿ ಜಯಂತಿಯಲ್ಲಿ ಶಾಸಕ ದರ್ಶನ್ ಧ್ರುವನಾರಾಯಣ್ ಬಣ್ಣನೆ • ಕಲಾತಂಡಗಳೊಂದಿಗೆ ಆಕರ್ಷಕ ಮೆರವಣಿಗೆ



ನಂಜನಗೂಡು, ಅ.28– ಮಹರ್ಷಿ ವಾಲ್ಮೀಕಿ ಅವರು ರಚಿಸಿರುವ ರಾಮಾಯಣ ಕೃತಿಯು ಸಮಾಜದಲ್ಲಿ ಮಾನವ ಹೇಗೆ ಆದರ್ಶ ಗುಣಗಳನ್ನು ಪಾಲಿಸಿಕೊಂಡು ಜೀವನ ಸಾಗಿಸಬೇಕು ಎಂಬ ಸಂದೇಶವನ್ನು ಮನುಕುಲಕ್ಕೆ ಸಾರುವ ಕೃತಿಯಾಗಿರುವ ಕಾರಣ ಈ ಗ್ರಂಥ ಇಡೀ ವಿಶ್ವಕ್ಕೆ ಮಹಾನ್ ಗ್ರಂಥವಾಗಿದೆ ಎಂದು ಶಾಸಕ ದರ್ಶನ್ ಧ್ರುವನಾರಾಯಣ್ ಬಣ್ಣಿಸಿದರು.

ನಗರದ ಶ್ರೀಕಂಠೇಶ್ವರ ಕಲಾಭವನದ ಆವರಣದಲ್ಲಿ ತಾಲೂಕು ಆಡಳಿತ ಮತ್ತು ರಾಷ್ಟ್ರೀಯ ಹಬ್ಬಗಳ ಆಚರಣಾ ಸಮಿತಿ ವತಿಯಿಂದ ಏರ್ಪಡಿಸಿದ್ದ ಶ್ರೀ ಮಹರ್ಷಿ ವಾಲ್ಮೀಕಿ ಅವರ ಜಯಂತಿ ಮಹೋತ್ಸವವನ್ನು ಉದ್ಘಾಟಿಸಿ ಮಾತನಾಡಿದರು. ವಾಲ್ಮೀಕಿ ಮಹರ್ಷಿಗಳ ರಾಮಾಯಣವು ಸೋದರತ್ವ, ಸಮಾನತೆ ಬೋಧಿಸಿದೆ. ಜೊತೆಗೆ ಕೌಟುಂಬಿಕ ವ್ಯವಸ್ಥೆಯಲ್ಲಿ ಸಂಬಂಧಗಳು ಹೇಗೆ ಆದರ್ಶನೀಯವಾಗಿರಬೇಕು ಎಂಬ ಸಾಮಾಜಿಕ ಸಂದೇಶವನ್ನು ಸಾರುವ ಕೃತಿಯಾಗಿದೆ ಎಂದ ಅವರು, ನಾವೆಲ್ಲರೂ ಮಹರ್ಷಿ ವಾಲ್ಮೀಕಿ ಅವರ ತತ್ವ, ಆದರ್ಶಗಳನ್ನು ನಮ್ಮ ಜೀವನದಲ್ಲಿ ಅಳವಡಿಸಿಕೊಂಡು ಎಲ್ಲರೂ ಒಂದೇ ಎಂಬ ಭಾವನೆಯಲ್ಲಿ ಬಾಳುವೆ ಮಾಡಬೇಕೆಂದು ಕರೆ ನೀಡಿದರು.

ಆಶ್ರಯ ಸಮಿತಿ ಅಧ್ಯಕ್ಷ ಹಾಗೂ ಮಾಜಿ ಶಾಸಕ ಯತೀಂದ್ರಸಿದ್ದರಾಮಯ್ಯ ಮಾತನಾಡಿ, ಶ್ರೇಣೀಕೃತ ಜಾತಿ ವ್ಯವಸ್ಥೆಯಡಿ ಶೋಷಿತರನ್ನು ಶಿಕ್ಷಣದಿಂದ ವಂಚಿತರನ್ನಾಗಿ ಮಾಡಿತ್ತು. ಶೋಷಿತರು ತಮ್ಮ ಸಮುದಾಯದ ಉನ್ನತ ವ್ಯಕ್ತಿಯನ್ನು ಆದರ್ಶವನ್ನಾಗಿ ಇಟ್ಟುಕೊಂಡು ಶೋಷಿತರೂ ಕೂಡ ಶಿಕ್ಷಣ ಪಡೆದು ಎಲ್ಲರಂತೆ ಸಾಧನೆಗೈಯ್ಯಬಹುದು ಎಂಬ ಕೀಳರಿಮೆ ಭಾವನೆಯನ್ನು ಹೋಗಲಾಡಿಸುವ ಸಲುವಾಗಿ ಸರ್ಕಾರ ಪ್ರತಿ ಸಮುದಾಯದಲ್ಲಿ ಪ್ರತೀಕವಾಗಿರುವವರ ಜಯಂತಿಯನ್ನು ಆಚರಿಸುವ ಮೂಲಕ ಸ್ವಾಭಿಮಾನವನ್ನು ತುಂಬುತ್ತಿದೆ ಎಂದರು.

ಈ ಶ್ರೇಣೀಕೃತ ಜಾತಿ ವ್ಯವಸ್ಥೆಯಿಂದಾಗಿ ಸಮಾಜ ಒಡೆದಿದೆ. ಅವಕಾಶ ವಂಚಿತರನ್ನು ಮೇಲೆತ್ತಲು ಸರ್ಕಾರ ಮೀಸಲಾತಿ ನೀಡಿದ್ದರೂ ಸಹ ಜನಸಂಖ್ಯೆಗೆ ಅನುಗುಣವಾಗಿ ಮೀಸಲಾತಿ ಜಾರಿಯಾಗದ ಕಾರಣ ಶೋಷಿತ ವರ್ಗಗಳು ಪೂರ್ಣ ಮಟ್ಟದ ಸುಧಾರಣೆ ಕಂಡಿಲ್ಲ, ಶೋಷಿತರು ಸಾಮಾಜಿಕವಾಗಿ ಮುನ್ನೆಲೆಗೆ ಬರಲು ಶಿಕ್ಷಣವೇ ಪ್ರಮುಖ ಅಸ್ತ್ರ. ಆದ್ದರಿಂದ ಶೋಷಿತ ವರ್ಗಗಳು ಶಿಕ್ಷಣ ಪಡೆದು ತಮ್ಮ ಹಕ್ಕುಗಳ ಬಗ್ಗೆ ಹೋರಾಟ ನಡೆಸುವ ಮೂಲಕ ಜಾಗೃತಗೊಳ್ಳಬೇಕು. ಸರ್ಕಾರಗಳೂ ಸಹ ಹಿಂದುಳಿದ ವರ್ಗಗಳ ಕಲ್ಯಾಣಕ್ಕಾಗಿ ಕಾರ್ಯಕ್ರಮಗಳನ್ನು ರೂಪಿಸಬೇಕಿದೆ ಎಂದರು.

ಮುಖ್ಯ ಭಾಷಣಕಾರರಾಗಿದ್ದ ಪ್ರೊ.ಕಾಳೇಗೌಡ ನಾಗವಾರರವರು ಮಾತನಾಡಿ, ವಾಲ್ಮೀಕಿರವರ ರಾಮಾಯಣ ಕೃತಿಯ ಆಶಯಗಳು ನಾಗರಿಕ ಸಮಾಜದ ನಿರ್ಮಾಣಕ್ಕೆ ಮುನ್ನುಡಿ ಬರೆದಿವೆ ಎಂದರು.

ಕಾರ್ಯಕ್ರಮದಲ್ಲಿ ವಿವಿಧ ಕ್ಷೇತ್ರದಲ್ಲಿ ಸಾಧನೆಗೈದ ಸಾಧಕರನ್ನು ಸನ್ಮಾನಿಸಲಾಯಿತು ಹಾಗೂ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ತಾಲೂಕಿನಲ್ಲಿ ಅತಿ ಹೆಚ್ಚು ಅಂಕ ಗಳಿಸಿದ ವಿದ್ಯಾರ್ಥಿಗಳನ್ನು ಪುರಸ್ಕರಿಸಲಾಯಿತು.

ಅದ್ದೂರಿ ಮೆರವಣಿಗೆ : ಇದಕ್ಕೂ ಮುನ್ನ ನಗರದ ಜೂನಿಯರ್ ಕಾಲೇಜಿನ ಆವರಣದಲ್ಲಿ ಶಾಸಕ ದರ್ಶನ್‌ಧ್ರುವನಾರಾಯಣ್ ಮಹರ್ಷಿ ವಾಲ್ಮೀಕಿ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡುವ ಮೂಲಕ ಅದ್ದೂರಿ ಮೆರವಣಿಗೆಗೆ ಚಾಲನೆ ನೀಡಿದರು.

ಆಕರ್ಷಕ ಮೆರವಣಿಗೆಯಲ್ಲಿ ಗಾರುಡಿ ಗೊಂಬೆ, ನಗಾರಿ, ಡೊಳ್ಳು ಕುಣಿತ, ವೀರಗಾಸೆ, ಬೀಸು ಕಂಸಾಳೆ, ನಾದಸ್ವರ, ಕತ್ತಿವರಸೆ, ಬೀಸು ಕಂಸಾಳೆ ಸೇರಿದಂತೆ ವಿವಿಧ ಜಾನಪದ ಕಲಾ ತಂಡದೊಂದಿಗೆ ನಗರದ ಪ್ರಮುಖ ರಸ್ತೆಗಳಲ್ಲಿ ಮೆರವಣಿಗೆ ಮಾಡಲಾಯಿತು. ಆರ್.ಪಿ ರಸ್ತೆಯ ಮೂಲಕ ಸಾಗಿದ ಮೆರವಣಿಗೆ ಶ್ರೀ ಕಂಠೇಶ್ವರ ಕಲಾಭವನದ ವೇದಿಕೆ ಸಮಾರಂಭದಲ್ಲಿ ಅಂತ್ಯಗೊಂಡಿತು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ ಚಿತ್ರಮಂದಿರ	(ದೂ: 2521923)
ಲಿಯೋ (ತ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಘೋಸ್ಟ್ (ಕ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಲಿಯೋ (ಹಿ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಲಿಯೋ (ಕ)	2 ಪ್ರದರ್ಶನಗಳು
ಲಿಯೋ (ತ)	2 ಪ್ರದರ್ಶನಗಳು
ಗಾಯಿತ್ರಿ	
ಘೋಸ್ಟ್ (ಕ)	4 ಪ್ರದರ್ಶನಗಳು
ರಾಜಕಮಲ್	
ಭಗವಂತ್ ಕೇಸರಿ (ತೆ)	4 ಪ್ರದರ್ಶನಗಳು
ಸಂಗಂ	
ಟಗರುಪಲ್ಯ(ಕ)	4 ಪ್ರದರ್ಶನಗಳು
ಲಿಡೋ	
ಲಿಯೋ (ಕ)	2 ಪ್ರದರ್ಶನಗಳು
ಲಿಯೋ (ತ)	2 ಪ್ರದರ್ಶನಗಳು
ತಿಬ್ಬಾದೇವಿ	
ಲಿಯೋ(ತ)	4 ಪ್ರದರ್ಶನಗಳು
ಪ್ರಭಾ	
ರೋನಿ (ಕ)	2 ಪ್ರದರ್ಶನಗಳು
ಇನಾಮ್‌ದಾರ್(ಕ)	2 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1	ಲಿಯೋ (ತ): ಬೆ.10ಕ್ಕೆ, ಸಂ.4ಕ್ಕೆ, ರಾ.10ಕ್ಕೆ, ಘೋಸ್ಟ್ (ಕ): ಮ.1.10ಕ್ಕೆ, ರಾ.7.10ಕ್ಕೆ.
ಸ್ಕ್ರೀನ್ 2	ದಸರಾ ಚಿತ್ರಗಳು: ಬೆ.10ಕ್ಕೆ, ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ಗಣಪತ್ (ಹಿಂ): ರಾ.10.20ಕ್ಕೆ.
ಸ್ಕ್ರೀನ್ 3	ಯಾರಿಯನ್ 2 (ಹಿಂ): ಬೆ.10.05ಕ್ಕೆ, ಗಣಪತ್ (ಹಿಂ): ಮ.1ಕ್ಕೆ, ಟೈಗರ್ ನಾಗೇಶ್ವರ್ ರಾವ್ (ತೆ): ಮ.3.35ಕ್ಕೆ, ರಾ.7ಕ್ಕೆ, ಭಗವಂತ್ ಕೇಸರಿ (ತೆ): ರಾ.10.25ಕ್ಕೆ.
ಸ್ಕ್ರೀನ್ 4	ಘೋಸ್ಟ್ (ಕ): ಬೆ.10.15ಕ್ಕೆ, ಸಂ.4.10ಕ್ಕೆ, ರಾ.10.10ಕ್ಕೆ, ಲಿಯೋ (ತ): ಮ.1ಕ್ಕೆ, ರಾ.7ಕ್ಕೆ.

ಐನಾಕ್ಸ್ ಮೂವೀಸ್
INOX LIVE THE MOVIE
ದೂ : 2533444 / 2433456

ಸ್ಕ್ರೀನ್ 1	ಲಿಯೋ (ತ): ಬೆ.9.35ಕ್ಕೆ, ಮ.3.55ಕ್ಕೆ, ಘೋಸ್ಟ್ (ಕ): ಮ.1ಕ್ಕೆ, ರಾ.7.20ಕ್ಕೆ, ಗಣಪತ್ (ಹಿಂ): ರಾ.10.15ಕ್ಕೆ.
ಸ್ಕ್ರೀನ್ 2	ಲಿಯೋ (ತ): ರಾ.10.20ಕ್ಕೆ.
ಸ್ಕ್ರೀನ್ 3	ಭಗವಂತ್ ಕೇಸರಿ (ತೆ): ರಾ.10.30ಕ್ಕೆ.
ಸ್ಕ್ರೀನ್ 4	ಟೈಗರ್ ನಾಗೇಶ್ವರ್ ರಾವ್ (ತೆ): ರಾ.10.10ಕ್ಕೆ.

ಮೈಸೂರು ವಿಷನ್ ಸಿನಿಮಾ
ದೂ : 0821–2973519

ಸ್ಕ್ರೀನ್ 1	ಪರಿಶುದ್ಧಂ (ಕ): ಬೆ.10.30ಕ್ಕೆ, ಹನಿಮೂನ್ ಇನ್ ಬ್ಯಾಂಕಾಕ್(ಕ): ಮ.1.30ಕ್ಕೆ, ದ್ವಂದ್ವ (ಕ): ಸಂ.4.20ಕ್ಕೆ, ಬನ್ ಟೀ (ಕ): ಸಂ.6.45ಕ್ಕೆ, ಸಪ್ತ ಸಾಗರದಾಚೆ ಎಲ್ಲೋ (ಕ): ರಾ.9.15ಕ್ಕೆ.
ಸ್ಕ್ರೀನ್ 2	ಜವಾನ್ (ಹಿಂ): ಸಂ.4.15ಕ್ಕೆ, ರಾ.9.15ಕ್ಕೆ.
ಸ್ಕ್ರೀನ್ 3	ದಿ ನನ್ 2 (ಇಂ): ಸಂ.4.45ಕ್ಕೆ, ಜವಾನ್ (ಹಿಂ): ರಾ.7ಕ್ಕೆ.
ಸ್ಕ್ರೀನ್ 4	ಜವಾನ್ (ಹಿಂ): ಬೆ.10.30ಕ್ಕೆ, ಸಪ್ತ ಸಾಗರದಾಚೆ ಎಲ್ಲೋ (ಕ): ಮ.1.45ಕ್ಕೆ, ಸಂ.4.45ಕ್ಕೆ, ದಿ ನನ್ 2 (ಇಂ): ರಾ.7.35ಕ್ಕೆ.

ಪಿವಿಆರ್ ಸಿನಿಮಾಸ್
PVR CINEMAS
ಮೊ.ನಂ: 8951357139
ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ,

ಭಗವಂತ್ ಕೇಸರಿ (ತೆ): ಮ.1.05ಕ್ಕೆ, ಮ.3.20ಕ್ಕೆ, ರಾ.10.30ಕ್ಕೆ, ಗಣಪತ್ (ಹಿಂ): ಬೆ.9.20ಕ್ಕೆ, ಮ.12.20ಕ್ಕೆ, ಮ.3.20ಕ್ಕೆ, ಸಂ.6.45ಕ್ಕೆ, ರಾ.9.45ಕ್ಕೆ, ಘೋಸ್ಟ್ (ಕ): ಬೆ.9.30ಕ್ಕೆ, ಮ.12.25ಕ್ಕೆ, ಸಂ.4.30ಕ್ಕೆ, ರಾ.7.25ಕ್ಕೆ, ರಾ.10.20ಕ್ಕೆ, ಲಿಯೋ (ಕ): ಮ.12.15ಕ್ಕೆ, ಲಿಯೋ (ತ): ಬೆ.8.20ಕ್ಕೆ, ಮ.11.45ಕ್ಕೆ, ಮ.3.10ಕ್ಕೆ, ಸಂ.6.15ಕ್ಕೆ, ಸಂ.6.35ಕ್ಕೆ, ರಾ.10ಕ್ಕೆ, ಲಿಯೋ (ತ): ಬೆ.8.50ಕ್ಕೆ, ಮ.12.15ಕ್ಕೆ, ಮ.3.40ಕ್ಕೆ, ರಾ.7.05ಕ್ಕೆ, ರಾ.10.30ಕ್ಕೆ, ಟೈಗರ್ ನಾಗೇಶ್ವರ್ ರಾವ್ (ತೆ): ಬೆ.8.35ಕ್ಕೆ, ಮ.3.40ಕ್ಕೆ, ರಾ.9.40ಕ್ಕೆ, ಯಾರಿಯನ್ 2 (ಹಿಂ): ಬೆ.9.55ಕ್ಕೆ, ರಾ.7.20ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಮೈಸೂರು ರೇಸುಗಳು

16ನೇ ದಿನ, ಭಾನುವಾರ 29-10-2023

ಇಂದಿನ ರೇಸಿಗೆ ನಮ್ಮ ಆಯ್ಕೆ

(ಮೊದಲನೇ ರೇಸ್ ಮಧ್ಯಾಹ್ನ 1.30 ಗಂಟೆಗೆ)

I. ಡೆಲ್ಲಿ ರೇಸ್ ಕ್ಲಬ್ ಟ್ರೋಫಿ ಡಿ2–1200 ಮೀ. ರೇಟೆಡ್ 00 ರಿಂದ 25. (ಮೈಸೂರ್ ಬ್ರೇಡ್ ಹಾರ್ಸ್). ಮ.1.30ಕ್ಕೆ
1. ಯುನಿಟಿ 2. ಕೋಡ್ ಆಫ್ ಹಾನರ್ 3. ಕಂಟ್ರೀಸ್ ಫೇಮ್

II. ಡೆಲ್ಲಿ ರೇಸ್ ಕ್ಲಬ್ ಟ್ರೋಫಿ ಡಿ1–1200 ಮೀ. ರೇಟೆಡ್ 00 ರಿಂದ 25. (ಮೈಸೂರ್ ಬ್ರೇಡ್ ಹಾರ್ಸ್). ಮ.2.00ಕ್ಕೆ
1. ಶೂಟಿಂಗ್ ವೀನಸ್ 2. ಕಂಟ್ರೀಸ್ ಮೇಜರ್ 3. ಮಿಸ್ಟಿಕಲ್ ಮರ್ಲಿನ್

III. ರಾಯಲ್ ಕಲ್ಕತ್ತ ಟರ್ಫ್ ಕ್ಲಬ್ ಟ್ರೋಫಿ–1100 ಮೀ. ರೇಟೆಡ್ 20 ರಿಂದ 45. ಮ.2.30ಕ್ಕೆ
1 ಸ್ಟೋನ್ ಹೌಸ್ 2. ಅಲ್ಟಿಮೇಟ್ ಸ್ಟ್ರೈಕರ್ 3 ಪವರ್ ಆಫ್ ಥಿಯಾ

IV. ಮದ್ರಾಸ್ ರೇಸ್ ಕ್ಲಬ್ ಟ್ರೋಫಿ–1400 ಮೀ. ರೇಟೆಡ್ 20 ರಿಂದ 45. ಸಂ.3.00ಕ್ಕೆ
1. ಐಕ್ಯಾನ್ 2. ಸ್ಕೈಸ್ಟ್ರಾಮ್ 3. ಇಮ್ಮಾರ್ಟಲ್ ಬ್ಯೂಟಿ

V. ಬೆಂಗಳೂರ್ ಟರ್ಫ್ ಕ್ಲಬ್ ಟ್ರೋಫಿ–1200 ಮೀ. ರೇಟೆಡ್ 80 ಮತ್ತು ಮೇಲ್ಪರ್ಗ. ಸಂ3.30ಕ್ಕೆ
1. ಸೈಜಿ ಕರೇಜಿಯಸ್ 2. ಆಸ್ತಾರ 3. ಪಾಲಿಷ್ಡ್ ಗರ್ಲ್

VI. ix ಬೆಟ್ ಮೈಸೂರ್ ಡರ್ಬಿ 2023–2000 ಮೀ. 3 ವರ್ಷ (ಟರ್ಮ್ಸ್) ಸಂ.4.00ಕ್ಕೆ
1 ಟಚ್ ಆಫ್ ಗ್ರೇ 2. ಮ್ಯಾಗನಸ್ 3. ರೂಲಿಂಗ್ ಡೈನಸ್ಟಿ

VII. ರಾಯಲ್ ವೆಸ್ಟರ್ನ್ ಇಂಡಿಯಾ ಟರ್ಫ್ ಕ್ಲಬ್ ಲಿ. ಟ್ರೋಫಿ–1200 ಮೀ. ರೇಟೆಡ್ 20 ರಿಂದ 45. ಸಂ.4.30ಕ್ಕೆ
1 ಸ್ಪಿರಿಚಿಯಲ್ ಫೋರ್ಸ್ 2 ದ ಕಿಂಗ್ ಎನ್ ಐ 3. ಡೆವಿಲ್ಸ್ ಮ್ಯಾಜಿಕ್

VIII. ಹೈದರಾಬಾದ್ ರೇಸ್ ಕ್ಲಬ್ ಟ್ರೋಫಿ–1400 ಮೀ. ರೇಟೆಡ್ 40 ರಿಂದ 65. ಸಂ.5.00ಕ್ಕೆ
1 ಗಿಲ್‌ಡೆಡ್ ಬಟರ್ ಫ್ಲೈ 2 ಅರಾಲಿನಾ 3. ಮ್ಯಾಜಿಕ್ ಸರ್ಕಲ್

ದಿನದ ಅತ್ಯುತ್ತಮ........	: ಟಚ್ ಆಫ್ ಗ್ರೇ
ಡಬ್ಬಲ್........	: ಶೂಟಿಂಗ್ ವೀನಸ್, ಸೈಜಿ ಕರೇಜಿಯಸ್
ಜಾಕ್‌ಪಾಟ್........	: 4, 5, 6, 7 ಮತ್ತು 8
ಮಿನಿ ಜಾಕ್‌ಪಾಟ್........	: 5, 6, 7 ಮತ್ತು 8
I ಟ್ರಿಬಲ್........	: 1, 2 ಮತ್ತು 3
II ಟ್ರಿಬಲ್........	: 3, 4 ಮತ್ತು 5
III ಟ್ರಿಬಲ್........	: 6, 7 ಮತ್ತು 8
ಎಕ್ಸ್‌ಆಕ್ಟ್........	: 1 ರಿಂದ 8

ಟಿಪ್‌ಸ್ಟರ್ ಪಿಜಿಸಿ